ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 11 | ಸಂಚಿಕೆ 06 | ಜನವರಿ 30–ಫೆಬ್ರವರಿ 05, 2017 | ಪುಟ 16 | ರೂ.10/-

Web : www.janashakthi.co.in e-mail : janashakthi2007@gmail.com



ಪದ್ಮ ಶ್ರೀ ಸುಕ್ರಿ ಅಜ್ಜಿ

"ಗಣರಾಜ್ಯ ಉಳಿಸಿ ಜನರಾಜ್ಯ ಬೆಳೆಸಿ"







ಸ್ಕೀಂ ಕಾರ್ಮಿಕರ ಭರ್ಜರಿ ಪ್ರತಿಭಟನೆ

beml

NEW FRONTIERS. NEW DREAMS

ಅಂಬಾನಿಗೆ ಕೊಡಲು ಸ್ಕೆಚ್

ಕಂಬಳ ನಿಷೇಧ:



ಪ್ರಗತಿಪರರ ನಿಲುವು ಏನಿರಬೇಕು?



ಗಡಬನಹಳ್ಳಿ : ಹೆಣ ಹೂಳಿದ ದಲಿತರಿಗೆ ಜೈಲು

'Dump Trump': 20 ಲಕ್ಷ ಜನರ ಕೂಗು

ಮತ್ತೊಂದು ರೈಲು ಅಪಘಾತ: ಹೊಣೆ ಹೊರದ ಸರಕಾರ ಸಿಪಿಐ(ಎಂ) ಪೊಲಿಟ್‌ಬ್ಯುರೊ ಖೇದ



ಜನವರಿ 21ರಂದು ಇನ್ನೊಂದು ರೈಲು ಅಪಘಾತ 39 ಮಂದಿಯ ಬಲಿ ತೆಗೆದುಕೊಂಡಿದೆ, 54 ಮಂದಿ ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ. ಜಗ್ದಲ್‌ಪುರ-ಭುವನೇಶ್ವರ ಹಿರಾಖಂಡ್ ಎಕ್ಸ್‌ಪ್ರೆಸ್ ಆಂಧ್ರಪ್ರದೇಶದ ವಿಜಯನಗರಂ ಜಿಲ್ಲೆಯಲ್ಲಿ ಅಪಘಾತಕ್ಕೀಡಾಗಿದೆ. ಅದರ ಒಂಬತ್ತು ಬೋಗಿಗಳು ಹಳಿ ತಪ್ಪಿವೆ ಎಂದು ವರದಿಯಾಗಿದೆ. ಕಳೆದ ಎರಡು ತಿಂಗಳಲ್ಲಿ ಇದು ಮೂರನೇ ರೈಲು ಅಪಘಾತ.

ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಅಪಘಾತದ ಬಗ್ಗೆ ಆಘಾತ ಮತ್ತು ಆಳವಾದ ದುಃಖವನ್ನು ವ್ಯಕ್ತಪಡಿಸಿದೆ. ಈ ಅಪಘಾತದಲ್ಲಿ ಭೀಕರ ನಷ್ಟ ಅನುಭವಿಸಿರುವ ಕುಟುಂಬಗಳಿಗೆ ಅದು ಹಾರ್ದಿಕ ಸಹಾನುಭೂತಿ ವ್ಯಕ್ತಪಡಿಸಿದೆ.

ಇಂತಹ ರೈಲು ಅಪಘಾತಗಳು ಮತ್ತೆ-ಮತ್ತೆ ಸಂಭವಿಸುತ್ತಿವೆ. ಹಲವಾರು ಭರವಸೆಗಳನ್ನು ಕೊಟ್ಟರೂ ರೈಲ್ವೆ ಮಂತ್ರಾಲಯ ಭಾರತೀಯ ರೈಲ್ವೆಯಲ್ಲಿ ಪ್ರಯಾಣಿಸುತ್ತಿರುವವರಿಗೆ ಸಾಮಾನ್ಯ ಸುರಕ್ಷಿತತೆಯನ್ನು ಕೊಡುವಲ್ಲಿಯೂ ವಿಫಲವಾಗಿದೆ ಎಂದು ಹೇಳಿರುವ ಸಿಪಿಐ(ಎಂ) ವೊನ್ನೆ ನವಂಬರ್‌ನಲ್ಲಿ ಕಾನ್ಪುರದ ಬಳಿ ನಡೆದ ಅಪಘಾತದಲ್ಲಿ 146 ಜನರ ಸಾವುಂಟಾದ ನಂತರವಾದರೂ ರೈಲ್ವೆ ಮಂತ್ರಾಲಯ ಸುರಕ್ಷಿತತೆಯ ಮಟ್ಟವನ್ನು ಹೆಚ್ಚಿಸಲು ತುರ್ತು ಕ್ರಮಗಳನ್ನು ಕೈಗೊಳ್ಳಬಹುದು ಎಂದು ನಿರೀಕ್ಷಿಸಲಾಗಿತ್ತು.

ರೈಲ್ವೆ ಮಂತ್ರಿಗಳೂ ಸೇರಿದಂತೆ ಸರಕಾರದ ಅತ್ಯುನ್ನತ ಮಟ್ಟಗಳಲ್ಲಿ ಇಂತಹ ಶೋಚನೀಯ ಪರಿಸ್ಥಿತಿಯ ಬಗ್ಗೆ ಯಾರನ್ನೂ ಹೊಣೆ ಮಾಡಲಾಗುತ್ತಿಲ್ಲ ಎಂಬುದು ದುರದೃಷ್ಟಕರ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖೇದ ವ್ಯಕ್ತಪಡಿಸಿದೆ.

ಜನವರಿ20: ಸ್ಕೀಮ್ ನೌಕರರ ದೇಶವ್ಯಾಪಿ ಯಶಸ್ವಿ ಮುಷ್ಕರ

ಅಂಗನವಾಡಿ, ಆಶಾ, ಮಧ್ಯಾಹ್ನದ ಊಟ ಮಾತ್ರವಲ್ಲ, ಎನ್‌ಆರ್‌ಎಲ್‌ಎಂ, ಸರ್ವ ಶಿಕ್ಷಾ ಅಭಿಯಾನ್, ರಾಷ್ಟ್ರೀಯ ಬಾಲ ಕಾರ್ಮಿಕ ಪ್ರಾಜೆಕ್ಟ್ ಮುಂತಾದ ಕೇಂದ್ರ ಸರಕಾರದ ಸ್ಕೀಮ್‌ಗಳಲ್ಲಿ ದುಡಿಯುವ ನೌಕರರು ಜನವರಿ 20ರಂದು ದೇಶವ್ಯಾಪಿ ಮುಷ್ಕರ ನಡೆಸಿದ್ದಾರೆ.

23 ರಾಜ್ಯಗಳಲ್ಲಿ ನಾಲ್ಕು ಲಕ್ಷಕ್ಕೂ ಹೆಚ್ಚು ಸ್ಕೀಮ್ ನೌಕರರು ಅಂದು ಬೀದಿಗಿಳಿದು ಬೃಹತ್ ಮತಪ್ರದರ್ಶನಗಳು, ರ‍್ಯಾಲಿಗಳನ್ನು ನಡೆಸಿದರು.

ಕೇಂದ್ರ ಸರಕಾರದ ವಿವಿಧ ಸ್ಕೀಮುಗಳ ಅಡಿಯಲ್ಲಿ ಸುಮಾರು ಒಂದು ಕೋಟಿ ಕೆಲಸಗಾರರು, ಹೆಚ್ಚಿನವರು ಮಹಿಳೆಯರು ಗ್ರಾಮೀಣ ಪ್ರದೇಶಗಳಲ್ಲಿ ಲಕ್ಷಾಂತರ ಬಡ ಕುಟುಂಬಗಳಿಗೆ, ಮೂಲಸೇವೆಗಳನ್ನು ಒದಗಿಸುವ ಪ್ರಶಂಸನೀಯ ಕೆಲಸ ಮಾಡುತ್ತಿದ್ದಾರೆ.

ಈ ಸ್ಕೀಮುಗಳ ಫಲಾನುಭವಿಗಳಂತೆ ಈ ಬಹುಪಾಲು ಸ್ಕೀಮ್ ಕೆಲಸಗಾರರು ಕೂಡ ಸಮಾಜದ ಅಂಚಿಗೆ ತಳ್ಳಲ್ಪಟ್ಟ ವಿಭಾಗಗಳಿಗೆ ಸೇರಿದವರು. ಹಲವರು 10ರಿಂದ 40ವರ್ಷಗಳ ವರೆಗೆ ಸೇವೆ ಸಲ್ಲಿಸಿದ್ದಾರೆ. ಆದರೆ ಅವರನ್ನು 'ಕಾರ್ಮಿಕರು' ಎಂದು ಪರಿಗಣಿಸದೆ 'ಸ್ವಯಂಸೇವಕರು', 'ಅತಿಥಿಗಳು' ಎಂದು ಕರೆದು 'ಗೌರವಧನ' ಎಂದೋ 'ಉತ್ತೇಜನೆ'ಯೆಂದೋ ಅತ್ಯಲ್ಪ ಹಣ ಕೊಡಲಾಗುತ್ತಿದೆ.

ಮೇ 2013ರಲ್ಲಿ ನಡೆದ ತ್ರಿಪಕ್ಷೀಯ ಭಾರತೀಯ ಕಾರ್ಮಿಕ ಸಮ್ಮೇಳನ(ಐಎಲ್‌ಸಿ) ಇವರನ್ನು 'ಕಾರ್ಮಿಕ'ರೆಂದು ಪರಿಗಣಿಸಿ ಕನಿಷ್ಟ ಕೂಲಿ ಮತ್ತಿತರ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಕೊಡಬೇಕೆಂದು ನಿರ್ಧರಿಸಿತ್ತು. ಮೋದಿ ಸರಕಾರ ಬಂದ ಮೇಲೆ 2015ರಲ್ಲಿ ನಡೆದ ಐಎಲ್‌ಸಿಯ 46ನೇ ಸಮ್ಮೇಳನ ಇದನ್ನು ಪುನರುಚ್ಚರಿಸಿದೆ. ಆದರೆ ಇದನ್ನು ಜಾರಿಗೆ ತರುವ ಬದಲು ಈ ಸರಕಾರ ಬಹಳಷ್ಟು ಸ್ಕೀಮುಗಳಿಗೆ ಬಜೆಟಿನಲ್ಲಿ ಹಣ ಕಡಿತು ಮಾಡಿದೆ, ಕೆಲವು ಸ್ಕೀಮುಗಳನ್ನು ಮುಚ್ಚುವ ಯೋಚನೆಯನ್ನೂ ಮಾಡುತ್ತಿದೆ.

ಇಂತಹ ಸನ್ನಿವೇಶದಲ್ಲಿ ಇತ್ತೀಚೆಗೆ ಪೂರ್ಣಗೊಂಡ ಸಿಐಟಿಯುನ 15ನೇ ಸಮ್ಮೇಳನ ಸರಕಾರವೂ ಭಾಗಿಯಾಗಿರುವ ಈ ನಿರ್ಧಾರವನ್ನು ಜಾರಿಗೆ ತರಬೇಕು, ಈ ಸ್ಕೀಮುಗಳ ಖಾಸಗೀಕರಣ ಮಾಡಬಾರದು ಹಾಗೂ 2017-18ರ ಬಜೆಟಿನಲ್ಲಿ ಸಾಕಷ್ಟು ಹಣ ಒದಗಿಸಬೇಕು ಎಂದು ಆಗ್ರಹಿಸಿ ಅಖಿಲ ಭಾರತ ಮುಷ್ಕರ ನಡೆಸಲು ನಿರ್ಧರಿಸಿತ್ತು.

ಈ ನಿರ್ಧಾರದಂತೆ ಈ ಅಖಿಲ ಭಾರತ ಮುಷ್ಕರವನ್ನು ಯಶಸ್ವಿಗೊಳಿಸಿರುವುದಕ್ಕೆ ಎಲ್ಲ ಸ್ಕೀಮ್ ಕಾರ್ಮಿಕರಿಗೆ ಸಿಐಟಿಯು ಅಭಿನಂದನೆ ಸಲ್ಲಿಸಿದೆ.

ವಿನಯ್ ಕಟಿಯಾರ್ ಹೇಳಿಕೆಗೆ ಎಐಡಿಡಬ್ಲ್ಯುಎ ತೀವ್ರ ಖಂಡನೆ: "ಮಹಿಳೆಯರನ್ನು ಕೀಳಾಗಿ ಕಾಣುವ ಮನುಸ್ಮೃತಿಯ ಬೆಂಬಲಿಗರ ಮನೋಭಾವದ ಪ್ರತೀಕ"

ಆರೆಸ್ಸೆಸ್-ಬಿಜೆಪಿಯ ಒಬ್ಬ ಪ್ರಮುಖ ಮುಖಂಡ ವಿನಯ್ ಕಟಿಯಾರ್ ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯ ಪ್ರಚಾರದ ಸಂದರ್ಭದಲ್ಲಿ ಮಾಡಿರುವ ಒಂದು ಟಿಪ್ಪಣಿ ಎಲ್ಲೆಡೆ ತೀವ್ರ ಟೀಕೆಗೆ ಒಳಗಾಗಿದೆ. ಪ್ರಿಯಾಂಕಾ ಗಾಂಧಿಗಿಂತ ಹೆಚ್ಚು ಸುಂದರಿಯರಾದ ಚುನಾವಣಾ ಪ್ರಚಾರಕರು ತಮ್ಮಲ್ಲಿದ್ದಾರೆ, ಅವರಲ್ಲಿ ಕೆಲವರು ಕಲಾವಿದೆಯರು ಮತ್ತು ಹಿರೋಯಿನ್‌ಗಳು ಎಂದು ಅವರು ಹೇಳಿರುವುದಾಗಿ ವರದಿಯಾಗಿದೆ.

ಮಹಿಳೆಯ ಮೌಲ್ಯವನ್ನು ಅಕೆ ಹೇಗೆ ಕಾಣಿಸುತ್ತಾಳೆ ಎಂಬುದರ ಮೇಲೆ ತೀರ್ಮಾನಿಸುವುದು ಒಂದು ಲಿಂಗ ಬೇಧವಾದ ತೋರುವ ಮನೋಭಾವ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘ (ಎಐಡಿಡಬ್ಲ್ಯುಎ) ಇದನ್ನು ಬಲವಾಗಿ ಖಂಡಿಸಿದೆ. ಇಂತಹ ಟಿಪ್ಪಣಿಗಳು ಮಹಿಳೆಯರನ್ನು ಕೀಳಾಗಿಸುತ್ತವೆ, ಅವರು ರಾಜಕೀಯ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸದಂತೆ ಮಾಡುತ್ತವೆ. ಮನುಸ್ಮೃತಿಯ ಬೆಂಬಲಿಗರು ಪಿತೃಪ್ರಧಾನ ಮೌಲ್ಯಗಳನ್ನು ಸಮರ್ಥಿಸಿಕೊಳ್ಳುತ್ತ ಮಹಿಳೆಯರ ಸ್ಥಾನಮಾನವನ್ನು ಎರಡನೇ ದರ್ಜೆಗೆ ಇಳಿಸುತ್ತಾರೆ ಎಂದಿರುವ ಎಐಡಿಡಬ್ಲ್ಯುಎ, ಆಳುವ ಬಿಜೆಪಿಯ ಮುಖಂಡರ ಇಂತಹ ನಿಲುವು ಮಹಿಳೆಯರ ವಿರುದ್ಧ ಅಪರಾಧ ಎಸಗುವವರಿಗೆ ಪರೋಕ್ಷವಾಗಿ ಪ್ರೋತ್ಸಾಹ ನೀಡುತ್ತದೆ, ನಮ್ಮ ದೇಶದಲ್ಲಿ ಮಹಿಳೆಯರ ವಿರುದ್ಧ ಹಿಂಸಾಚಾರದ ದರ ಏರುತ್ತಿರುವುದು ಇದನ್ನು ತೋರುತ್ತದೆ ಎಂದು ಹೇಳಿದೆ.

ಈ ಅರೆಸ್ಸೆಸ್-ಬಿಜೆಪಿ ಮುಖಂಡ ಈ ಬಗ್ಗೆ ಕ್ಷಮೆ ಕೋರಬೇಕು ಎಂದು ಎಐಡಿಡಬ್ಲ್ಯುಎ ಆಗ್ರಹಿಸಿದೆ. ವಿಧಾನಸಭಾ ಚುನಾವಣೆಗಳು ನಡೆಯಲಿರುವ ಐದು ರಾಜ್ಯಗಳ ಮಹಿಳೆಯರು ಮತ್ತು ನಾಗರಿಕರು ಆರೆಸ್ಸೆಸ್-ಬಿಜೆಪಿ ಕೂಟ ಮತ್ತು ಅದರ ಮಿತ್ರರನ್ನು ಸಂಪೂರ್ಣವಾಗಿ ಸೋಲಿಸಬೇಕು ಎಂದು ಕರೆ ನೀಡಿದೆ.

ಫೆಬ್ರುವರಿ 7: ನೋಟುರದ್ಧತಿ ವಿರುದ್ಧ ಮತ್ತು ಬ್ಯಾಂಕ್ ಸಾಲ ವಸೂಲಿ ಆಗ್ರಹಿಸಿ ಬ್ಯಾಂಕ್ ನೌಕರರ ಅಖಿಲ ಭಾರತ ಮುಷ್ಕರ

500 ಮತ್ತು 1000 ರೂಪಾಯಿ ನೋಟುಗಳ ಯೋಜನಾಹೀನ ರದ್ದತಿ ಜನಸಾಮಾನ್ಯರಿಗೆ ವಿಪರೀತ ಕಿರುಕುಳ ಕೊಟ್ಟಿದೆ. ಇದರ ವಿರುದ್ಧ ಬ್ಯಾಂಕ್ ನೌಕರರ ಸಂಗಟನೆಗಳು ಹಲವಾರು ಕಾರ್ಯಕ್ರಮಗಳನ್ನು ನಡೆಸಿವೆ. ಆದರೂ ಇಂಗ ಪರಿಸ್ಥಿತಿಯ ಗಂಭೀರತೆಯನ್ನು ಕಂಡು ಈ ದಿಕ್ಕಿನಲ್ಲಿ ಇನ್ನಷ್ಟು ಕೆಲಸ ಮಾಡಬೇಕಾಗಿದೆ ಎಂದು ಬ್ಯಾಂಕ್ ನೌಕರರ ಮೂರು ಸಂಘಟನೆಗಳು ಬಿಇಎಫ್‌ಐ, ಎಐಬಿಇಎ ಮತ್ತು ಎಐಬಿಒಎ ನಿರ್ಧರಿಸಿವೆ.

ಅದೇ ರೀತಿಯಲ್ಲಿ ದೊಡ್ಡ ಕಾರ್ಪೊರೇಟ್‌ಗಳು, ಬ್ಯಾಂಕುಗಳ ಉನ್ನತ ಅಧಿಕಾರ ವಲಯದಲ್ಲಿ ಇರುವವರು ಮತ್ತು ಅಧಿಕಾರದ ಕೇಂದ್ರದಲ್ಲಿರುವ ರಾಜಕಾರಣಿಗಳ ಅಪವಿತ್ರ ಮೈತ್ರಿಯಿಂದಾಗಿ ಬ್ಯಾಂಕುಗಳ ಬೃಹತ್‌ಮೊತ್ತದ ಸುಸ್ತಿ ಸಾಲಗಳ ಪ್ರಮಾಣ ಸತತವಾಗಿ ಹೆಚ್ಚುತ್ತ ಬಂದಿದೆ. ಈಗಂತೂ ಸಾರ್ವಜನಿಕ ವಲಯದ ಬ್ಯಾಂಕುಗಳ ಸುಸ್ತಿ ಸಾಲಗಳ ಪ್ರಮಾಣ ಭಯ ಹುಟ್ಟಿಸುವ ಪ್ರಮಾಣವನ್ನು ತಲುಪಿದೆ. ಆದರೆ ಕೇಂದ್ರದಲ್ಲಿರುವ ಸರಕಾರ ಸುಸ್ತಿದಾರರ ಬಗ್ಗೆ ಬಹಳ ಉದಾರವಾಗಿರುವಂತೆ ಕಾಣುತ್ತದೆ, ಸಾಲ ವಸೂಲಿಗಿಂತ ಸಾಲಮನ್ನಾಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡುತ್ತಿದೆ. ಆದ್ದರಿಂದ ಈ ವಿಷಯದಲ್ಲಿಯೂ ಸಾರ್ವಜನಿಕ ಅಭಿಪ್ರಾಯವನ್ನು ಮೂಡಿಸಲು ಗಂಭೀರ ಕಾರ್ಯಕ್ರಮಗಳ ಅಗತ್ಯವಿದೆ ಎಂಬುದು ಈ ಸಂಘಟನೆಗಳ ಅಭಿಪ್ರಾಯ.

ಈ ಹಿನ್ನೆಲೆಯಲ್ಲಿ ಈ ಮೂರು ಬ್ಯಾಂಕ್ ನೌಕರರ ಸಂಘಟನೆಗಳಘೀ ಎರಡು ಬೇಡಿಕೆಗಳ ಮೇಲೆ ಫೆಬ್ರುವರಿ 7ರಂದು ಅಖಿಲ ಭಾರತ ಮುಷ್ಕರ ನಡೆಸಲು ನಿರ್ಧರಿಸಿವೆ. ಈ ಬಗ್ಗೆ ಈಗಾಗಲೇ ಮುಷ್ಕರ ನೋಟೀಸುಗಳನ್ನು ನೀಡಲಾಗಿದೆ ಎಂದು ಬಿಇಎಫ್‌ಐ ಹೇಳಿದೆ.

ರೋಹಿತ್ ವೇಮುಲ ಸಾಂಸ್ಥಿಕ ಹತ್ಯೆಯ ನೆನಪು



ಈ ಜನವರಿ 17ಕ್ಕೆ ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿ ರೋಹಿತ್ ವೇಮುಲ ಸಾಂಸ್ಥಿಕ ಹತ್ಯೆ ನಡೆದು ಒಂದು ವರ್ಷವಾಯ್ತು. ಈ ಸಂದರ್ಭದಲ್ಲಿ ದಿಲ್ಲಿಯಲ್ಲಿ ರೋಹಿತ್ ವೇಮುಲಾಗೆ ನ್ಯಾಯ ಒದಗಿಸಬೇಕು, ನಜೀಬ್‌ನನ್ನು ಹುಡುಕಿ ತರಬೇಕು ಎಂದು ಆಗ್ರಹಿಸಿ ಮೆರವಣಿಗೆ ಹೊರಟ ದಿಲ್ಲಿಯ ವಿವಿಧ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳ ಮೇಲೆ ದಿಲ್ಲಿ ಪೋಲಿಸರು ಅಮಾನುಷ ದಾಳಿ ಮಾಡಿದರು. ಹೈದರಾಬಾದ್ ವಿಶ್ವದ್ಯಾಲಯದ ಬಳಿ ಮಗನ ಸಾವು ಸಂಭವಿಸಿದ ಸ್ಥಳಕ್ಕೆ ಭೇಟಿ ಕೊಡಲು ಆತನ ತಾಯಿಗೆ ಅವಕಾಶವನ್ನೂ ಕೊಡದೆ ಅವರನ್ನು ಮತ್ತು ಅವರ ಇನ್ನೊಬ್ಬ ಮಗ ರಾಜ ವೇಮುಲನನ್ನು ಪೋಲಿಸರು ಹಿಡಿದೊಯ್ದರು. ಇನ್ನೊಂದೆಡೆಯಲ್ಲಿ ಒಂದು ವರ್ಷವಾದರೂ ಆತನ ಸಾವಿಗೆ ಕಾರಣರಾದವರಿಗೆ ಶಿಕ್ಷೆಯಾಗಿಲ್ಲ.

ಆದರೂ ಒಂದು ವರ್ಷದ ಹಿಂದೆ ಭುಗಿಲೆದ್ದ ಆಕ್ರೋಶ ಒಂದು ಆಂದೋಲನವಾಗಿ ಪರಿವರ್ತನೆಗೊಂಡಿದೆ. ಈ ಜನವರಿ 17ರಂದು ಹೈದರಾಬಾದ್, ದಿಲ್ಲಿ ಸೇರಿದಂತೆ ದೇಶದ ಹಲವೆಡೆಗಳಲ್ಲಿ ಈ ಘಟನೆಯನ್ನು ನೆನಪಿಸಿಕೊಂಡು ದಮನದ ವಿರುದ್ಧ ಹೋರಾಟವನ್ನು ಮುಂದುವರೆಸುವ ಪಣ ತೊಡಲಾಯಿತು.

ದೇಶದ ರಾಜಧಾನಿಯಲ್ಲಿ ದಲಿತ ಶೋಷಿತ ಮುಕ್ತಿ ಮಂಚ್ ಡಿಎಸ್‌ಎಂಎಂ) ಜನವಾದಿ ಮಹಿಳಾ ಸಂಘಟನೆ, ಎಸ್‌ಎಫ್‌ಐ, ಡಿವೈಎಫ್‌ಐ, ಸಿಐಟಿಯು, ಡಿಟಿಎಫ್, ಜೆಎನ್‌ಎಂ, ಜನಸಂಸ್ಕೃತಿ, ಎಐಎಲ್‌ಯು ಮತ್ತು ಇನ್ನೂ ಹಲವು ಸಂಘಟನೆಗಳ ಜತೆಗೂಡಿ ರೋಹಿತ್‌ವೇಮುಲರ ಮೊದಲ ಮರಣ ವಾರ್ಷಿಕವನ್ನು ಆಚರಿಸಿದವು.



ಜಂತರ್ ಮಂತರ್‌ನಲ್ಲಿ ನಡೆದ ಈ ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ಪೊಲಿಟ್ ಬ್ಯುರೊ ಸದಸ್ಯರಾದ ಸುಭಾಷಿಣಿ ಅಲಿ ಮಾತನಾಡಿದರು. ದಲಿತರ ವಿರುದ್ಧ ಅತ್ಯಾಚಾರಗಳು ಮುಂದುವರೆಯುತ್ತಲೇ ಇವೆ. ಪ್ರಜಾಪ್ರಭುತ್ವ ಶಕ್ತಿಗಳು ಒಟ್ಟಾಗಿ ದಲಿತರು, ಆದಿವಾಸಿಗಳು, ಅಲ್ಪಸಂಖ್ಯಾತರು ಮತ್ತು ಇತರ ಜನವಿಭಾಗಗಳ ಮೇಲೆ ನಡೆಯುತ್ತಿರುವ ಎಲ್ಲ ಸ್ವರೂಪಗಳ ದಮನದ ವಿರುದ್ಧ ಒಂದಾಗಬೇಕೆಂದು ಅವರು ಕರೆ ನೀಡಿದರು. ರೋಹಿತ್ ಪಟ್ಟ ಪಾಡು ಇನ್ನಾವ ದಲಿತ ವಿದ್ಯಾರ್ಥಿಯೂ ಪಡದಂತೆ ಮಾಡಲು ರೋಹಿತ್ ಕಾಯ್ದೆಯನ್ನು ಬೇಗನೇ ಅಂಗೀಕರಿಸಬೇಕು ಎಂದೂ ಅವರು ಒತ್ತಾಯಿಸಿದರು.

ಈ ಬಗ್ಗೆ ಇತ್ತೀಚೆಗೆ ತಿರುವನಂತಪುರದಲ್ಲಿ ನಡೆದ ಸಿಪಿಐ(ಎಂ) ಕೇಂದ್ರ ಸಮಿತಿ ಒಂದು ಪ್ರತ್ಯೇಕ ನಿರ್ಣಯವನ್ನು ಅಂಗೀಕರಿಸಿತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಹೈದರಾಬಾದಿನಲ್ಲಿ ಶಹಾದತ್‌ದಿನ, ಪು.14 ನೋಡಿ

ಕೆಸರಾಟ ನಿಲ್ಲಿಸಿ, ಬರ ಪರಿಹಾರಕ್ಕೆ ತೊಡಗಿ

ಸಂಪಾದಕೀಯ

ದೇಶದ ಹಲವು ರಾಜ್ಯಗಳು – ಅದರಲ್ಲೂ ದಕ್ಷಿಣ ಭಾರತದ ಎಲ್ಲಾ ರಾಜ್ಯಗಳೂ ತೀವ್ರ ಬರ ಎದುರಿಸುತ್ತಿವೆ. ಕರ್ನಾಟಕ ಸತತ ಮೂರನೇ ವರ್ಷ ಬರ ಎದುರಿಸುತ್ತಿದೆ. ಸಾಧಾರಣ ಮಳೆಗಿಂತ 20% ನೈರುತ್ಯ ಮಾರುತವನ್ನೂ ಹಾಗೂ 62% ಕಡಿಮೆ ಈಶಾನ್ಯ ಮಾರುತವನ್ನೂ ಪಡೆದಿದೆ. 175 ತಾಲೂಕುಗಳಲ್ಲಿ 139 ತಾಲೂಕುಗಳು ಬರಗಾಲ ಪೀಡಿತ ಎಂದು ಘೋಷಿಸಲಾಗಿದೆ. ಜಲಾಶಯಗಳಲ್ಲಿ ನೀರಿನ ಮಟ್ಟ ಚರಿತ್ರೆಯಲ್ಲೆಲ್ಲೂ ಕಂಡರಿಯದಷ್ಟರ ಮಟ್ಟಿಗೆ ಕಡಿಮೆ ದಾಖಲಾಗಿದೆ. ಮುಂಗಾರು ಮಳೆ ವೈಫಲ್ಯದಂದ ರೂ. 14,471 ಕೋಟಿ ರೂ.ಮೌಲ್ಯದ ಕೃಷಿ ಹಾಗೂ 1164 ಕೋಟಿ ರೂ. ಮೌಲ್ಯದ ತೋಟಗಾರಿಕಾ ಬೆಳೆಯು ಸೇರಿದಂತೆ, ರೈತರಿಗೆ ರೂ. 15,636 ಕೋಟಿ ರೂ. ನಷ್ಟ ಉಂಟಾಗಿ ರೈತರು ಕಂಗಾಲಾಗಿದ್ದಾರೆ. ಕುಡಿಯುವ ನೀರಿನ ಪರಿಸ್ಥಿತಿ ತೀವ್ರವಾಗಿದ್ದು, ಟ್ಯಾಂಕರುಗಳಿಂದ ನೀರು ಪೂರೈಸಬೇಕಾದ ಪರಿಸ್ಥಿತಿ ಇದೆ.

ಇಂತಹ ಭೀಕರ ಬರಗಾಲದ ಪರಿಸ್ಥಿತಿಯಲ್ಲಿ ಯುದ್ಧೋಪಾದಿಯಲ್ಲಿ ಬರಪರಿಹಾರ ಕ್ರಮ ಕೈಗೊಳ್ಳಲಾಗುತ್ತಿಲ್ಲ. ಬರ ಪರಿಹಾರ ಮಾರ್ಗಸೂಚಿ ಪ್ರಕಾರ 4072 ಕೋಟಿ ರೂ. ಕೇಂದ್ರಕ್ಕೆ ಅಕ್ಟೋಬರ್ 27ರಂದು ಮನವಿ ಸಲ್ಲಿಸಲಾಗಿತ್ತು. ಜನವರಿ 4ರಂದು ದೆಹಲಿಯಲ್ಲಿ ಗೃಹಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ 1782.44 ಕೋಟಿ ರೂ. ಬಿಡುಗಡೆಗೆ ತೀರ್ಮಾನ ಮಾಡಲಾಗಿದೆ. ಆದರೆ ಒಂದು ನಯಾ ಪೈಸೆನೂ ಬಂದಿಲ್ಲ. ರಾಜ್ಯ ಸರಕಾರ ಭಿಕ್ಷೆ ಕೇಳುತ್ತಿಲ್ಲ. ಇದು ಕೇಂದ್ರ ಸರಕಾರದ ಕರ್ತವ್ಯ, ಎಂದು ಇತ್ತೀಚೆಗೆ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ದೂರಿದ್ದಾರೆ. "ಪದೇ ಪದೇ ಕೇಂದ್ರದ ವಿರುದ್ಧ ಆರೋಪ ಹೊರಿಸುವ ಸಿದ್ಧರಾಮಯ್ಯ ಅವರು ಮುಖ್ಯಮಂತ್ರಿಯ ಜವಾಬ್ದಾರಿ ನಿಭಾಯಿಸಲಿ. ಪರಿಹಾರದ ಹಣ ಬರುವವರೆಗೆ ಪ್ರಯತ್ನ ಮುಂದುವರೆಸಬೇಕು. ಕೇಂದ್ರದಿಂದ ಬರುವ ಹಣವನ್ನು ವಿನಿಯೋಗಿಸುವ ಶಕ್ತಿ ಇವರಿಗಿಲ್ಲ. ಎಲ್ಲವನ್ನೂ ನಾವೇ ಮಾಡುವುದಾದರೆ ಅವರು ಇರುವುದು ಯಾಕೆ? ರಾಜೀನಾಮೆ ಕೊಟ್ಟು ತೆರಳಲಿ" ಎಂದು ಕೇಂದ್ರ ಅಂಕಿಸಂಖ್ಯೆ ಮತ್ತು ಅನುಷ್ಠಾನ ಸಚಿವ ಸದಾನಂದ ಗೌಡ ವ್ಯಂಗ್ಯವಾಡಿದ್ದಾರೆ. ಇದಕ್ಕೆ ಸಿದ್ಧರಾಮಯ್ಯ ಮತ್ತು ಕಾಗೋಡು ತಿಮ್ಮಪ್ಪ ತಿರುಗೇಟು ನೀಡಿದ್ದಾರೆ. ಹೀಗೆ ಮುಂದುವರೆದಿದೆ ವಾಗ್ವಾದ.

ಇಂತಹ ಭೀಕರ ಬರದ ಪರಿಸ್ಥಿತಿಯಲ್ಲೂ ನಾಲ್ಕು ತಿಂಗಳ ನಂತರವೂ ತೀರಾ ಕಡಿಮೆ ಬರ ಪರಿಹಾರ ಅನುದಾನ ತಲುಪಿಲ್ಲ ಎಂಬುದಂತೂ ನಿಜ. ಗಂಭೀರ ತುರ್ತು ಕ್ರಮ ಕೈಗೊಳ್ಳುವ ಬದಲು ಕೇಂದ್ರ–ರಾಜ್ಯ ಸರಕಾರಗಳು ಮತ್ತು ಬಿಜೆಪಿ–ಕಾಂಗ್ರೆಸ್ ನಾಯಕರು ಕೆಸರು ಎರಚಾಟದ ರಾಜಕೀಯದಲ್ಲಿ ತೊಡಗಿದ್ದಾರೆ. ಈ ವೈಫಲ್ಯಕ್ಕೆ ಬಿಜೆಪಿ ನಾಯಕತ್ವದ ಕೇಂದ್ರ ಸರಕಾರ ಮತ್ತು ಕಾಂಗ್ರೆಸ್ ರಾಜ್ಯ ಸರಕಾರ ಎರಡರದ್ದೂ ಜವಾಬ್ದಾರಿ ಇದೆ. ಅದನ್ನು ಇಬ್ಬರೂ ಸರಿಯಾಗಿ ನಿರ್ವಹಿಸಿಲ್ಲ ಎಂಬುದು ಸ್ಪಷ್ಟ ಇದೆ. ಈ ಕನಿಷ್ಟ ಜವಾಬ್ದಾರಿಯನ್ನೂ ನಿರ್ವಹಿಸಲಾಗಿಲ್ಲ. ಈ ಬಾರಿಯ ಬರ ಪರಿಹಾರಕ್ಕೆ ಇವಿಷ್ಟೇ ಸಾಲದು.

ಇತ್ತೀಚೆಗೆ ತಿರುವನಂತಪುರದಲ್ಲಿ ಸೇರಿದ್ದ ಸಿಪಿಐ(ಎಂ) ಕೇಂದ್ರ ಸಮಿತಿ ದಕ್ಷಿಣ ಭಾರತದ ಎಲ್ಲಾ ರಾಜ್ಯಗಳಲ್ಲಿ ಬರದ ಪರಿಸ್ಥಿತಿ ಬಗ್ಗೆ ಚರ್ಚಿಸಿ ಅಂಗೀಕರಿಸಿದ ನಿರ್ಣಯದಲ್ಲಿ ಕೇಂದ್ರ ಸರಕಾರ ಕೈಗೊಳ್ಳಬೇಕಾದ ಇನ್ನಷ್ಟು ಕ್ರಮಗಳನ್ನು ಸೂಚಿಸಿದೆ. ಅವುಗಳಲ್ಲಿ ಒಂದು, ಈ ಬಾರಿಯ ಭೀಕರತೆ ಮನಗಂಡು ಕೇಂದ್ರ ಸರಕಾರ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯ ಹೆಚ್ಚುವರಿ ನೆರವಿನ ನಿಭಂದನೆಗಳನ್ನು ಸಡಿಲಿಸಬೇಕಾಗಿದೆ ಎಂಬುದು. ಕಳೆದ ಎರಡೂ ಋತುವಿನಲ್ಲಿ ಹಿಂದೆಂದೂ ಕಂಡರಿದಷ್ಟು ಕಡಿಮೆ ಮಳೆ ಮತ್ತು ಬಿಕ್ಕಟ್ಟನ್ನು ಪರಿಗಣಿಸಿ ಎಲ್ಲ ರೈತರಿಗೂ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಿಂದ ಅನುಮೋದಿತ ದರಕ್ಕೆ ಎರಡುಪಟ್ಟು ನೆರವನ್ನು ಒದಗಿಸಬೇಕು ಎಂಬುದು ಎರಡನೇಯದು. ಮೂರನೇಯದಾಗಿ ಬರ ಪೀಡಿತ ರಾಜ್ಯಗಳಿಗೆ ಕೃಷಿ ಮತ್ತು ಜಾನುವಾರು ಸಾಕಾಣಿಕಾ ವಲಯಕ್ಕೆ ವಿಶೇಷ ನೆರವು ಪ್ಯಾಕೇಜುಗಳನ್ನು ಘೋಷಿಸಬೇಕು. ಪಡಿತರ ವಿತರಣಾ ವ್ಯವಸ್ಥೆಯ ಮೂಲಕ ಬರ ಪೀಡಿತ ರಾಜ್ಯಗಳಿಗೆ ಹೆಚ್ಚುವರಿ ಆಹಾರ ಧಾನ್ಯಗಳು, ಬೇಳೆ ಕಾಳು, ಮತ್ತು ಸೀಮೆ ಎಣ್ಣೆಯನ್ನು ಒದಗಿಸಬೇಕು. ಗ್ರಾಮೀಣ ಉದ್ಯೋಗ ಖಾತ್ರಿಗೆ ವಿತರಣೆಯನ್ನು ದುಪ್ಪಟ್ಟು ಮಾಡಬೇಕು ಹಾಗೂ ಬಾಕಿ ಇರುವ ಮೊತ್ತವನ್ನು ಕೂಡಲೇ ನೀಡಬೇಕು ಎಂಬುದು ಉಳಿದ ಎರಡು ಸೂಚನೆಗಳು.

ಕೇಂದ್ರ–ರಾಜ್ಯ ಸರಕಾರಗಳು ಮತ್ತು ಬಿಜೆಪಿ–ಕಾಂಗ್ರೆಸ್ ನಾಯಕರು ಕೆಸರು ಎರಚಾಟವನ್ನು ನಿಲ್ಲಿಸಬೇಕು. ಈಗಾಗಲೇ ಕೇಂದ್ರ ಸಕಾರ ಘೋಷಿಸಿರುವ ಬರ ಪರಿಹಾರ ಹಣವನ್ನು ತಕ್ಷಣ ಬಿಡುಗಡೆ ಮಾಡುವುದಲ್ಲದೆ ಮೇಲೆ ಹೇಳಲಾಗಿರುವ ಕ್ರಮಗಳನ್ನೂ ಯುದ್ಧೋಪಾದಿಯಲ್ಲಿ ಕೈಗೊಳ್ಳಬೇಕಾಗಿದೆ.

ಗಡಬನಹಳ್ಳಿ ದಲಿತರಿಗೆ ಹೆಣ ಹೂಳಲೂ ಭೂಮಿ ಇಲ್ಲ

ಚಿಕ್ಕಮಗಳೂರು ಜಿಲ್ಲಾಧಿಕಾರಿ ಕಛೇರಿ ಎದುರು ಹೆಣ ಇಟ್ಟು ಹೋರಾಟ

– ಗೋಪಾಲಕೃಷ್ಣ ಅರಳಹಳ್ಳಿ

ದಲಿತರಿಗೆ ಹೆಣ ಹೂಳಲೂ 6X3 ಅಡಿ ಭೂಮಿಯಿಲ್ಲದ ಸುದ್ದಿ ಕರ್ನಾಟಕ ತುಂಬಾ ಕೇಳಿ ಬರುತ್ತಿದೆ. ಚಿಕ್ಕಮಗಳೂರು ನಗರದಿಂದ 7–8 ಕಿ.ಮೀ. ದೂರದಲ್ಲಿದೆ ಗಡಬನಹಳ್ಳಿಯಿ. ನಾವು ಪೊಲೀಸರ ನೆರವು ಪಡೆದು ಆಟೋ ಹತ್ತಿ ದಾರಿ ಹಿಡಿದೆವು. ನೈಸರ್ಗಿಕ ಸೌಂದರ್ಯಕ್ಕೆ ಹೆಸರಾದ ಈ ಊರು. ದಾರಿಯುದ್ದಕ್ಕು ಅದರುತ್ತಾ ಸಾಗಿತು ಆಟೋ. ಮೂಡಿಗೆರೆ ವಿಧಾನ ಸಭಾ ಮೀಸಲು ಕ್ಷೇತ್ರ, ಶಾಸಕರು ಲಿಂಗಪ್ಪನವರು. ಆದರೆ ರಸ್ತೆಗೆ ಟಾರು–ಸಿಮೆಂಟು ಸೋಂಕೆ ಇಲ್ಲವೆಂದು ನನ್ನ ಅನಿಸಿಕೆ. ಜೀವ ಹಿಡಿದುಕೊಂಡು ಮಲ್ಲದೂರು ಕಡೆಗೆ ಹೋಗುತ್ತ ಉಪ್ಪಳಿ ರಸ್ತೆ, ದಟ್ಟ ಕಾಡಿನಲ್ಲಿ ಸಾಗಿದ ಅನುಭವ. ಕೊನೆಗೆ ಗಡಬನಹಳ್ಳಿ ದಲಿತರ ಕೇರಿ ಮುಟ್ಟಿದೆವು. ಸ್ಮಶಾನ ಮೌನ, ನಮ್ಮನ್ನು ಕಂಡ ಗಡಬನಹಳ್ಳಿ ದಲಿತರು ನಮ್ಮರೇ ಎನ್ನುವಂತೆ ಭಾವಿಸಿ ಕರೆದು ಮನೆ ಜಗಲಿ ಮೇಲೆ ಕುಳ್ಳರಿಸಿ ಪರಂಗಿ ಹಣ್ಣು ನೀಡಿದರು.

ದಲಿತ ಹಕ್ಕುಗಳ ಸಮಿತಿ(ಡಿಹೆಚ್‌ಎಸ್) ರಾಜ್ಯ ನಿಯೋಗ, ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಅರಳಹಳ್ಳಿ, ರಾಜ್ಯ ಸಮಿತಿ ಸದಸ್ಯರಾದ ನಾಗಣ್ಣ ಹೆಚ್.ಜಿ., ಹಾಸನ ಜಿಲ್ಲಾ ಡಿ.ಹೆಚ್.ಎಸ್ ಸಂಚಾಲಕರಾದ ಪೃಥ್ವಿ ಮತ್ತು ಹಾಸನ ಡಿ.ವೈ.ಎಫ್.ಐ. ಜಿಲ್ಲಾ ಅಧ್ಯಕ್ಷರಾದ ವಾಸುದೇವ್. ಗಡಬನಹಳ್ಳಿಗೆ ಭೇಟಿ ನೀಡಿ ಜನವರಿ 14ರಂದು ನಡೆದ 'ಸ್ಮಶಾನ ಭೂಮಿ' ಹೋರಾಟದ ಬಗ್ಗೆ ಮಾಹಿತಿ ಕಲೆ ಹಾಕಲು ಮುಂದಾದೆವು.

ದಲಿತ ಮಹಿಳೆ ವೃದ್ಧೆ ಹುಚ್ಚಮ್ಮ ವಯೋವೃದ್ಧೆ, ಸಹಜ ಮರಣ ಹೊಂದಿದರು. ಅವರ ಹೆಣ ಹೂಳಲು ಸರ್ಕಾರಿ ಭೂಮಿಯಲ್ಲಿ ಜಾಗ ಕೊಡಲು ಪೊಲೀಸರು ಅಡ್ಡಿಪಡಿಸಿದರೆಂದು ಚಿಕ್ಕಯ್ಯ ಮಾತು ಶುರು ಹಚ್ಚಿದ. ಈತನ ದೊಡ್ಡಮ್ಮ ಹುಚ್ಚಮ್ಮ.

ಪೊಲೀಸರು ಅಡ್ಡಿಪಡಿಸಿದೇಕೆ? ಸುಮಾರು 50–60 ವರ್ಷಗಳಿಂದ ಪರಿಶಿಷ್ಟ ಜಾತಿ(ಬಲಗೈ) 30 ಕುಟುಂಬ ತೋಟಗಳಲ್ಲಿ ಕೂಲಿನಾಲಿ ಮಾಡಿಕೊಂಡು ದೀರ್ಘಕಾಲ ಬದುಕಿ ಸಂಕಷ್ಟದ ಬಾಳು ಸವೆಸಿದ್ದಾರೆ. ಆ ಕಾಲದಿಂದ ಸತ್ತವರನ್ನು ಸರ್ಕಾರಿ ಗೋಮಾಳದ ಈ ಜಾಗದಲ್ಲೇ ಮಣ್ಣು ಮಾಡಿದ್ದೀವಿ. ಆಗ ಯಾರು ಅಡ್ಡಿಪಡಿಸಲಿಲ್ಲ. ಸರ್ವೆ ನಂ.210ರ 2 ಎಕರೆ ಜಮೀನು ಇದಾಗಿದೆ. ಮಧ್ಯೆ ರೋಡಿದೆ ಎಂದರು. ದಲಿತರಲ್ಲದೆ, ಈ ಊರಿನಲ್ಲಿ 3 ಗೌಡ್ರು ಮನೆಗಳು, 5 ಲಿಂಗಾಯಿತರ ಮನೆಗಳು, 4 ಶೆಟ್ಟರ ಮನೆಗಳು. ಉಳಿದವರು ತಮಿಳಿಯನ್ನರು. ಒಟ್ಟು 90 ಮನೆಗಳಿವೆ. ಚಿಕ್ಕಮಗಳೂರಿನ ತೋಟಗಳಲ್ಲಿ ಕೆಲಸ ಮಾಡಲು ಬಂದು ಇಲ್ಲೇ ನೆಲೆಸಿದವರು ಈ ತಮಿಳರು. ಅವರು ಮೇಲ್ ಜಾತಿಯವರು ಆಗಿದ್ದಾರೆ.

ಗ್ರಾಮ ಪಂಚಾಯತ್ ಉಪಾಧ್ಯಕ್ಷೆ ಕೋಮಲ ಕೊಲೆ ಯಾಕೆ?

ಊರಿಗೆ ಸಾಗುತ್ತಿದ್ದಂತೆ ರಸ್ತೆ ಅಕ್ಕ–ಪಕ್ಕದಲ್ಲಿ ಎರಡುವರೆ ಎಕರೆ ಸರ್ಕಾರಿ ಗೋಮಾಳದ ಜಾಗವಿದೆ. 2 ತಿಂಗಳ ಹಿಂದೆ ಕೋಮಲ ಎಂಬ ದಲಿತ ಮಹಿಳೆ ಕೊಲೆ ಮಾಡಿದ್ದರು ಸರ್, ಅವರನ್ನೂ ಇಲ್ಲೇ ಮಣ್ಣು ಮಾಡಿದ್ದೇವೆ. ನೋಡಿ ಎಂದು ತೋರಿಸಿದರು.

ಈ ವಿಷಯ ಕೇಳಿ ತಬ್ಬಿಬಾದ ನಾವು ಕೋಮಲಳನ್ನು ಏಕೆ ಕೊಲೆ ಮಾಡಿದರು? ಅದು ಹೇಗಾಯಿತು? ಎಂದಾಕ್ಷಣ ಅದೊಂದು ದೊಡ್ಡ ಕಥೆ ಸಾರ್, ಕಾಣದ ಕೈಗಳು ಕೊಂದಿವೆ ಎಂದರು.


ಹುಚ್ಚಮ್ಮ


ಕೋಮಲ

ಕೋಮಲ ನಮ್ಮ ಊರಿನ ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ. ಎಸ್.ಎಸ್.ಎಲ್.ಸಿ. ಓದಿದ್ದರು. ಒಳ್ಳೆ ಕೆಲಸ ಮಾಡಿದ್ದರು. ಈ ಮಸಣ ಜಾಗ ನಮಗೆ ನೀಡಬೇಕೆಂದು ಹೋರಾಡುತ್ತಿದ್ದಳು. ಇವರನ್ನು ಕೊಲೆ ಮಾಡಿ ಕೆರೆಯಲ್ಲಿ ಹಾಕಿದ್ದಾರೆ.

ಪೊಲೀಸನವರು ಆತ್ಮಹತ್ಯೆ ಅಂತಾರೆ ಸಾರ್. ಒಂದುವರೆ ಅಡಿ ನೀರಿದೆ ಅಂದ ಚಿಕ್ಕಯ್ಯ. ಊರೆಲ್ಲಾ ರಾತ್ರಿ ಹುಡುಕಿದ್ದೆವು/ ಕೆರೆ ಕಡೆ ಹೋಗಿದ್ದೇವು ಅಲ್ಲಿ ಏನು ಕಾಣಲಿಲ್ಲ. ಆದರೆ ಬೆಳಿಗ್ಗೆ ಹೆಣ ತೇಲುತ್ತಿತ್ತು ಸಾರ್ ಅಂದ ಗುರುರಾಜ್ ಎಂಬ ಯುವಕ. ಆತ ಡಿಗ್ರಿ ಓದಿದ್ದಾನೆ. ಆದರೆ ಗಾರೆ ಕೆಲಸ ಮಾಡ್ತಾನೆ. ಮೆಡಿಕಲ್ ರಿಪೋರ್ಟ್ ಬರಬೇಕು. ಸತ್ಯ ಗೊತ್ತಾಗುತ್ತೆ ಅಂದ!

ಜನವರಿ 15ರಂದು ಹುಚ್ಚಮ್ಮ ಸತ್ತರು. ಹೆಣ ಹೂಳಲು ಈ ಜಾಗಕ್ಕೆ ಹೋದಾಗ ಪೊಲೀಸರು ಬಂದು, ಇದು ಸರ್ಕಾರಿ ಜಾಗ ಹೆಣ ಊಳಬಾರದೆಂದು ತಡೆದರು. ಊರಿನ ಸವರ್ಣೀಯ ಜಮೀನ್ದಾರ ಶಂಕರೇಗೌಡ. ಎರಡು ಎಕರೆ ತೋಟ, ಶುಂಠಿ, ಮೆಣಸು ವ್ಯಾಪಾರ. ದೊಡ್ಡ ಕುಳನೇ. ಅವನ ಕುಮ್ಮಕ್ಕಿನಿಂದಲೇ ಪೊಲೀಸರು ತಡೆದಿದ್ದು. ಆಗ ನಾವು ದಾರಿ ಕಾಣದೆ. ಹುಚ್ಚಮ್ಮನ ಹೆಣವನ್ನು ಚಿಕ್ಕಮಗಳೂರು ಜಿಲ್ಲಾಧಿಕಾರಿ ಕಛೇರಿಗೆ ಕೊಂಡೊಯ್ದು ಕಛೇರಿ ಮುಂದೆ ಹೋರಾಟ ಆರಂಭಿಸಿದೆವು. ದಲಿತ ಸಂಘಟನೆಗಳು, ಪ್ರಗತಿಪರ ಸಂಘಟನೆಗಳ ವ್ಯಕ್ತಿಗಳು, ಮುಖಂಡರು ನಮ್ಮ ಬೆಂಬಲಕ್ಕೆ ನಿಂತವು.

ಜಿಲ್ಲಾಧಿಕಾರಿ ಸತ್ಯವತಿ ರಜೆ ಹೋಗಿದ್ದರು. ಅಪರ ಜಿಲ್ಲಾಧಿಕಾರಿ ವೈಶಾಲಿ ಬಂದು ಗ್ರಾಮಸ್ಥರನ್ನೂ ಉದ್ದೇಶಿಸಿ ನೋಡಿ, ಅದು ಸರ್ಕಾರಿ ಜಾಗ ಅಲ್ಲಿ ಹೆಣ ಹೂಳಲು ಬಿಡುವುದಿಲ್ಲ. ಹೆಣ ತೆಗೆದುಕೊಂಡು ಹೋಗಿ' ಎಂದು ಹೇಳಿ ಕಛೇರಿಗೆ ತೆರಳಿದರು.

ಕರುಣೆ ಇಲ್ಲದ ಸರ್ಕಾರ : ಪೊಲೀಸ್ ದೌರ್ಜನ್ಯ

ಮೊದಲೇ ಭೂಮಿ ಇಲ್ಲದ ಜನ. ಈ ಊರಿನ 30 ದಲಿತ ಕುಟುಂಬದಲ್ಲಿ ಸಿದ್ದಯ್ಯ, ಮುಳ್ಳಯ್ಯ, ಈರಯ್ಯ, ಜಯಣ್ಣ, ತಲಾ ಎರಡು ಎಕರೆ ಭೂಮಿ ಇದೆ. ಅದು ಅಣ್ಣ–ತಮ್ಮಂದಿರು ಹಂಚಿಕೊಂಡಿದ್ದಾರೆ. ಉಳಿದ ಯಾರಿಗೂ ಅಂಗೈ ಅಗಲ ಭೂಮಿ ಇಲ್ಲ. ದಾರಿ ಕಾಣದೆ ಹೋರಾಟದ ಮಾರ್ಗವನ್ನೇ ಅನುಸರಿಸಿದರು ಸಂಜೆಯಾಗುತ್ತಿದ್ದಂತೆ ಪೊಲೀಸರು ಬಂದು ಎಲ್ಲಾ ಹೋರಾಟಗಾರರು, ಗ್ರಾಮಸ್ಥರನ್ನು ಅಂದರೆ ಹುಚ್ಚಮ್ಮನ ಖಾಸ ಸಂಬಂಧಿಕರಾದ 4–5 ಜನರನ್ನು ಪ್ರತ್ಯೇಕಿಸಿ. ಉಳಿದ ಎಲ್ಲರನ್ನೂ ಬಂಧಿಸಿ ಪೊಲೀಸ್ ಠಾಣೆಗೆ ಕೊಂಡೊಯ್ದರು. ಅವರೆಲ್ಲರ ಮೇಲೆ ಕೇಸು ದಾಖಲು ಮಾಡಿ ಜೈಲಿಗೆ ಕಳುಹಿಸಿದರು.

ಪುಟ 4 ಕ್ಕೆ

ದಲಿತ ಮಹಿಳಾ ಉಪಾಧ್ಯಕ್ಷೆ ಕೋಮಲಾ 40 ವರ್ಷ. ಎಸ್‌ಎಸ್‌ಎಲ್‌ಸಿ ವಿದ್ಯಾವಂತೆ. ದಲಿತ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದರು. ಕಾಂಗ್ರೆಸ್ ಪಕ್ಷದವರು, ಗಂಡ ಕೂಲಿಕಾರ ಮುಳ್ಳೇಶ ನಾಲ್ಕು ಜನ ಮಕ್ಕಳಿದ್ದಾರೆ. ಇದು ಕೊಲೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ ಎಂದು ಊರಿನ ದಲಿತರು ಹೇಳುತ್ತಾರೆ. ಪೊಲೀಸರು ನ್ಯಾಯವಾದ ತನಿಖೆ ನಡೆಸಿ ಈ ದಲಿತರಿಗೆ ನ್ಯಾಯ ಒದಗಿಸಿ ಕೊಡುತ್ತಾರಾ ! ಕಾದು ನೋಡಬೇಕು.

ಈ ಊರಿನಲ್ಲಿ ಬುದ್ಧಿವಂತ, ವಿದ್ಯಾವಂತರಾಗಿರುವ ಮಹೇಶ್, ಗುರುರಾಜ್‌ರು ಇನ್ನಷ್ಟು ಯುವಕ–ಯುವತಿಯರೂ ಉದ್ದಾರೆ. ಆದರೆ ಇವರೆಲ್ಲ ಜೀವನ ಕಾಯಕ ಕೂಲಿ. ಈ ಊರಿನ ದಲಿತ ಹೋರಾಟಕ್ಕೆ ತುಂಬು ಹೃದಯದ ಬೆಂಬಲವನ್ನೂ ದಲಿತ ಹಕ್ಕುಗಳ ಸಮಿತಿ (ಡಿಹೆಚ್‌ಎಸ್) ರಾಜ್ಯ ಸಮಿತಿ ಬೆಂಬಲ ನೀಡುವ ಭರವಸೆಯನ್ನು ನೀಡಿದೆ.

ವರದಿ: ವಾ.ಉ

ಬೀಡಿ ಕಾರ್ಮಿಕರಿಗೆ ನಗದು ರಹಿತ ವೇತನ ಪದ್ಧತಿಯ ವಿರುದ್ಧ ಹೋರಾಟ

ಹಳೇ ನೋಟು ಬದಲಾವಣೆಯ ಜೊತೆಗೆ ನಗದು ರಹಿತ ವೇತನ ವ್ಯವಸ್ಥೆಗೆ ಆದೇಶ ಹೊರಡಿಸಿರುವುದು ಬೀಡಿ ಕಾರ್ಮಿಕರಿಗೆ ತೀವ್ರ ಸಂಕಷ್ಟ ಎದುರಾಗಿದ್ದು, ಕರಾವಳಿ ಜಿಲ್ಲೆಯ ಬೀಡಿ ಕಾರ್ಮಿಕರಿಗೆ ಚಾಲ್ತಿಯಲ್ಲಿರುವಂತೆ ನಗದು ವೇತನ ವ್ಯವಸ್ಥೆಯನ್ನೇ ಮುಂದುವರಿಸಬೇಕೆಂದು ಜನವರಿ 24ರಂದು ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ಕಚೇರಿ ಮುಂದುಗಡೆ ಬೃಹತ್ ಪ್ರತಿಭಟನಾ ಪ್ರದರ್ಶನ ನಡೆಸಿದರು.

ಪುರಭವನದ ಬಳಿಯಿಂದ ಬೃಹತ್ ಮೆರವಣಿಗೆಯು ಜಿಲ್ಲಾಧಿಕಾರಿಗಳ ಕಚೇರಿಯ ತನಕ ನಡೆದು ಪ್ರತಿಭಟನಾ ಪ್ರದರ್ಶನವನ್ನು ಉದ್ದೇಶಿಸಿ ಕಂಟ್ರಾಕ್ಟ್‌ದಾರರ ಹೋರಾಟ ಸಮಿತಿಯು ಪ್ರಧಾನ ಕಾರ್ಯದರ್ಶಿ ಮಹಮ್ಮದ್ ರಫಿಯವರು ಮಾತನಾಡಿ 'ನಗದು ರಹಿತ ವೇತನ ಪದ್ಧತಿ ಕರಾವಳಿ ಜಿಲ್ಲೆಯ ಬೀಡಿ ಕಾರ್ಮಿಕರಿಗೆ ಮತ್ತು ಕಂಟ್ರಾಕ್ಟ್‌ದಾರರನ್ನು ಬೀದಿಗೆ ತಳ್ಳಲಿದ್ದು ಬೀಡಿ ಕೈಗಾರಿಕೆಗೆ ಮಾರಕವಾಗಿದೆ. ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರ ಇದನ್ನು ಗಂಭೀರವಾಗಿ ಪರಿಗಣಿಸಿ ಬೀಡಿ ಕೈಗಾರಿ-ಕೆಗೆ ನಗದು ರಹಿತ ವೇತನ ಪದ್ಧತಿಯಿಂದ ವಿನಾಯಿತಿ ನೀಡಿ ಹಿಂದಿನಂತೆ ನಗದು ಪದ್ಧತಿಯಿಂದ ವೇತನ ವಿತರಿಸಲು ಅವಕಾಶ ನೀಡಬೇಕು. ಒಂದು ವೇಳೆ ಹಠಮಾರಿತನ ಪ್ರಯೋಗಿಸಿ ವೇತನವನ್ನು ಬ್ಯಾಂಕಿಂಗ್ ರಂಗಕ್ಕೆ ಅಳವಡಿಸಬೇಕೆಂದು ಒತ್ತಾಯ ಹೇರಿದ್ದರೆ ತೀವ್ರತರದ ಪ್ರತಿಭಟನೆಯನ್ನು ನಡೆಸಲಾಗುವುದೆಂದು' ಎಚ್ಚರಿಕೆ ನೀಡಿದರು.



ಸಿಐಟಿಯು ಜಿಲ್ಲಾ ಉಪಾಧ್ಯಕ್ಷರಾದ ವಸಂತ ಆಚಾರಿಯವರು ಮಾತನಾಡುತ್ತಾ 'ಬಡವರಲ್ಲೇ ಬಡವರಾದ ಬೀಡಿ ಕಾರ್ಮಿಕರಿಗೆ ವಾರದಲ್ಲಿ ಎರಡು ಬಾರಿ ಬ್ಯಾಂಕಿಗೆ ವೇತನಕ್ಕಾಗಿ ಅಲೆದಾಡಿಸುವುದು ಅಸಾಧ್ಯವಾದ ಮಾತು. ಗ್ರಾಮೀಣ ಪ್ರದೇಶದಲ್ಲಿ ಬ್ಯಾಂಕಿಂಗ್ ವ್ಯವಸ್ಥೆಗಾಗಿ ಹಲವಾರು ಕಿಲೋ ಮೀಟ-ರ್ ಅಲೆದಾಡಬೇಕು. ಇನ್ನು 40% ಕಾರ್ಮಿಕರಿಗೆ ಬ್ಯಾಂಕ್ ಅಕೌಂಟೇ ಇಲ್ಲ. ಬೀಡಿ ಕಾರ್ಮಿಕರನ್ನು ಬೀದಿ ಪಾಲು ಮಾಡುವ ಈ ನೀತಿಯು ಜಿಲ್ಲೆಯ ಅಭಿವೃದ್ಧಿಗೂ ಮಾರಕ ಎಂದು ಅವರು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಹೆಚ್‌ಎಂಎಸ್‌ನ ರಾಜ್ಯಾಧ್ಯಕ್ಷರಾದ ಸುರೇಶ್ಚಂದ್ರ ಶೆಟ್ಟಿಯವರು ಕರಾವಳಿ ಜಿಲ್ಲೆಯ ಜೀವನಾಡಿ ಬೀಡಿ ಕೈಗಾರಿಕೆ. ಕಾರ್ಮಿಕರು, ಮಾಲಿಕರು ಮತ್ತು ಗುತ್ತಿಗೆದಾರರು ಸಂಘಟಿ-ತರಾಗಿ ಕೋಟ್ಪಾ ಕಾಯಿದೆಯ ವಿರುದ್ಧ ತೀವ್ರತರದ ಹೋರಾಟ ನಡೆಸಲಾಗಿದೆ. ತಾತ್ಕಾಲಿಕವಾಗಿ ಯಶಸ್ವಿಗೊಳಿಸಲಾಗಿದೆ ಎಂದರು.

ಪ್ರಾಸ್ತಾವಿಕವಾಗಿ ಸಿಐಟಿಯುನ ಜಿಲ್ಲಾಧ್ಯಕ್ಷರಾದ ಜೆ.ಬಾಲಕೃಷ್ಣ ಶೆಟ್ಟಿ, ಎಐಟಿಯುಸಿಯ ಪಿ.ಸಂಜೀವರವರು, ಸೀತಾರಾಮ ಬೇರಿಂಜೆಯವರು ಮಾತನಾಡಿದರು. ಪ್ರತಿಭಟನಾ ಸಭೆಯ ತರುವಾಯ ಕೇಂದ್ರ ಹಾಗೂ ರಾಜ್ಯ ಸರಕಾರಕ್ಕೆ ಲಿಖಿತ ಮನವಿಯನ್ನು ನೀಡಲಾಯಿತು.

ವೇದಿಕೆಯಲ್ಲಿ ಸಿಐಟಿಯು ಮುಂದಾಳುಗಳಾದ ಯು.ಬಿ.ಲೋಕಯ್ಯ, ಪದ್ಮಾವತಿ ಶೆಟ್ಟಿ, ಎಐಟಿಯುಸಿಯ ಸರಸ್ವತಿ ಕಡೆಶಿವಲ್ಯ, ಕಂಟ್ರಾಕ್ಟ್‌ದಾರರ ಸಂಘದ ಮುಂದಾಳುಗಳಾದ ಕೃಷ್ಣಪ್ಪ ತೊಕ್ಕೊಟ್ಟು, ಗಂಗಾಧರ ಶೆಟ್ಟಿ ಪುತ್ತೂರು, ಹಾಜಿ ಜಲೀಲ್ ಪುತ್ತೂರು, ಶರೀಫ್ ಪುತ್ತೂರು, ಲಕ್ಷ್ಮಣ ಫರಂಗಿಪೇಟೆ, ರವಿ ಉಡುಪಿ, ಸಿ.ಮಹಮ್ಮದ್ ಬೆಳ್ತಂಗಡಿ, ಆಲಿಯಬ್ಬ ಮೂಡುಶೆಡ್ಡೆ ಮುಂತಾದವರು ಉಪಸ್ಥಿತರಿದ್ದರು. ಕೊನೆಯಲ್ಲಿ ಎಐಟಿಯುಸಿಯ ಮುಂದಾಳು ಸುರೇಶ್‌ರವರು ಧನ್ಯವಾದವಿತ್ತರು.

ಸ್ಕೀಮ್ ನೌಕರರಿಂದ ದ.ಕ ಜಿಲ್ಲೆಯಲ್ಲಿ ಅಲ್ಲಲ್ಲಿ ಪ್ರತಿಭಟನೆ

ಸಿಐಟಿಯು ಅಖಿಲ ಭಾರತ ಸಮಿತಿ ನೀಡಿದ ಕ-ರೆಯಂತೆ ಅಕ್ಷರ ದಾಸೋಹ ನೌಕರರು, ಆಶಾ ಕಾರ್ಯಕರ್ತರು ಮತ್ತು ಅಂಗನವಾಡಿ ನೌಕರರು ದ.ಕ ಜಿಲ್ಲೆಯ ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿ ಜನವರಿ 20ರಂದು ಪ್ರತಿಭಟನೆ ನಡೆಸಿದರು.

ಸ್ಕೀಮ್ ನೌಕರರಿಗೆ ಕನಿಷ್ಟ ಕೂಲಿ ನಿಗದಿಗೊಳಿಸಬೇಕು, ಅಲ್ಲಿಯವರೆಗೂ ನೀಡುತ್ತಿರುವ ವೇತನ ಹೆಚ್ಚಿಸಬೇಕು; ಅವರನ್ನು ಸರಕಾರಿ ನೌಕರ-ರೆಂದು ಪರಿಗಣಿಸಬೇಕು; ಹಿಂದಿನ ಸರ್ಕಾರಗಳು ಘೋಷಣೆ ಮಾಡಿದ್ದ ಹೆಚ್ಚುವರಿ ಸಂಬಳವನ್ನು ಈಗಿನ ಸರ್ಕಾರ ಜಾರಿ ಮಾಡಬೇಕು; ಯೋಜನೆಗಳನ್ನು ಖಾಸಗಿಯವರಿಗೆ ಹಸ್ತಾಂತರಿಸಬಾರದು, ಹಸ್ತಾಂತರಿಸಿದಲ್ಲಿ ಸರ್ಕಾರ ಹಿಂತೆಗೆದುಕೊಳ್ಳಬೇಕು – ಎಂಬುದಾಗಿ ಎಲ್ಲ ಕಡೆ ಪ್ರತಿಭಟನಾಕಾರರು ಆಗ್ರಹಿಸಿದರು. ಎಲ್ಲ ತಾಲೂಕುಗಳಲ್ಲಿ ಅಕ್ಷರ ದಾಸೋಹ ನೌಕರ ಸಂಘಗಳು ಪ್ರತಿಭಟನಾ ಪ್ರದರ್ಶನ ನಡೆಸಿದವು.

ಮಂಗಳೂರು: ನಗರದ ಮಿನಿ ವಿಧಾನಸೌಧದಿಂದ ಅಕ್ಷರ ದಾಸೋಹ ನೌಕರರು ಮೆರವಣಿಗೆ ಹೊರಟು ಜಿಲ್ಲಾಧಿಕಾರಿ ಕಛೇರಿ ಎದುರು ಪ್ರತಿಭಟನಾ ಪ್ರದರ್ಶನ ನಡೆಸಿದರು. ಸಿಐಟಿಯು ದ.ಕ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಉಪಾಧ್ಯಕ್ಷರಾದ ವಸಂತ ಆಚಾರಿ, ಸಂಘದ ಜಿಲ್ಲಾಧ್ಯಕ್ಷೆ ಪದ್ಮಾವತಿ ಶೆಟ್ಟಿ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ಸಿಐಟಿಯು ಮುಂದಾಳುಗಳಾದ ಜಯಂತ ನಾಯಕ್, ಯೋಗೀಶ್ ಜಪ್ಪಿನಮೊಗರು, ಕೃಷ್ಣಪ್ಪ ಸಾಲ್ಯಾನ್ ಹಾಗೂ ಬಿಸಿಯೂಟ ನೌಕರ ಸಂಘದ ಮುಂದಾಳುಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಸುಳ್ಯ: ಬಿಸಿಯೂಟ ನೌಕರರು ಜಟ್ಟಿಪಳ್ಳದ ಸಂಘದ ಕಛೇರಿಯಿಂದ ಮೆರವಣಿಗೆ ಹೊರಟು ಸುಳ್ಯ ತಾಲೂಕು ಕಛೇರಿ ಎದುರು ಪ್ರತಿಭಟನೆ ನಡೆಸಿದರು. ಸಿಐಟಿಯು ಮುಖಂಡ ರಾಬರ್ಟ್ ಡಿ'ಸೋಜಾ ಮಾತನಾಡಿದರು. ಸಂಘದ ತಾಲೂಕು ಸಮಿತಿ ಪದಾಧಿಕಾರಿಗಳು ಪ್ರತಿಭಟನೆಯ ನೇತೃತ್ವವಹಿಸಿದ್ದರು.

ಪುತ್ತೂರು: ಬಿಸಿಯೂಟ ನೌಕರರು ತಮ್ಮ ತಾಲೂಕು ಸಂಘದ ವತಿಯಿಂದ ಪುತ್ತೂರು ಮಿನಿ ವಿಧಾನಸೌಧದ ಎದುರು ಪ್ರತಿಭಟನೆ ನಡೆಸಿದರು. ಪ್ರತಿಭಟನೆಯನ್ನುದ್ದೇಶಿಸಿ ಸಿಐಟಿಯು ಪುತ್ತೂರು ತಾಲೂಕು ಮುಖಂಡರಾದ ಪಿ.ಕೆ. ಸತೀಶನ್, ನೌಕರರ ಸಂಘದ ತಾಲೂಕು ಗೌರವಾಧ್ಯಕ್ಷೆ ಯಸೋದಾ ಮಾತನಾಡಿದರು. ಸಂಘದ ಮುಖಂಡರೂ ಭಾಗವಹಿಸಿದ್ದರು.

ಬಂಟ್ವಾಳ: ತಾಲೂಕಿನಲ್ಲಿ ಅಕ್ಷರ ದಾಸೋಹ ನೌಕರರು ಎಲ್ಲಾ ಶಾಲೆಗಳಲ್ಲಿ ಈ ದಿನ ಕೆಲಸವನ್ನು ಸ್ಥಗಿತಗೊಳಿಸಿದರು. ಬಂಡ್ವಾಳ ತಾಲೂಕು ಕಛೇರಿ ಎದುರು ಅಕ್ಷರ ದಾಸೋಹ ನೌಕರರ ಸಂಘದ ಸದಸ್ಯರು ಮತ್ತು ಆಶಾ ಕಾರ್ಯಕರ್ತೆಯರ ತಾಲೂಕು ಸಂಘದ ಸದಸ್ಯರು ಪ್ರತಿಭಟನಾ ಪ್ರದರ್ಶನ ನಡೆಸಿದರು. ಸಿಐಟಿಯು ಬಂಡ್ವಾಳ ತಾಲೂಕು ಕಾರ್ಯದರ್ಶಿ ರಾಮಣ್ಣ ವಿಟ್ಲ, ಮುಖಂಡರಾದ ಸಂಜೀವ ಬಂಗೇರ ಮತ್ತು ಸಂಘಗಳ ನಾಯಕರೂ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ವಿಟ್ಲ ಐಸಿಡಿಎಸ್ ಯೋಜನೆಯ ಅಂಗನವಾಡಿ ನೌಕರರು ತಮ್ಮ ಯೋಜನಾ ನೌಕರರ ಸಂಘದ ನೇತೃತ್ವದಲ್ಲಿ ವಿಟ್ಲ ಸಿಡಿಪಿಓ ಕಛೇರಿ ಎದುರು ಪ್ರದರ್ಶನ ನಡೆಸಿ, ಬೇಡಿಕೆಗಳ ಮನವಿಯನ್ನು ಸಿಡಿಪಿಓಗೆ ಸಲ್ಲಿಸಿದರು.

ದಲಿತರಿಗೆ ಹೆಣ ಹೂಳಲೂ....

ಪುಟ 3 ರಿಂದ

ಇತ್ತ ಪೊಲೀಸರ ಸಹಾಯದಿಂದ ಹೆಣವನ್ನು ವ್ಯಾನಿಗೆ ಇಟ್ಟು 4–5 ಜನರನ್ನು ಕೂಡಿಕೊಂಡು ಹೊಸಾರೆ ರೆವಿನ್ಯೂ ಇನ್ಸ್‌ಪೆಕ್ಟರ್ ಚನ್ನಪ್ಪ, ವಿಲೇಜ್ ಅಕೌಂಟೆಂಟ್ ಮಹೇಶಗೌಡ. ಗಡಬನಹಳ್ಳಿಗೆ ವಾಪಸ್ಸಾದರು. ದಲಿತರದ್ದೇ ಇದ್ದ ಚುರೂಪಾರು ಜಮೀನಿನಲ್ಲಿ ರಾತ್ರಿ 12 ಗಂಟೆ ಸುಮಾರಿನಲ್ಲಿ ಬುಲ್ಡೋಜರ್ ತರಿಸಿ ಗುಂಡಿ ತೆಗೆದು ಬುಲ್ಡೊಜರ್‌ನಿಂದ ಹೆಣ ಮುಚ್ಚಿ ಪೊಲೀಸರು ತಮ್ಮ ಕ್ರೌರ್ಯವನ್ನು ದಲಿತರ ಮೇಲೆ ತೋರಿಸಿದ್ದಾರೆ. ಸರ್ಕಾರ ಅತ್ಯಂತ ದಲಿತ ವಿರೋಧಿಯಾಗಿದೆ ಎಂಬುದು ದಿಟವಾಗಿದೆ. ಜನವರಿ 21ರಂದು ಜಿಲ್ಲಾಧಿಕಾರಿ ಅವರ ಸಿಬ್ಬಂದಿ ಊರಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದೆ ಅಷ್ಟೇ.

ದುರಾದೃಷ್ಟಾವಶಾತ್ ಮೂಡಿಗೆರೆ ವಿಧಾನಸಭಾ ಕ್ಷೇತ್ರ ಮೀಸಲು ಕ್ಷೇತ್ರ. ಬಿ.ಬಿ.ಲಿಂಗಯ್ಯರವರು ಶಾಸಕರು. ದಲಿತ ಶಾಸಕರಿರುವ ಕ್ಷೇತ್ರದಲ್ಲಿ ದಲಿತರಿಗೆ ಈ ದುರ್ಗತಿ. ಇತ್ತ ಹೆಣ ಮುಚ್ಚಿದರು, ಅತ್ತ ಬಂಧಿತರನ್ನು ಬಿಡುಗಡೆ ಮಾಡಿದರು ಚಾಣಕ್ಯ ಅಧಿಕಾರಿಗಳು.

ಕೊರಗ ಕುಟುಂಬಗಳಿಗೆ ನಿವೇಶನ ನೀಡಲು ಮಂಗಳೂರು ಪಾಲಿಕೆ ಎದುರು ಪ್ರತಿಭಟನೆ

ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಂತೂರು ಎಂಬಲ್ಲಿ 2011ರಲ್ಲಿ ರಾಷ್ಟ್ರೀಯ ಹೆದ್ದಾರಿ ಅಗಲಗೊಳಿಸುವ ಸಂದರ್ಭದಲ್ಲಿ 6 ಕೊರಗ ಕುಟುಂಬಗಳನ್ನು ಒಕ್ಕಲೆಬ್ಬಿಸಲಾಗಿತ್ತು. ಮೂಲನಿವಾಸಿಗಳಾದ ಕೊರಗರಿಗೆ ಖಾಯಂ ಮನೆ ವ್ಯವಸ್ಥೆ ಮಾಡಬೇಕೆಂದೂ, ಅಲ್ಲಿಯವರೆಗೆ ಅವರು ವಾಸವಾಗಿರುವ ಮನೆಗಳಿಗೆ ಬಾಡಿಗೆ ವ್ಯವಸ್ಥೆ ಮಾಡಬೇಕೆಂದೂ ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಹಾಗೂ ಸಿಪಿಐ(ಎಂ) ಮಂಗಳೂರು ನಗರ ಸಮಿತಿ ಹಲವಾರು ಬಾರಿ ಹೋರಾಟ ಮಾಡಿದ ಫಲವಾಗಿ ಹಾಗೂ ರಾಷ್ಟ್ರೀಯ ಪರಿಶಿಷ್ಟ ವರ್ಗಗಳ ಕಮೀಷನರ್‌ಗೆ ದೂರು ಸಲ್ಲಿಸಿದುದರ ಪರಿಣಾಮವಾಗಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹಾಗೂ ನಗರ ಪಾಲಿಕೆ ಇಲ್ಲಿಯವರೆಗೂ ಅವರುಗಳ ಮನೆ ಬಾಡಿಗೆ ಪಾವತಿ ವ್ಯವಸ್ಥೆ ಮಾಡುವಂತಾಗಿದೆ.

ಜಿಲ್ಲಾಡಳಿತ ಹಾಗೂ ನಗರಾಡಳಿತಗಳ ನಿಧಾನಗತಿಯಿಂದಾಗಿ ಒಂದು ವರ್ಷದ ಹಿಂದೆ ಈ 6 ಕುಟುಂಬಗಳಿಗೆ ಪಾಲಿಕೆ ವ್ಯಾಪ್ತಿಯ ಸರಿಪಳ್ಳ ಎಂಬಲ್ಲಿ ಮನೆ ನಿವೇಶನ ಹಾಗೂ ಮನೆಯನ್ನು ಕಟ್ಟುವ ಬಗ್ಗೆ ನಗರ ಪಾಲಿಕೆ ಮಂಜೂರಾತಿ ನೀಡಿದ್ದರೂ, ಒಂದು ವರ್ಷದ ಬಳಿಕವೂ ನಿವೇಶನ ಗುರುತಿಸಿ ಹೊಂಡವಾಗಿರುವ ನಿವೇಶನವನ್ನು ತುಂಬಿಸಿ ಸಮತಟ್ಟು ಮಾಡುವ ಕೆಲಸವನ್ನು ಹಲವು ಮನವಿಗಳ ಅನಂತರವೂ ಮಾಡಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಜನವರಿ 23ರಂದು ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ನೇತೃತ್ವದಲ್ಲಿ ಪಾಲಿಕೆ ಕಛೇರಿ ಎದುರು ಪ್ರತಿಭಟನಾ ಧರಣಿಯನ್ನು ನಡೆಸಿ, ಬಳಿಕ ಮೇಯರ್ ಅವರಿಗೆ ಮನವಿ ಸಲ್ಲಿಸಿ ಎಚ್ಚರಿಕೆ ನೀಡಲಾಯಿತು.

ಪ್ರತಿಭಟನೆಯನ್ನುದ್ದೇಶಿಸಿ ಸಿಪಿಐ(ಎಂ) ಮಂಗಳೂರು ನಗರ ಉತ್ತರ ಸಮಿತಿ ಕಾರ್ಯದರ್ಶಿ ಕೃಷ್ಣಪ್ಪ ಕೊಂಚಾಡಿ, ನಗರ ದಕ್ಷಿಣ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಾಳ್, ಸಿಪಿಐ(ಎಂ) ದ.ಕ ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ, ಜಿಲ್ಲಾ ಮುಖಂಡರಾದ ಜೆ. ಬಾಲಕೃಷ್ಣ ಶೆಟ್ಟಿ, ವಾಸುದೇವ ಉಚ್ಚಿಲ, ಯೋಗೀಶ್ ಜಪ್ಪಿನಮೊಗರು, ದಲಿತ ಹಕ್ಕುಗಳ ಸಮಿತಿ ಸಂಚಾಲಕರಾದ ಲಿಂಗಪ್ಪ ನಂತೂರು ಮಾತನಾಡಿದರು. ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಮಂಗಳೂರು ನಗರ ಘಟಕದ ಅಧ್ಯಕ್ಷರಾದ ಶಾಂತ ನಾಯ್ಕ್ ಮತ್ತು ಕಾರ್ಯದರ್ಶಿ ಶಶಿಕಾ ಎನ್. ಪ್ರತಿಭಟನೆಯ ನೇತೃತ್ವವಹಿಸಿದ್ದರು.

ದೌರ್ಜನ್ಯದ ಸಾಲ ವಸೂಲಾತಿ ವಿರುದ್ಧ ಪ್ರತಿಭಟನೆ

ಕೊಪ್ಪಳ ಜಿಲ್ಲೆಯಲ್ಲಿ ಹೆಚ್ಚಾಗುತ್ತಿರುವ ಗುಂಪು ಸಾಲದ ವಸೂಲಾತಿಯ ಕಿರುಕುಳದ ವಿರುದ್ಧ ಜನವರಿ 24ರಂದು ಮಹಿಳೆಯರು ಪ್ರತಿಭಟನೆ ನಡೆಸಿದರು. ಜಿಲ್ಲಾಧಿಕಾರಿ ಕಛೇರಿ ಬಳಿ ನಡೆದ ಪ್ರತಿಭಟನೆಯಲ್ಲಿ ಮೈಕ್ರೋ ಫೈನಾನ್ಸ್ ಮತ್ತು ಸ್ವಸಹಾಯ ಸಂಘಗಳ ದೌರ್ಜನ್ಯಗಳನ್ನು ಖಂಡಿಸಿದರು.

ಇದೇ ವೇಳೆ ಮಹಿಳೆಯರು ಸಾಲ ಪಡೆದಿರುವ ಮೈಕ್ರೋ ಫೈನಾನ್ಸ್ ಮತ್ತು ಸ್ವಸಹಾಯ ಸಂಘದ ಸಾಲವನ್ನು ರಾಜ್ಯ ಸರಕಾರವೇ ಭರಿಸಬೇಕು ಹಾಗೂ ದೌರ್ಜನ್ಯ ನಡೆಸುವ ಮೈಕ್ರೋ ಫೈನಾನ್ಸ್‌ಗಳ ಮೇಲೆ ಕೇಸ್ ದಾಖಲಿಸಬೇಕೆಂದು ಪ್ರತಿಭಟನಾಕಾರರು ಒತ್ತಾಯಿಸಿದರು. ನೋಟು ರದ್ದತಿ ಪರಿಣಾಮವಾಗಿ ಸರಿಯಾದ ರೀತಿಯಲ್ಲಿ ಹಣ ವಿತರಿಸದೇ ಜನರಿಗೆ ಕಷ್ಟ ನೀಡುತ್ತಿರುವ ಕೇಂದ್ರ ಸರ್ಕಾರದ ವಿರುದ್ಧವು ಆಕ್ರೋಶ ವ್ಯಕ್ತಪಡಿಸಿದರು.

ಜನವರಿ 06ರಂದು ಸಹ ಅಶೋಕ ವೃತ್ತದಲ್ಲಿ ಪ್ರತಿಭಟನೆ ನಡೆಸಿದರೂ ಸಹ ಯಾವುದೇ ಕ್ರಮಕೈಗೊಳ್ಳಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಕೆಪಿಆರ್‌ಎಸ್ ಜಿಲ್ಲಾಧ್ಯಕ್ಷರಾದ ಜಿ.ನಾಗರಾಜ್, ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ಗುರುರಾಜ್ ದೇಸಾಯಿ, ಮುಖಂಡರಾದ ಖಾಸಿಂ ಸರ್ದಾರ್, ಅಮರೇಶ್ ಕಡಗದ್, ನವೀನ್‌ಕುಮಾರ್, ಎ.ಎಲ್.ತಿಮ್ಮಣ್ಣ, ಸುಂಕಪ್ಪ ಗದಗ್, ದೇವಮ್ಮ, ಗೀತಾ, ಸುನೀತಾ, ಯಮುನಮ್ಮ ಸೇರಿದಂತೆ ಅನೇಕರಿದ್ದರು.

ಗುಬ್ಬಿ ದಲಿತ ಯುವಕ ಅಭಿಷೇಕ್ ಮೇಲೆ ಬರ್ಬರ ದೌರ್ಜನ್ಯ



ನನ್ನ ಮಗನ ಸೊಂಟ ಮುರಿದು ಹೋಗಿದೆ ಸಾರ್. ಹಾಂಗ್ ಹೊಡಿದ್ದಾರೆ. 'ನನ್ನ ಮಗನಿಗೆ ಬಂದ ಸ್ಥಿತಿ ಯಾವ ಮಕ್ಕಳಿಗೂ ಬರಬಾರ್ದು' ಎಂದು ಕಣ್ಣೀರೂ ಹಾಕಿದವರು ಅಭಿಷೇಕ್ ತಂದೆ. ನಮಗೆ ಹೇಳಿದ್ರೆ ನಾವೇ ಹೊಡೆದು ಬುದ್ಧಿ ಕಲಿಸ್ತಿದ್ವಿ ಅಂತ ಗೋಳಿಡುತ್ತಿದ್ದಾಳೆ ಅಭಿಷೇಕ್ ತಾಯಿ. ತುಮಕೂರಿನಲ್ಲಿ ದಲಿತ ಯುವಕ ಅಭಿಷೇಕ್ ಮೇಲೆ ಹಲ್ಲೆ ನಡೆದಿದೆ. ಇದೊಂದು ಅಮಾನವೀಯ ಕೃತ್ಯ.

ತುಮಕೂರು ಜಿಲ್ಲೆಯ ಗುಬ್ಬಿಯಲ್ಲಿ ಅಭಿಷೇಕ್ ಎಂಬ ಪರಿಶಿಷ್ಟ ಜಾತಿ ಮಾದಿಗ ಜನಾಂಗಕ್ಕೆ ಸೇರಿದ ಯುವಕ. ಅದೇ ಊರಿನ ಮೇಲ್ ಜಾತಿ ಕಾಡು ಪ್ರಕಾಶ್ ಮಗಳನ್ನೂ ಪ್ರೀತಿಸುತ್ತಿದ್ದನೆಂದು ತಿಳಿದು ಬಂದಿದೆ. ಈ ವಿಷಯ ತಿಳಿದು ಹುಡುಗನ ಜಾತಿ ಮಾದಿಗನೆಂದು ತಿಳಿದ ತಕ್ಷಣ ಕಾಡುಪ್ರಕಾಶ್, ನನ್ನ ಮರ್ಯಾದೆ ಹೋಯಿತೆಂದು ವ್ಯಾಘ್ರನಾಗಿ ಅವನ ರೌಡಿ ಪಟಾಲಂಗಳ ಜೊತೆ ಹೊಂಚು ಹಾಕಿ ಅಭಿಷೇಕ್‌ನ ಮೇಲೆ ಜನವರಿ 15ರಂದು ಹಲ್ಲೆ ನಡೆಸಲು ನಿರ್ಧರಿಸಿದ.

ಉಪಾಯವಾಗಿ ಅಭಿಷೇಕ್‌ನನ್ನು ತನ್ನ ತೋಟದ ಮನೆಗೆ ಕರೆದೊಯ್ದು ಆತನನ್ನು ಬೆತ್ತಲೆಗೊಳಿಸಿ ಮನಸೋ ಇಚ್ಛೆ ಸೊಂಟ, ಕಾಲು, ಕೈ, ಮುರಿಯುವಂತೆ ಬರ್ಬರವಾಗಿ ಹೊಡೆದಿದ್ದಾರೆ. ಪ್ರಜ್ಞಾಹೀನತೆಯಲ್ಲಿದ್ದ ಅಭಿಷೇಕ್ ಸತ್ತೇ ಹೋದನೆಂದು ತಿಳಿದು ಪಕ್ಕದ ಸ್ಮಶಾನದಿಂದ ಹೆಣಕ್ಕೆ ಒದೆಸಿದ ಬಟ್ಟೆಯನ್ನೂ ಹೊದಿಸಿದ್ದಾರೆ. ಇಸ್ಪೀಟ್ ದಂಧೆಗಳಲ್ಲಿ ತೊಡಗಿಸಿಕೊಂಡು ಹಿಂದೊಮ್ಮೆ ಗುಬ್ಬಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ಕೂಡ ಕಾಡು ಪ್ರಕಾಶ್ ವಿರುದ್ಧ ದಾಖಲಾಗಿದೆ. ರಿಯಲ್ ಎಸ್ಟೇಟ್, ರೌಡಿ ಧಂದೆ ನಡೆಸುತ್ತಿದ್ದನೆಂದು ತಿಳಿದುಬಂದಿದೆ. ಈತ ಇಷ್ಟಕ್ಕೆ ತೃಪ್ತಿಯಾಗಲಿಲ್ಲ. ಚಪ್ಪಲಿ ಹಾರ ಅಭಿಷೇಕನಿಗೆ ಹಾಕಿ ಗುಬ್ಬಿ ಹುಡುಗಿಯರ ಸಹವಾಸಕ್ಕೆ ಬಂದರೆ ಇದೇ ಗತಿ ಎಂದೂ ಬೊಬ್ಬರಿಸಿದ.

ಬೆತ್ತಲೆಗೊಳಿಸಿದ ಈ ಹಲ್ಲೆ ಚಿತ್ರಣವನ್ನು ಮೊಬೈಲ್ ಮೂಲಕ ಚಿತ್ರೀಕರಿಸಿ ವಾಟ್ಸ್‌ಆಪ್ ಮೂಲಕ ಹರಿಬಿಟ್ಟು ಅವಮಾನಗೊಳಿಸಿದ್ದಾರೆ. ಮಾಧ್ಯಮಗಳ ಮೂಲಕ ಸುದ್ದಿ ತಿಳಿದ ಅಭಿಷೇಕ್ ಕುಟುಂಬ ಪೊಲೀಸರಿಗೆ ದೂರು ನೀಡಿದ್ದಾರೆ. ಈ ಬಗ್ಗೆ ತುಮಕೂರು ಪೊಲೀಸರು ಸೂಪರಿಂಟೆಂಡಂಟ್ ಕಾನೂನು ಕ್ರಮ ಜರುಗಿಸಿ 4 ಜನರನ್ನು ಬಂದಿಸಿದ್ದಾರೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ(ದೌರ್ಜನ್ಯ ತಡೆ) ಕಾಯಿದೆ ಆಧಾರಿಸಿ ಕೇಸು ದಾಖಲು ಮಾಡಲಾಗಿದೆ.

ಹಾಗೆ ನೋಡಿದರೆ ತಿಗಳರ ಸಮುದಾಯವೇನು ಸಾಮಾಜಿಕವಾಗಿ ಅತ್ಯಂತ ಮುಂದುವರಿದ ಅಥವಾ ಮೇಲ್ ವರ್ಗವಲ್ಲ. ಕಷ್ಟ ಪಟ್ಟು ದುಡಿದು ಬದುಕು ನಡೆಸುವ ಶ್ರಮಿಕ ಸಮುದಾಯವೇ, ಸಾಮಾಜಿಕವಾಗಿ ಅತ್ಯಂತ ಮುಂದುವರಿದ ಅಥವಾ ಮೇಲ್ ವರ್ಗವಲ್ಲ. ಆದರೆ ಭಾರತದ ವರ್ಣಾಶ್ರಮ ನೀತಿಗಳು ಹೇರಿರುವ ಜಾತಿ ಪದ್ಧತಿ ದಲಿತರನ್ನೂ ಕೀಳಾಗಿ ಕಾಣುವ ವ್ಯವಸ್ಥೆಯನ್ನು ನಿರ್ಮಿಸಿದೆ.

ಈ ಘಟನೆ ನಡೆದ 3–4 ದಿನಗಳ ನಂತರ ತಮ್ಮ ಮೇಲಿರುವ ಆರೋಪಗಳಿಂದ ತಪ್ಪಿಸಿಕೊಳ್ಳಲು ಪೋಕ್ಸೋ ಕಾಯಿದೆ ಅನ್ವಯ ಕೌಂಟರ್ ಕೇಸು ಮಾಡಿದ್ದಾರೆ. ಈ ದೂರಿನಿಂದ ಇನ್ನೂ ಚೇತರಿಸಿ ಕೊಳ್ಳದೆ ಇರುವ ಅಭಿಷೇಕ್ ತುಮಕೂರು ಜನರಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವಾಗಲೇ ಈ ರೀತಿ ಅಮಾನವೀಯ ದೌರ್ಜನ್ಯ ನಡೆಸಲು ಮುಂದಾಗಿರುವುದು ಖಂಡನೀಯ ವಿಷಯವಾಗಿದೆ.

ಈ ದೌರ್ಜನ್ಯವನ್ನು ಖಂಡಿಸಿ, ಜನವರಿ 27ರಂದು ತುಮಕೂರಿನಲ್ಲಿ ದಲಿತ ಹಕ್ಕುಗಳ ಸಮಿತಿ ಪ್ರತಿಭಟನೆ ಮಾಡಿದೆ.

–ಗೋಪಾಲಕೃಷ್ಣ ಅರಳಹಳ್ಳಿ

ಪದ್ಮಶ್ರೀ ಸುಕ್ರಿ ಗೌಡ್ರು ಅವರಿಗೆ ಅಭಿನಂದನೆಗಳು



ಅಣ್ಣಾಗಾರೆತ್ತು ತಮ್ಮಾಗೇರಡೆತ್ತು
ಹೂಡಾಡ್ದೋ ಗದ್ದೆಯ ಬಯಲಲ್ಲಿ
ಏನಾಬಿತ್ತಿ ಏನಾ ಬೆಳೆದೆಯೋ
ಸಣ್ಣ ಮಲ್ಲಿಗಿ ಬಿತ್ತಿ ಬೆಳೆದೆಯೋ॥

ಒರಗೋಳಿ ಭತ್ತ ಹೊಯ್ದೆ ಮನಗೋಳಿ ನೆಂಟರೆ ಬಂದೋ,
ನೋಡಣ್ಣಲಿವರ ಮನೆ ಸಿರಿಯೋ ಮಂಟಪ ಸಿರಿಯೋ..
ದನಮೆಂದೆ ದಾನಿ ಬೆಳೆದಾವೋ ಕರಮೆಂದೆ ಕರ್ಕಿಯ ತಿರ್ಗದಾವೋ॥

ಸಹಸ್ರವರ್ಷಗಳ ಕಾಲ ತನ್ನ ಜನಾಂಗದ ಒಳನೋಟವನ್ನು ಒಡಲಲ್ಲಿಟ್ಟುಕೊಂಡು ಬಂದ ಹಾಲಕ್ಕಿ ಬುಡಕಟ್ಟು ಜನಾಂಗ ಹಲವಾರು ಜಾನಪದ ಕಲಾವಿದರನ್ನು ಹೋರಾಟಗಾರರನ್ನು ಕೊಟ್ಟಿದೆ. ಪ್ರೀತಿಯ ಸುಕ್ರಿ ಗೌಡ್ರು ಅರವತ್ತರ ದಶಕದಲ್ಲಿ ಅಂದರೆ ಯುವಾವಸ್ಥೆಯಲ್ಲಿಯೇ ಸಾಮಾಜಿಕ ಜೀವನಕ್ಕೆ ತೆರೆದುಕೊಂಡವರು. ಹಲವಾರು ಸಾಮೂಹಿಕ ಹೋರಾಟಗಳಲ್ಲಿ ಪಾಲ್ಗೊಂಡಿದ್ದಾರೆ. ತನಗೆ ಶಿಕ್ಷಣ ಇಲ್ಲದಿದ್ದರೂ ಬೇರೆಯವರು ಶಿಕ್ಷಣ ಕಲಿಯಲಿ ಎಂದು ಸಾಕ್ಷರತೆಯಲ್ಲಿ ರಾಯಭಾರಿಯಂತೆ ಕೆಲಸ ಮಾಡಿದ್ದಾರೆ. ಭೂಮಿ ಮತ್ತು ಸಾರಾಯಿ ವಿರೋಧಿ ಹೋರಾಟದಲ್ಲಿ ಮತ್ತು ತಮ್ಮ ಜನಾಂಗವನ್ನು ಸಂವಿಧಾನ ಬದ್ಧವಾಗಿ ಬುಡಕಟ್ಟೆಂದು ಘೋಷಿಸಲು ಆಗ್ರಹಿಸಿ ನೂರಾರು ಹೋರಾಟಗಳಲ್ಲಿ ನೇತೃತ್ವಕೊಟ್ಟಿದ್ದಾರೆ. ತನ್ನೂರು ಮೂಲಸೌಕರ್ಯ ಕಾಣುವಂತಾಗಲಿಕ್ಕೂ ಹೋರಾಟಕ್ಕೆ ಜನರನ್ನು ಕರೆದೊಯ್ದಿದ್ದಾರೆ. ಇವರ ಮುಗ್ಧತೆಯನ್ನು ಹಲವು ವೇದಿಕೆಗಳು ಬಳಸಿಕೊಂಡಿವೆ. ಅಂತೆಯೇ ಕೆಲವು ಹೋರಾಟಗಳು ಕೀರ್ತಿಯನ್ನು ತಂದುಕೊಟ್ಟಿವೆ. ಕನ್ನಡ ವಿವಿ ನಾಡೋಜ ಪ್ರಶಸ್ತಿಯನ್ನೂ ನೀಡಿ ಗೌರವಿಸಿದೆ. ನಾಡಿನ ಹಿರಿಕಿರಿಯ ಜಾನಪದ ತಜ್ಞರೆಲ್ಲರಿಗೂ ಮನೆಮಾತು ಈಕೆ. ವೈಕ್ತಿಕವಾಗಿ ನಮ್ಮನ್ನು ತುಂಬಾ ಪ್ರೀತಿಸುವವರು. ಆಗಾಗ ಬಂದು ಮಾತಾಡುವವರು. ಅವರಿಗೆ ನಮ್ಮೆಲ್ಲ ಶುಭಾಶಯಗಳು.

ವಿಠ್ಠಲ ಭಂಡಾರಿ

ಅನಂತಕುಮಾರ ಹೆಗಡೆ ಬಂಧನಕ್ಕೆ ವಿಳಂಬ:
ಸಿಪಿಐ(ಎಂ) ಪ್ರತಿಭಟನೆ



ಉತ್ತರ ಕನ್ನಡ ಜಿಲ್ಲೆಯ ಶಿರಸಿ ಟಿ.ಎಸ್.ಎಸ್. ಆಸ್ಪತ್ರೆಯಲ್ಲಿ ವೈದ್ಯರ ಮೇಲೆ ಹಲ್ಲೆ ನಡೆಸಿ ಹಲವು ದಿನಗಳು ಕಳೆದರೂ ಪೋಲಿಸರು ಸಂಸದ ಅನಂತಕುಮಾರ ಹೆಗಡೆಯವರನ್ನು ಬಂಧಿಸದಿರುವುದನ್ನು ಖಂಡಿಸಿ, ಕೂಡಲೇ ಬಂಧಿಸಬೇಕೆಂದು ಒತ್ತಾಯಿಸಿ ಸಿಪಿಐ(ಎಂ) ಉತ್ತರ ಕನ್ನಡ ಜಿಲ್ಲಾ ಸಮಿತಿಯಿಂದ ಪ್ರತಿಭಟನೆ ನಡೆಸಿದರು.

ಜನವರಿ 17ರಂದು ಕಾರವಾರದಲ್ಲಿ ನಡೆದ ಪ್ರತಿಭಟನೆಯಲ್ಲಿ ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಶಾಂತಾರಾಮ ನಾಯಕ ಮಾತನಾಡಿ, ಪೋಲಿಸ್ ಇಲಾಖೆಗೆ ನಾಚಿಕೆಗೇಡಿನ ವಿಷಯ. ಒಬ್ಬ ಎಮ್.ಪಿ.ಯಾಗಿ ಸಾಮಾನ್ಯ ಜನರ ಹಾಗೆ ಗುಂಡಾಗಿರಿ ಮಾಡುತ್ತಿದ್ದರೂ ಆಡಳಿತ ಅವರನ್ನು ಬಂಧಿಸಲು ವಿಫಲವಾಗಿದೆ ಎಂದು ಖಂಡಿಸಿದರು. ಮುಖಂಡರಾದ ಶ್ಯಾಮನಾಥ ನಾಯ್ಕ, ಮೋಹಿನಿ ನಮಸೇಕರ, ವಿಷ್ಣು ನಾಯ್ಕ, ಗೀತಾ ರಾಯ್ಕರ, ಮಾಯಾ, ಗಣೇಶ ಮುಂತಾದವರು ನೇತೃತ್ವ ವಹಿಸಿದ್ದರು.

'ಪ್ರಕೃತಿಯಲ್ಲಿ ದೇವರನ್ನು ಕಾಣಬೇಕು ಎಂದರು ಕುವೆಂಪು'

ಭಕ್ತಿಯನ್ನು ಬಂಡವಾಳ ಮಾಡಿಕೊಂಡವರು ಜನರನ್ನು ಶೋಷಣೆ ಮಾಡುತ್ತಿದ್ದಾರೆ ಎಂದು ತುಮಕೂರು ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕ ಡಾ.ನಾಗಭೂಷಣ ಬಗ್ಗನಡು ತಿಳಿಸಿದ್ದಾರೆ.

ತುಮಕೂರು ವಿಶ್ವವಿದ್ಯಾಲದ ಕಲಾ ಕಾಲೇಜು ಸಭಾಂಗಣದಲ್ಲಿ ಸಮುದಾಯ ಸಂಘಟನೆಯಿಂದ "ಕುವೆಂಪು ಸಾಹಿತ್ಯದಲ್ಲಿ ವೈಚಾರಿಕತೆ" ಕುರಿತ ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ದೇವರು ಜನರಲ್ಲಿ ಭಯ ಹುಟ್ಟಿಸುತ್ತದೆ. ಭಯ ಹುಟ್ಟಿದಾಗ ಭಕ್ತಿ ಮೂಡುತ್ತದೆ. ಇಂತಹ ಸ್ಥಿತಿಯಲ್ಲಿ ಭಕ್ತ ಭಯದಿಂದಲೇ ದೇವರಿಗೆ ಕಾಣಿಕೆ ಸಲ್ಲಿಸುವುದು ಕಂಡು ಬರುತ್ತದೆ. ಪ್ರತಿಯೊಂದು ದೇವರುಗಳು ಹೈಜಾಕ್ ಆಗಿವೆ. ಇಂತಹ ಪಟ್ಟಭದ್ರರಿಂದ ದೇವರನ್ನು ಬಿಡುಗಡೆ ಮಾಡಬೇಕಾಗಿದೆ. ವಚನಕಾರರು ದೇಹದಲ್ಲಿಯೇ ದೇವಾಲಯವನ್ನು ಕಂಡರು. ಸ್ವರ್ಗನರಕಗಳು ಇಲ್ಲಿಯೇ ಇವೆ ಎಂಬುದನ್ನು ಸಾರಿದರು. ಕುವೆಂಪು ಕೂಡ ಪ್ರಕೃತಿಯಲ್ಲಿ ದೇವರನ್ನು ಕಾಣಬೇಕು ಎಂಬುದನ್ನು ಹಲವು ಕವನಗಳಲ್ಲಿ ಕಂಡರಿಸಿದ್ದಾರೆ ಎಂದು ಹೇಳಿದರು.

ದೇವರಿಗೆ ವಜ್ರದ ಕಿರೀಟಗಳನ್ನು ಮಾಡಿಸಲಾಗುತ್ತದೆ. ಅನೈತಿಕ ಮಾರ್ಗದಿಂದ ದುಡಿದವರು ಇಂತಹ ಕಿರೀಟಗಳನ್ನು ಮಾಡಿಸಲು ಸಾಧ್ಯ. ಕಿರೀಟಗಳಿಲ್ಲದೆ ಇದ್ದರೆ ದೇವರು ಇರುವುದಿಲ್ಲವೇ? ಅದಕ್ಕೆ ಕುವೆಂಪು ಹೇಳಿದ್ದು ಪ್ರಕೃತಿಯಲ್ಲಿ ದೇವರನ್ನು ಕಾಣು ಎಂದು. ದೇವರನ್ನು ಪ್ರಕೃತಿಯ ಸೊಬಗಿನಲ್ಲಿ ಕಾಣಬೇಕು ಎಂದು ಕುವೆಂಪು ಹೇಳಿದರು. ನೂರು ದೇವರನ್ನೆಲ್ಲ ನೂಕಾಚೆ ದೂರ, ಗುಡಿ ಚರ್ಚು ಮಸೀದಿಗಳನ್ನು ಬಿಟ್ಟು ಹೊರಬರ ಬೇಕು. ಆಗ ಮಾತ್ರ ಮನುಷ್ಯ ಎಲ್ಲರೊಂದಿಗೆ ಬೆರೆಯಲು ಸಾಧ್ಯ. ಮನುಷ್ಯ ಮನುಷ್ಯರ ನಡುವೆ ಪ್ರೀತಿ ಇರಬೇಕು. ಸಹಬಾಳ್ವೆಯಿಂದ ಬದುಕಬೇಕು ಎಂದು ಕುವೆಂಪು ಹೇಳಿದ್ದರು ಎಂದರು.

ಇಂದು ಜಾತಿ, ಮತಧರ್ಮಗಳನ್ನು ಕೆಲವೇ ಜನರು ದುರ್ಬಳಕೆ ಮಾಡಿಕೊಂಡು ಜನರನ್ನು ಮೌಢ್ಯದ ಕೂಪದಲ್ಲಿ ಮುಳುಗುವಂತೆ ಮಾಡಿದ್ದಾರೆ. ಕಂದಾಚಾರ, ಮೌಢ್ಯ, ಬ್ರಾಹ್ಮಣ್ಯದಿಂದ ಹೊರ ಬಂದು ಸರ್ವಜನಾಂಗದ ಸುಂದರ ನಾಡನ್ನು ಕಟ್ಟಬೇಕೆಂದು ಕುವೆಂಪು ಸಾರಿದರು. ಆದರೆ ಇಂದು ಇದಕ್ಕೆ ವಿರುದ್ಧವಾಚ ಚಲನೆ ಸಮಾಜದಲ್ಲಿ ಕಂಡು ಬರುತ್ತಿದೆ ಎಂದು ತಿಳಿಸಿದರು.

ಮಹಿಳೆಯ ಮೇಲೆ ಇನ್ನಿಲ್ಲದ ನಿಯಮಗಳನ್ನು ಹೇರಲಾಗಿದೆ. ಮಹಿಳೆಯ ಮೇಲೆ ದೆವ್ವ ಬಂದರೆ, ಪುರುಷನ ಮೇಲೆ ದೇವರು ಬರುತ್ತದೆ. ಮಹಿಳೆ ಮದುವೆಯಾಗದಿದ್ದರೂ ಮರ ಸುತ್ತಬೇಕು. ಮದುವೆಯಾದ ಮೇಲೂ ಮರ ಸುತ್ತುವ ಕೆಲಸ ನಡೆಯುತ್ತದೆ. ಇದನ್ನು ದೇವರ ಅರ್ಚಕರು ಹೇರಿದ್ದಾರೆ. ನಿತ್ಯವೂ ಜ್ಯೋತಿಷಿಗಳು ಜನರನ್ನು ಮರುಳು ಮಾಡುತ್ತಲೇ ಇದ್ದಾರೆ. ಜ್ಯೋತಿಷ್ಯದ ಹೆಸರಿನಲ್ಲಿ ಮಹಿಳೆಯರನ್ನು ಶೋಷಣೆ ಮಾಡಲಾಗುತ್ತಿದೆ. ಇನ್ನೊಂದು ಕಡೆ ಜಾತಿ ವ್ಯವಸ್ಥೆಯೂ ಭೂತದಂತೆ ಕಾಡುತ್ತಿದೆ. ಇಂತಹ ಗೊಂದಲದ ಗೂಡುಗಳಿಂದ ವಿದ್ಯಾರ್ಥಿಗಳು ಹೊರ ಬರಬೇಕು ಎಂದು ಸಲಹೆ ನೀಡಿದರು.

ಸಾಹಿತಿ ಎಸ್.ನಾಗಪ್ಪ ಮಾತನಾಡಿ, ಕುವೆಂಪು ಅಲಕ್ಷಿತ ವಸ್ತುಗಳು, ಸಮುದಾಯಗಳಿಗೆ ಸಾಹಿತ್ಯದಲ್ಲಿ ಗೌರವ ತಂದುಕೊಟ್ಟರು. ಈರೇ ಹೂವು, ಗೊಬ್ಬರ, ನೇಗಿಲಯೋಗಿ ಕುರಿತು ಪದ್ಯ ಬರೆದು ಶ್ರಮಿಕರು ಕೂಡ ಆಡಳಿತ ನಡೆಯವಂತಾಗಬೇಕು. ರಾಜ್ಯ ಮತ್ತು ದೇಶದ ಅಧಿಕಾರದ ಚುಕ್ಕಾಣಿ ಹಿಡಿಯಬೇಕು. ಆಗ ಮಾತ್ರ ಸಮಾನತೆ ಬರುತ್ತದೆ ಎಂದು ಕುವೆಂಪು ಕನಸು ಕಂಡರು ಎಂದು ತಿಳಿಸಿದರು.

ವಿದ್ಯಾರ್ಥಿಗಳು ಕುವೆಂಪು ಅವರ ವೈಚಾರಿಕ ಬರಹಗಳನ್ನು ಅಧ್ಯಯನ ಮಾಡಬೇಕು. ಕುವೆಂಪು ಅವರ ತತ್ವಾದರ್ಶಗಳನ್ನು ಅಳವಡಿಸಿಕೊಳ್ಳಬೇಕು. ಜಾತಿ, ಮತ, ಧರ್ಮದಿಂದ ಹೊರ ಬಂದು ಮಾನವೀಯ ನೆಲೆಯಲ್ಲಿ ಬದುಕು ನಡೆಸಬೇಕು. ಧರ್ಮದ ಆಧಾರದಲ್ಲಿ ಸಮಾಜ ಒಡೆಯುವ ದುಷ್ಟ ಶಕ್ತಿಗಳ ಬಗ್ಗೆ ಎಚ್ಚರಿಕೆಯಿಂದ ಇರಬೇಕು. ವಿದ್ಯಾರ್ಥಿಗಳು ಸಮಾಜದಲ್ಲಿ ನಡೆಯುವ ಸಂಗತಿಗಳನ್ನು ಸೂಕ್ಷ್ಮವಾಗಿ ನೋಡಬೇಕು ಎಂದು ಸಲಹೆ ನೀಡಿದರು.

ಬುದ್ಧ, ಬಸವ, ವಿವೇಕಾನಂದ, ಅಂಬೇಡ್ಕರ್ ಗಾಂಧೀಜಿ ಎಲ್ಲರೂ ಸಮಾಜದಲ್ಲಿನ ಮೂಢನಂಬಿಕೆ, ಕಂದಾಚಾರ, ಅಜ್ಞಾನ, ಜಾತಿ ವ್ಯವಸ್ಥೆ ಹೊಡೆದೋಡಿಸಬೇಕು ಎಂದು ಚಿಂತಿಸಿದವರು. ಇಂಥ ಮಹನೀಯರು ಹಾಕಿಕೊಟ್ಟ ಮಾರ್ಗದಲ್ಲಿ ನಡೆದರೆ ಸುಖೀ ಸಮಾಜ ನಿರ್ಮಾಣ ಸಾಧ್ಯ ಎಂದು ಕಿವಿ ಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಕಲಾ ಕಾಲೇಜು ಕನ್ನಡ ವಿಭಾಗದ ಮುಖ್ಯಸ್ಥ ಡಾ.ಶಿವಣ್ಣ ಬೆಳವಾಡಿ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಸಮುದಾಯ ಜಿಲ್ಲಾ ಕಾರ್ಯದರ್ಶಿ ಕೆ.ಈ.ಸಿದ್ದಯ್ಯ ವಂದಿಸಿದರು.

ವರದಿ: ಕೆ.ಇ.ಸಿದ್ದಯ್ಯ

ಮೆಸ್ಕಾಂ ಗುತ್ತಿಗೆ ಕಾರ್ಮಿಕರಿಂದ ಮಂಗಳೂರಿನಲ್ಲಿ ಪ್ರತಿಭಟನೆ

ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕೆಂದು ಇತ್ತೀಚೆಗೆ ಸುಪ್ರೀಂ ಕೋರ್ಟ್ ತೀರ್ಪು ನೀಡಿದ್ದು, ಅದನ್ನು ಜಾರಿಗೊಳಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕೂಡಲೇ ಕಾರ್ಯ ಪ್ರವೃತ್ತರಾಗಬೇಕು ಎಂದು ಒತ್ತಾಯಿಸಿ ಸಿಐಟಿಯುಗೆ ಸಂಯೋಜನೆಗೊಂಡಿರುವ ಮೆಸ್ಕಾಂ ಗುತ್ತಿಗೆ ನೌಕರರು ಜನವರಿ 21ರಂದು ಮಂಗಳೂರಿನ ಮೆಸ್ಕಾಂ ಪ್ರಧಾನ ಕಛೇರಿ ಎದುರು ಪ್ರತಿಭಟನಾ ಪ್ರದರ್ಶನ ನಡೆಸಿದರು.

ಪ್ರತಿಭಟನೆಯನ್ನುದ್ದೇಶಿಸಿ ಸಿಐಟಿಯು ರಾಜ್ಯ ಘಟಕದ ಉಪಾಧ್ಯಕ್ಷ ವಸಂತ ಆಚಾರಿ, ಸಿಐಟಿಯು ದ.ಕ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಮೆಸ್ಕಾಂ ಗುತ್ತಿಗೆ ಕಾರ್ಮಿಕರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ಎಂ. ಶಿವಕುಮಾರ್ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು. ಸಂಘದ ಜಿಲ್ಲಾ ಮುಖಂಡರೂ ಭಾಗವಹಿಸಿದ್ದರು.



ಕಂಬಳ ನಿಷೇಧ : ಪ್ರಗತಿಪರರ ನಿಲುವು ಏನಿರಬೇಕು?

ಜಲ್ಲಿಕಟ್ಟು ನಿಷೇಧದ ರದ್ದತಿಗೆ ತಮಿಳನಾಡಿನಲ್ಲಿ ಭಾರೀ ಚಳುವಳಿಯ ಸಫಲತೆಯ ಹಿನ್ನೆಲೆಯಲ್ಲಿ, ಕಂಬಳದ ಮೇಲಿನ ನಿಷೇಧದ ರದ್ದತಿಗೂ ಅದೇ ರೀತಿಯ ಚಳುವಳಿಗೆ ಕೂಗೆದ್ದಿದೆ. ಕಂಬಳ ಕರ್ನಾಟಕದ ಸಂಸ್ಕೃತಿಯ ಪ್ರತೀಕ, ಅಸ್ಮಿತೆ ಇತ್ಯಾದಿ ಮಾತುಗಳು ಕೇಳಬರುತ್ತಿವೆ. ಕಂಬಳ ಪಾಳೆಯಗಾರಿ ಸಂಸ್ಕೃತಿಯ ಪ್ರತೀಕ, ಪಳೆಯುಳಿಕೆ. ಆದ್ದರಿಂದ ಜಾತಿ-ವಿರೋಧಿಗಳು ಪ್ರಗತಿಪರರು ಅದನ್ನು ಬೆಂಬಲಿಸುವುದು ಸರಿಯಲ್ಲ ಎಂಬ ವಾದವೂ ಎದ್ದಿದೆ. ಈ ಬಗ್ಗೆ ಜನಪರ ಪ್ರಗತಿಪರ ನಿಲುವು ಏನಿರಬೇಕು ಎಂದು ಕರಾವಳಿಯ ಸಾಂಸ್ಕೃತಿಕ ಚಿಂತಕ ವಾಸುದೇವ ಉಚ್ಚಿಲ ಇಲ್ಲಿ ನಿರೂಪಿಸಿದ್ದಾರೆ.

ವಾಸುದೇವ ಉಚ್ಚಿಲ

ರಾಜ್ಯಪಾಲರ ಅಧ್ಯಾದೇಶ ಮುಖಾಂತರ ಪ್ರಾಣಿಹಿಂಸೆ ತಡೆಕಾಯಿದೆಗೆ ತಿದ್ದುಪಡಿಯನ್ನು ಜಾರಿಗೊಳಿಸುವುದರ ಮೂಲಕ ಎರಡು ವರ್ಷ ನಿಲುಗಡೆಯಾಗಿದ್ದ 'ಜಲ್ಲಿಕಟ್ಟು' ಎಂಬ ಎತ್ತುಗಳನ್ನು ಪಳಗಿಸುವ ಕ್ರೀಡೆ ತಮಿಳುನಾಡಿನಲ್ಲಿ ಮತ್ತೆ ಆರಂಭವಾಗಿದೆ. ಮನೋರಂಜನೆಗೆ ಪ್ರಾಣಿಗಳನ್ನು ಬಳಸುವುದರ ವಿರುದ್ಧವಾಗಿರುವ 'ಪೇಟಾ' ಎಂಬ ಚಳುವಳಿ ಸುಪ್ರೀಂ ಕೋರ್ಟಿನ ಮೆಟ್ಟಿಲು ಹತ್ತಿದುದರ ಪರಿಣಾಮವಾಗಿ ಜಲ್ಲಿಕಟ್ಟನ್ನು ಒಳಗೊಂಡಂತೆ ಎತ್ತು, ಕೋಣಗಳನ್ನು ಕ್ರೀಡೆಗಳಿಗಾಗಿ ಬಳಸುವ ಗಾಡಿ ಓಟ, ಹೋರಿ ಓಟ, ಕಂಬಳ ಇತ್ಯಾದಿಗಳಿಗೆ ಎರಡು ವರ್ಷಗಳ ಹಿಂದೆ ಸುಪ್ರೀಮ್ ಕೋರ್ಟು ನಿಷೇಧ ಒಡ್ಡಿತ್ತು. ಮಾತ್ರವಲ್ಲ 2017 ಜನವರಿ 7 ರಂದು ತನ್ನ ಆದೇಶವನ್ನು ಮತ್ತೆ ಒತ್ತುಕೊಟ್ಟು ದೃಢೀಕರಿಸಿರುತ್ತದೆ.

ಕೃಷಿಗೆ ಆಧಾರವಾಗಿದ್ದು ಎತ್ತು, ಕೋಣಗಳನ್ನು ರೈತರು ಪರಂಪರೆಯಲ್ಲಿ ವಿವಿಧ ಕ್ರೀಡೆಗಳಿಗಾಗಿಯೂ ಬಳಸುತ್ತಿದ್ದುದನ್ನು ವಿವಿಧ ಜನಾಂಗಗಳ ಅಧ್ಯಯನದಲ್ಲಿ ಕಂಡುಕೊಳ್ಳಬಹುದು. ಕಂಬಳ, ಜಲ್ಲಿಕಟ್ಟುಗಳೂ ಕೃಷಿಯೊಂದಿಗೆ ಬೆಳೆದುಬಂದವು. ಕೃಷಿಗೆ ಯಂತ್ರಗಳ ಬಳಕೆ ಹೆಚ್ಚುತ್ತಿರುವ ಇಂದಿನ ಸಂದರ್ಭದಲ್ಲಿ ಎತ್ತು, ಕೋಣಗಳ ಬಳಕೆ ಕಡಿಮೆಯಾಗುತ್ತಾ ಹೋಗುತ್ತಿದೆ. ಇದೇ ಮುಂದುವರಿದರೆ ಕಂಬಳದಲ್ಲಿ ಸ್ಪರ್ಧಿಸುವ ಕೋಣಗಳ ಸಂಖ್ಯೆಯೂ ಕಡಿಮೆ ಆದೀತು. ಜಲ್ಲಿಕಟ್ಟು ಗ್ರಾಮೀಣ ಜನಪದ ಸಂಸ್ಕೃತಿಯ ಭಾಗವಾಗಿದ್ದರೆ, ಕಂಬಳವೂ ಹಾಗೆಯೇ ಅಲ್ಲವೇ? ಕಂಬಳಕ್ಕೂ ಅವಕಾಶ ಬೇಕು ಎಂದು ಕಂಬಳ ಹೆಚ್ಚು ಚಾಲ್ತಿಯಲ್ಲಿರುವ ಕರಾವಳಿ ಕರ್ನಾಟಕದಲ್ಲಿ ಚಳುವಳಿ ಸಿದ್ಧತೆಗಳು ನಡೆಯುತ್ತಿವೆ.

ಕಂಬಳ = ಪಾಳೆಯಗಾರಿ ಸಂಸ್ಕೃತಿ ?

ಕಂಬಳದ ಕೋಣಗಳ ಯಜಮಾನರು, ಕಂಬಳ ಏರ್ಪಡಿಸುವವರು ಕರಾವಳಿಯ ಮೇಲುಜಾತಿ (ಒಕ್ಕಲಿಗ) ಭೂಮಾಲಕರಾಗಿದ್ದು, ಕಂಬಳವು ಪಾಳೆಯಗಾರಿ ಸಂಸ್ಕೃತಿಯ ಭಾಗವಾಗಿದೆ. ಉಡುಪಿ, ದ.ಕ. ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ ನಿಷೇಧ ಜಾರಿಯಾಗುವ ಮೊದಲು ವರ್ಷಕ್ಕೆ 25-30 ಕಡೆಗಳಲ್ಲಿ ಕಂಬಳಗಳು ನಡೆಯುತ್ತಿದ್ದವು. ಒಂದು ಊರಿನಲ್ಲಿ ಸರ್ಕಸ್ ಕಂಪೆನಿ ಕ್ಯಾಂಪ್ ಹಾಕಿದಾಗ, ಸುತ್ತಲಿನ 10-20 ಕಿ.ಮೀ. ಫಾಸಲೆಯಿಂದ ಸರ್ಕಸ್ ನೋಡಲು ಜನ ಹೋಗುವರಲ್ಲ? ಅದೇ ರೀತಿ ಕಂಬಳ ಒಂದೋ ಎರಡು ದಿನ ನಡೆದರೂ ಕ್ರೀಡಾಸಕ್ತರು ಆಸುಪಾಸಿನ ಊರುಗಳಿಂದ ನೋಡಹೋಗುವುದು ಕರಾವಳಿ ಜಿಲ್ಲೆಗಳಲ್ಲಿ ಸಾಮಾನ್ಯವಾಗಿತ್ತು. ಊಳಿಗಮಾನ್ಯ ಕರಾವಳಿ ಸಮಾಜದ ಸಾಂಸ್ಕೃತಿಕ, ಧಾರ್ಮಿಕ, ಕ್ರೀಡಾ ಅಭಿವ್ಯಕ್ತಿಗಳಾಗಿ ಯಕ್ಷಗಾನ, ಜಾತ್ರೆ, ನೇಮ, ಕೋಲ, ಕಂಬಳಗಳು ಶತಮಾನಗಳಿಂದ ಬೆಳೆದುಬಂದಿದೆ. ಈ ಅಭಿವ್ಯಕ್ತಿಗಳನ್ನು ಸಂಪೂರ್ಣವಾಗಿ ಇಲ್ಲವಾಗಿಸಿದರೇನೇ ಊಳಿಗಮಾನ್ಯ ಮೇಲ್ವರ್ಗವನನ್ನು ಬಗ್ಗುಬಡಿಯಬಹುದು ಎಂಬ ವಾದವನ್ನು ಸಾಮಾಜಿಕ ತಾಣಗಳಲ್ಲಿ ಕೆಲವು ಪ್ರಗತಿಪರರೆಂದು ಹೇಳುವ ತರುಣರು ತೇಲಿಬಿಡುತ್ತಿದ್ದಾರೆ. ಅಲ್ಲದೆ ಯಕ್ಷಗಾನ ಕಂಬಳಗಳನ್ನು ಮೇಲುಜಾತಿಯವರು ಆಯೋಜಿಸುತ್ತಿರುವುದೇ ತಮ್ಮ ಪಾಳೆಯಗಾರಿ ವ್ಯವಸ್ಥೆಯನ್ನು ಬಲಪಡಿಸಲಿಕ್ಕಾಗಿ ಎಂದೂ ವಾದಿಸುತ್ತಿದ್ದಾರೆ.

ಯಕ್ಷಗಾನ, ಜಾತ್ರೆ, ಕೋಲ, ಕಂಬಳಗಳು ಪಾಳೆಯಗಾರಿ ಸಮಾಜದ ಬಳುವಳಿ ನಿಜ. ಅವುಗಳನ್ನು ಇವತ್ತಿಗೂ ಪಾಳೆಯಗಾರಿ ಶಕ್ತಿಗಳು ನಿಯಂತ್ರಿಸುತ್ತಿರುವುದೂ ನಿಜ. ಹೌದು, ಪಾಳೆಯಗಾರಿ ಸಮಾಜ ಶೋಷಕ ಸಮಾಜವೇ, ಸಮಾನತೆಯ ಆಶಯವುಳ್ಳ ನಮ್ಮ ಸಂವಿಧಾನ-ತಾರತಮ್ಯ, ದಮನಕ್ಕೆ ಕಾರಣವಾದ ಪಾಳೆಯಗಾರಿ ವ್ಯವಸ್ಥೆಯನ್ನು ದುರ್ಬಲಗೊಳಿಸಬೇಕು ಎಂಬುದೂ ನಿಜ. ನಮ್ಮ ಪ್ರತಿಭಟನೆ ಹೋರಾಟಗಳು ಆ ವ್ಯವಸ್ಥೆಯನ್ನು ದುರ್ಬಲಗೊಳಿಸುವುದರ ಕಡೆಗಿರಬೇಕೇ ಹೊರತು, ಆ ವ್ಯವಸ್ಥೆಯ ಸಾಂಸ್ಕೃತಿಕ ಉತ್ಪನ್ನಗಳನ್ನು ಇಲ್ಲವಾಗಿಸುವುದರ ಕಡೆಗಲ್ಲ. ಹುತ್ತವ ಬಡಿದಡೆ ಹಾವು ಸಾವುದೆ ಅಯ್ಯಾ- ಎಂಬ ಶರಣರ ವಚನ ನಮಗೆ ನೆನಪಿರಲಿ.

ಹಾಗಿದ್ದರೆ ಪಾಳೆಯಗಾರಿಯ ಸಾಂಸ್ಕೃತಿಕ ಉತ್ಪನ್ನಗಳಾದ ಕಂಬಳ ಕ್ರೀಡೆಯ ಬಗ್ಗೆ ನಮ್ಮ ನಿಲುವು ಯಾವುದಾಗಿರಬೇಕು? ಜಲ್ಲಿಕಟ್ಟಿನ ಬಗ್ಗೆ ತಮಿಳುನಾಡಿನ ಜನ ಒಂದು ಬಗೆಯ ಸಮೂಹ ಸನ್ನಿಗೊಳಗಾದಂತೆ ನಾವೂ ವಿವೇಕರಹಿತರಾಗಿ ಚಳುವಳಿ ನಡೆಸಬೇಕೇ?

ಕಂಬಳ ಬದಲಾಗಿಲ್ಲವೇ?

ಕಂಬಳದಂಥ ಕ್ರೀಡೆಗಳು ಹಿಂದೆ ಇದ್ದ ಸ್ವರೂಪದಲ್ಲಿ ಇವೆಯೇ ಎಂದು ಪರಿಶೀಲಿಸೋಣ. ಕರಾವಳಿ ಜಿಲ್ಲೆಗಳಲ್ಲಿ ಕಮ್ಯೂನಿಸ್ಟ್ ಪಕ್ಷಗಳ ನೇತೃತ್ವದಲ್ಲಿ 'ಉಳುವವನಿಗೆ ಭೂಮಿ'ಗಾಗಿ ಚಳುವಳಿ ನಡೆದು, ಭೂಸುಧಾರಣಾ ಶಾಸನ ರಾಜ್ಯದಲ್ಲಿ ಜಾರಿಯಾದಂದಿನಿಂದ ಊಳಿಗಮಾನ್ಯ ಸಂಬಂಧಗಳಲ್ಲಿ ದೊಡ್ಡ ಮಟ್ಟಿನ ಶಿಥಿಲತೆ ಉಂಟಾಗಿದೆ. ರಾಜ್ಯದ ಭೂಸುಧಾರಣಾ ಶಾಸನ ಜಾರಿಗೆ ತಂದ ಸರಕಾರಗಳು ಭೂಮಾಲಕ-ಬಂಡವಾಳಶಾಹಿ ನೇತೃತ್ವದ್ದಾಗಿದ್ದು, ಶಾಸನಗಳಲ್ಲಿನ ಸಂದಿಗೊಂದಿಗಳನ್ನು ಬಳಸಿಕೊಂಡು ಕೆಲವು ಭೂಮಾಲಿಕರು ಒಂದಷ್ಟು ಭೂಮಿಯನ್ನು ಹೆಚ್ಚಾಗೇ ತಮ್ಮಲ್ಲಿ ಇರಿಸಿಕೊಂಡಿರಬಹುದು. ಅದೇ ಭೂಮಾಲಕ ವರ್ಗ ಹೋಟೆಲು, ರಿಯಲ್ ಎಸ್ಟೇಟ್, ಉದ್ಯಮ, ತಾಂತ್ರಿಕ ವೈದ್ಯಕೀಯ ಕಾಲೇಜು ನಡೆಸುತ್ತಾ ಹೊಸ ಕಾಲದ ಶ್ರೀಮಂತ ವರ್ಗವಾಗಿದ್ದಾರೆ. ಈ ಭೂಮಾಲಕ ವರ್ಗದೊಂದಿಗೆ ಬಂಡವಾಳಶಾಹಿಯು ಒಪ್ಪಂದಗಳನ್ನು ಮಾಡಿಕೊಂಡು, ಭೂಮಾಲಕರಿಗೆ ಯಾವ ನಷ್ಟವೂ ಆಗದಂತೆ ಕೇವಲ ರೈತರ ಭೂಮಿಗಳನ್ನು ಕೈಗಾರಿಕೆಗಳ ಸ್ಥಾಪನೆಗಾಗಿ ಸ್ವಾಧೀನಪಡಿಸುತ್ತಿರುವುದನ್ನು ಎಸ್.ಇ.ಝೆಡ್ ಹಾಗೂ ಇತರ ಬೃಹತ್ ಉದ್ಯಮಗಳ ಸಂದರ್ಭದಲ್ಲಿ ಕರಾವಳಿ ಜಿಲ್ಲೆಗಳಲ್ಲೂ ನಾವು ನೋಡುತ್ತಿದ್ದೇವೆ. ಹಾಗೆಯೆ ಹಿಂದಿನ ದಿನಗಳಂತೆ ಡಜನುಗಟ್ಟಲೆ ಕೆಳಜಾತಿ, ಕೆಳವರ್ಗದ ಕುಟುಂಬಗಳು ಭೂಮಾಲಕರ ಚಾಕರಿ, ಬಿಟ್ಟಿ ಮಾಡುತ್ತಿಲ್ಲ. ಜಾತ್ರೆ, ಕೋಲ, ಕಂಬಳಗಳಲ್ಲಿ ಊಳಿಗಮಾನ್ಯ ಸೇವೆಯ ಸ್ವರೂಪ ಕಡಿಮೆಯಾಗುತ್ತಿದೆ. 'ಅಜಲು ರದ್ಧತಿ' ಕಾಯಿದೆ ಪ್ರಕಾರ, ಕಂಬಳದಲ್ಲಿ ಕೊರಗರನ್ನು ಹೀನಾಯವಾಗಿ ಕಾಣುವ 'ಪನಿ ಕುಲ್ಲುನು' ಎಂಬ ಪದ್ಧತಿ ನಿಂತೇ ಹೋಗಿದೆ. ಕೊರಗರ ಡೋಲು ವಾದನಕ್ಕೆ ಸಂಭಾವನೆ ಹೆಚ್ಚುತ್ತಿದೆ. ಕೋಣ ಓಡಿಸುವವರಲ್ಲೂ ಹಾಗೂ ಕೋಣದ ಚಾಕರಿ ಮಾಡುವವರಲ್ಲೂ ಕಂಬಳ ನಡೆಸುತ್ತಿದ್ದ ಮೇಲು ಜಾತಿಯ ಬಂಟ, ಜೈನರನ್ನು ನಾವು ಕಾಣಬಹುದು. ಒಂದಿಬ್ಬರು ಮೂವರು ಬಂಟ, ಜೈನೇತರ ಜಾತಿಗಳ ಗಣ್ಯರು ತಮ್ಮ ಶ್ರೀಮಂತಿಕೆಯ ಕಾರಣಕ್ಕಾಗಿ ಓಟದ ಕೋಣಗಳ ಯಜಮಾನರಾಗಿರುವುದನ್ನು ನಾವು ಬಲ್ಲೆವು. ಹಿಂದಿನ ಜಾತಿ ತಾರತಮ್ಯದಿಂದ ಕಂಬಳ ಆಡಿಸುತ್ತಿರುವ ಜನಸಮೂಹ ದೂರ ಸಾಗುತ್ತಿರುವುದನ್ನು ನಾವು ಅಲ್ಲಗಳೆಯುವಂತಿಲ್ಲ. ಈ ಕ್ರೀಡೆ ಇನ್ನೂ ಹೆಚ್ಚು ಪ್ರಜಾಪ್ರಭುತ್ವೀಕರಣ ಗೊಳ್ಳಬೇಕಾಗಿದೆ.

ಇವತ್ತಿಗೂ ಪ್ರತಿ ಕಂಬಳದ ನಿರ್ವಾಹಕ ಸಮಿತಿಯಲ್ಲಿ ಹಾಗೂ ಇಡೀ ಜಿಲ್ಲೆಯ ಕಂಬಳ ವ್ಯವಸ್ಥಾ ಸಮಿತಿಯಲ್ಲಿ ಕೆಲವರು ಮೇಲ್ವರ್ಗದ ಶ್ರೀಮಂತರು ಇರುವುದು ನಿಜ. ಕಂಬಳದ ಹೆಸರಲ್ಲಿ ಜೂಜು ಇರುವುದೂ ನಿಜ. ಹಾಗೆಂದು ಕಂಬಳವನ್ನು ಶೋಷಕ ವರ್ಗದ ಕ್ರೀಡೆಯೆಂದು ನಮೂದಿಸುವುದು ಸರಿಯಲ್ಲ. ಕರಾವಳಿಯ ಗ್ರಾಮೀಣ ಪ್ರದೇಶದ ದೊಡ್ಡ ಸಂಖ್ಯೆಯ ಜನ ನೋಡಿ ಆನಂದಿಸುವ ಕ್ರೀಡೆ ಇದು. ಇದರಲ್ಲಿ ಕೆಲವರಾದರೂ ಕಂಬಳ ಕೋಣಗಳ ಸಾಕುವಿಕೆಯಲ್ಲಿ, ಅದನ್ನು ಕ್ರೀಡೆಗೆ ಕೊಂಡೊಯ್ಯುವುದಲ್ಲಿ ಮೊದಲೆಂದಾದರೂ ಭಾಗವಹಿಸಿರುತ್ತಾರೆ. ಯಕ್ಷಗಾನದಷ್ಟೇ ಕಂಬಳವೂ ಜನರಿಗೆ ಪ್ರಿಯವಾದುದು. ಹಾಗೆ ನೋಡಿದರೆ ಯಕ್ಷಗಾನ ಮೇಳಗಳನ್ನು ಹೆಚ್ಚಾಗಿ ದೇವಾಲಯಗಳೇ ನಡೆಸುತ್ತಿಲ್ಲವೇ? ಅದೂ ಊಳಿಗಮಾನ್ಯ ವ್ಯವಸ್ಥೆಯ ಅಂಗವೇ ಅಲ್ಲವೇ?

ಕಂಬಳಕ್ಕೆ ನಿಷೇಧ ಯಾಕೆ ಬಂತು?

ಈಗ ಕಂಬಳಕ್ಕೆ ನಿಷೇಧ ಯಾಕೆ ಬಂತು ಎಂದು ನೋಡೋಣ. ವರ್ಷವಿಡೀ ಹೇರಳ ತಿನಿಸು ಉಣ್ಣಿಸಿ ಬೆಳೆಸಿದ ಕೋಣಗಳನ್ನು ಕಂಬಳದ ಮಂಜೊಟ್ಟಿ (ಓಟದ ಕಳದ ಪ್ರವೇಶಸ್ಥಾನ) ಯಲ್ಲಿ ಓಟ-ಕ್ಕೆ ಸಜ್ಜುಗೊಳಿಸುವ ಪ್ರಕ್ರಿಯೆಯಲ್ಲಿ ಅವುಗಳ ಬೆನ್ನಿಗೆ ಬೆತ್ತದಿಂದ ಬಾರಿಸುವುದುಂಟು. ಆ ಸೂಚನೆಯರಿತು ತರಬೇತಿ ಹೊಂದಿದ ಕೋಣಗಳು ವೇಗವಾಗಿ ಓಡುವವು. ಗದ್ದೆ ಉಳುವ ಎತ್ತು, ಕೋಣಗಳ ಬೆನ್ನಿಗೆ ಬಾರಿಸಿಯೇ ಅವುಗಳಿಂದ ರೈತ ಗದ್ದೆ ಉಳುತ್ತಾನಲ್ಲವೇ? ರೈತ ಗದ್ದೆ ಉಳುವ ಕ್ರಿಯೆಯಲ್ಲಿ ಹಿಂಸೆ ಇದೆ ಎಂದು ಯಾರೂ ನ್ಯಾಯಾಲಯದ ಮೆಟ್ಟಿಲೇರಿಲ್ಲ. ಆದರೆ ಸಾರ್ವಜನಿಕ ಪ್ರದರ್ಶನದ ಅಂಗಣದಲ್ಲಿ ಮಿತಿ ಮೀರಿದ ಹಿಂಸೆಯನ್ನು ಪ್ರಾಣಿಗಳಿಗೆ ನೀಡಿದಲ್ಲಿ ಅದು ಖಂಡನೀಯವೂ ದಂಡನೀಯವೂ ಆಗಿದೆ. ವೈಪರೀತ್ಯದ ಪ್ರಾಣಿಹಿಂಸೆಯನ್ನು ತಡೆಯುವ ಕ್ರಮ-ಕಂಬಳವನ್ನು ನಿಯಂತ್ರಿಸುವ ಕಾಯಿದೆಯಲ್ಲಿ ಬರಬೇಕಾಗಿದೆ.

ಕರಾವಳಿಯಲ್ಲಿ ಚಾಲ್ತಿಯಲ್ಲಿದ್ದ ಕಂಬಳದಲ್ಲಿ ಎರಡು ಮೂರು ಬಗೆ ಕಾಣುತ್ತದೆ. ಉತ್ತರ ಭಾಗದ ವಂಡಾರು ಕಂಬಳದಲ್ಲಿ ಯಾವ ಸ್ಪರ್ಧೆಯೂ ಇಲ್ಲ; ಹರಕೆ ಹೊತ್ತವರು ತಮ್ಮ ಜೋಡಿಕೋಣಗಳನ್ನು ಅಲ್ಲಿನ ಕಂಬಳಗದ್ದೆಗೆ ಇಳಿಸಿ ಉತ್ತು ಬರುವ ಆಚರಣೆಯಷ್ಟೇ ಇರುತ್ತದೆ. ಇತರ ಕಂಬಳಗಳಲ್ಲಿ ಎರಡೆರಡೇ ನೊಗಕಟ್ಟಿದ ಜೋಡಿಕೋಣಗಳನ್ನು ಜೋಡುಕರೆಯ ನೀರಿನ ಕಾಲುವೆಗಳಲ್ಲಿ ಸ್ಪರ್ಧೆಯಲ್ಲಿ ಓಡಿಸುವುದು ಒಂದು ಬಗೆ. ಇನ್ನೊಂದು ಬಗೆ-ಯ ಓಟದಲ್ಲಿ ಎರಡು ಜೋಡಿಗಳ ಮಧ್ಯೆ ಸ್ಪರ್ಧೆ ಇರುವುದಿಲ್ಲ; ಒಂದೇ ನೀರಿನ ಕಾಲುವೆಯಲ್ಲಿ ಕೋಣದ ಜೋಡಿಯನ್ನು ನೊಗ ಇಲ್ಲವೇ ಹಲಗೆಗೆ ಕಟ್ಟಿ ಓಡಿಸುವಾಗ, ಮಧ್ಯೆ ಎತ್ತರದಲ್ಲಿ ಅಡ್ಡ ಕಟ್ಟಿದ ಬಟ್ಟೆಯ ನಿಶಾನಿಗೆ ಮಣ್ಣಿನಿಂದ ಕೂಡಿದ ನೀರು ಚಿಮ್ಮಿದರೆ, ಆ ಜೋಡಿಕೋಣಗಳು ಬಹುಮಾನಕ್ಕೆ ಅರ್ಹವಾಗುತ್ತವೆ. ಇವೆಲ್ಲವುಗಳಲ್ಲೂ, ಮಂಜೊಟ್ಟಿಯಲ್ಲಿ ನೀರಿಗಿಳಿಸುವಾಗ - ಜನಸಂದಣಿಗೆ ಬೆದರಿ - ಕೋಣಗಳು ಮಿಸುಕಾಡದೆ ನಿಲ್ಲುವುದುಂಟು. ಬಾರುಕೋಲಿನ ಹೊಡೆತ ನೀಡಿದಾಗ ಅವು ಓಟಕೀಳುವಲ್ಲಿ ಕಾಣುವ ಹಿಂಸೆ ಇತರ ಪ್ರಾಂತ್ಯಗಳ ಪ್ರಾಣಿಕ್ರೀಡೆಗಳಿಗೆ ಹೋಲಿಸಿದರೆ ನಗಣ್ಯ. ಇಲ್ಲೂ ಹಿಂಸೆಯನ್ನು ಕನಿಷ್ಟಗೊಳಿಸಲು ಕ್ರಮ ತೆಗೆದುಕೊಳ್ಳಬೇಕು.

ಕಂಬಳ ನಿಷೇಧ ತೆಗೆಯಬೇಕು

ಹಾಗಿದ್ದರೂ ಕಂಬಳ ನಿಷೇಧ ಹಿಂದೆಗೆಯಬೇಕೆಂದು ಒತ್ತಾಯಿಸುವುದು ಭಾವಾವೇಶದ ಸಮೂಹಸನ್ನಿಯಾಗಬಾರದು. ಕಂಬಳ ಕರ್ನಾಟಕದ (ಅಥವಾ ಕರಾವಳಿ ಕರ್ನಾಟಕದ) ಸಂಸ್ಕೃತಿಯ ಮೂಲಸತ್ವ, ಅಥವಾ ಅಸ್ಮಿತೆಯ ಪ್ರಶ್ನೆ ಎಂಬುದು ಅತಿಶಯೋಕ್ತಿಯಾಗುತ್ತದೆ. ಈ ನಿಷೇಧ ಕಾಂಗ್ರೆಸ್ ಸರಕಾರ ತಂದುದೆಂದಾಗಲೀ, ಬಿಜೆಪಿ ಸರಕಾರ ತಂದುದೆಂದಾಗಲೀ ಎಂಬುದು ಪ್ರಶ್ನೆಯಲ್ಲ. ಆದರೆ ಜಲ್ಲಿಕಟ್ಟು ಹೋರಾಟ ಯಶಸ್ವಿಯಾದ ಹಿನ್ನೆಲೆಯಲ್ಲಿ, ಕಂಬಳವನ್ನು ಗೆಲ್ಲಿಸುವುದರಲ್ಲಿ ಕಾಂಗ್ರೆಸ್, ಬಿಜೆಪಿಗಳು ಪೈಪೋಟಿ ನಡೆಸುತ್ತಿವೆ. ಸುಪ್ರೀಂ ಕೋರ್ಟಿನಲ್ಲಿರುವ ಪ್ರಕರಣ, ಕೇಂದ್ರ ಸರಕಾರವೇ ತಾಕತ್ತಿದ್ದರೆ ತಿದ್ದುಪಡಿ ಶಾಸನ ತರಲಿ ಎಂದು ಕಾಂಗ್ರೆಸ್ಸಿಗರು ಸವಾಲು ಹಾಕುವುದಾಗಲೀ ರಾಜ್ಯದಲ್ಲಿ ಆಳುತ್ತಿರುವುದು ಕಾಂಗ್ರೆಸ್ ಸರಕಾರ ಹಾಗಾಗಿ ಅವರೇ ಪರಂಪರೆಯ ಜಾನಪದ ಕ್ರೀಡೆಯನ್ನು ರಕ್ಷಿಸಲು ಕ್ರಮ ಕೈಗೊಳ್ಳಬೇಕು ಎಂದು ಸವಾಲು ಹಾಕುವುದಾಗಲೀ - ಎರಡೂ ಪಕ್ಷಗಳು ಬರಿಯ ಮೇಲಾಟದ ರಾಜಕೀಯ ನಡೆಸುತ್ತಿವೆ ಎಂದು ಕಂಡುಬರುತ್ತದೆ. ಇನ್ನೊಂದೆಡೆ, ಕಂಬಳ ಎಂಬುದು ಪಾಳೆಯಗಾರಿ ಸಮಾಜವನ್ನು ಬಲಿಷ್ಟಗೊಳಿಸುವ ಪ್ರಕ್ರಿಯೆ ಎಂದು ಹೇಳುತ್ತಾ ಜನತೆಯನ್ನು ಗೊಂದಲಗೊಳಿಸುವುದು ಪ್ರಾಜ್ಞ ನಡೆಯಲ್ಲ. ಪಾಳೆಯಗಾರಿ ವ್ಯವಸ್ಥೆಯನ್ನು ದುರ್ಬಲಗೊಳಿಸಲು ಹಾಕಿಕೊಳ್ಳುವ ರಾಜಕೀಯ ಸಾಮಾಜಿಕ ಕಾರ್ಯಕ್ರಮಗಳಿಗೆ ಪ್ರಗತಿಪರ ಶಕ್ತಿಗಳ ಬೆಂಬಲ ಇನ್ನೂ ಹೆಚ್ಚಿಗೆ ಬೇಕಾಗಿದೆ. ಹಾಗಾದಾಗ ಮಾತ್ರ ಎಲ್ಲ ಜಾತಿ ಸಮುದಾಯದವರು ಪಾಲ್ಗೊಂಡು ಕಂಬಳದಂಥ ಪಾಳೆಯಗಾರಿ ಸಾಂಸ್ಕೃತಿಕ ಉತ್ಪನ್ನಗಳು ಹೆಚ್ಚೆಚ್ಚು ಜನಪರವಾಗುವುದು ಸಾಧ್ಯ. ಈ ನಡುವೆ ಪ್ರಾಣಿಹಿಂಸೆ ತಡೆ ಕಾಯ್ದೆಗೆ ತಿದ್ದುಪಡಿ ತಂದು ಕರಾವಳಿಯ ಜನಪ್ರಿಯ ಕ್ರೀಡೆ ಕಂಬಳಕ್ಕೆ ಅವಕಾಶ ನೀಡಲು ರಾಜ್ಯ ಸರ್ಕಾರ ನಿರ್ಧರಿಸಿದೆ ಎಂದು ವರದಿಯಾಗಿದೆ.

ಎರಡೂ ರಾಜ್ಯಗಳಲ್ಲಿ ತಾಂಡವವಾಡುತ್ತಿರುವ ಭೀಕರ ಬರ ಪರಿಸ್ಥಿತಿ, ನೋಟು ನಿಷೇಧ ಮತ್ತಿತರ ಜ್ವಲಂತ ಸಮಸ್ಯೆಗಳಿಗಿಂತ, ಜನಮಾನಸದಲ್ಲಿ ಜಲ್ಲಿಕಟ್ಟು ಅಥವಾ ಕಂಬಳಗಳ ನಿಷೇಧ ಇಷ್ಟು ದೊಡ್ಡ ವಿವಾದಾಸ್ಪದ ವಿಷಯವಾಗಿಸುವುದು ಬಿಜೆಪಿ, ಕಾಂಗ್ರೆಸ್, ದ್ರಾವಿಡ ಪಕ್ಷಗಳಂತಹ ಬೂರ್ಜ್ವಾ-ಭೂಮಾಲಕ ಪಕ್ಷಗಳು ಬರದಂತಹ ಸುಡುವ ಸಮಸ್ಯೆಗಳಿಂದ ಜನರ ಗಮನ ಬೇರೆಡೆಗೆ ತಿರುಗಿಸುವ ಸಾಧನವೆಂಬುದನ್ನೂ ಮರೆಯಬಾರದು. ●

ಮೋದಿ ಆಳ್ವಿಕೆಗೆ ಲಗಾಮು ಹಾಕೋಣ...



* ಪ್ರಕಾಶ್ ಕಾರಟ್

2017ರ ಗಣರಾಜ್ಯ ದಿನವು, ಹೇಗೆ ಸಂವಿಧಾನದ ಜಾತ್ಯತೀತ-ಪ್ರಜಾಪ್ರಭುತ್ವದ ಆಶಯಗಳಿಗೆ ಕೇಡುಂಟುಮಾಡುವ ಆಳ್ವಿಕೆ ತನ್ನ ಸಂಸ್ಥೆಗಳನ್ನು ಅಪಮೌಲ್ಯಗೊಳಿಸುತ್ತ, ಬುಡಮೇಲು ಮಾಡುತ್ತ ಸಾಗುತ್ತಿದೆ ಎಂಬುದರ ಸಮಚಿತ್ತದ ಅವಲೋಕನ ಮಾಡಬೇಕಾದ ಒಂದು ಸಮಯ. ಅವರು ಲಂಗುಲಗಾಮಿಲ್ಲದೆ ಮುಂದುವರಿಯಲು ಬಿಡಬಾರದು. ಅವರನ್ನು ತಡೆದು ನಿಲ್ಲಿಸಲೇ ಬೇಕು.

ಈ ಬಾರಿಯ ಜನವರಿ 26 ಮೋದಿ ಆಡಳಿತದಡಿಯ ಮೂರನೇ ಗಣರಾಜ್ಯ ದಿನ. ಈ ಅವಧಿಯಲ್ಲಿ ಗಣ-ರಾಜ್ಯದ ಪ್ರತಿ ಸಂಸ್ಥೆಯೂ ಬದಲಾವಣೆಗಳನ್ನು ಕಂಡಿದ್ದು ಪ್ರಜಾತಂತ್ರದ ಮೂಲಭೂತ ತತ್ವಗಳು ಬುಡಮೇಲಾಗಿವೆ.

ಭಾರತೀಯ ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್ ಹೀಗೆ ಹೇಳಿದ್ದರು: "ಒಂದು ಸಂವಿಧಾನ ಎಷ್ಟೇ ಉತ್ತಮವಾಗಿರಬಹುದು, ಆದರೆ ಅದನ್ನು ಅನುಷ್ಠಾನಗೊಳಿಸುವವರು ಒಳ್ಳೆಯವರಾಗಿರದಿದ್ದರೆ ಅದು ಕೆಟ್ಟದೆನಿಸುತ್ತದೆ." ಇಂದು ಗಣರಾಜ್ಯವನ್ನು ನಡೆಸುವ ಮಂದಿ, ಅಂದರೆ ನರೇಂದ್ರ ಮೋದಿ ಹಾಗೂ ಅವರ ಪಟಾಲಂ, ಎಲ್ಲರೂ ಆರ್‌ಎಸ್‌ಎಸ್‌ಗೆ ಸೇರಿದವರು; 67 ವರ್ಷಗಳ ಹಿಂದೆ ಸ್ಥಾಪಿತವಾದ ಗಣರಾಜ್ಯ ಸಂವಿಧಾನವನ್ನು ಮರುರೂಪಿಸಲು ಬದ್ಧರಾಗಿರುವವರಾಗಿದ್ದಾರೆ.

ಅವರು ಹೋಗುತ್ತಿರುವ ದಾರಿ ಹೇಗಿದೆಯೆಂದರೆ ಜಾತ್ಯತೀತ-ಪ್ರಜಾಸತ್ತಾತ್ಮಕ ಗಣರಾಜ್ಯಕ್ಕೆ ಅಮೂಲ್ಯವಾದ ಸಂಸ್ಥೆಗಳ ಮೂಲ ಸ್ವರೂಪ ಮತ್ತು ಸಂರಚನೆಯನ್ನೇ ಬದಲಾಯಿಸಲು ಹೊರಟಿದ್ದಾರೆ. ಸರ್ವಾಧಿಕಾರಶಾಹಿ-ಹಿಂದುತ್ವವಾದಿ ಶಕ್ತಿಗಳ ರಭಸದ ಹೊಡೆತದಿಂದ ಯಾವ ಸಂಸ್ಥೆಯೂ ಹೊರತಾಗಿಲ್ಲ.

ಇತ್ತೀಚಿನ ದಿನಗಳಲ್ಲಿ ಮೋದಿ ಸರಕಾರವು ಪ್ರಭುತ್ವದ ಎರಡು ಮುಖ್ಯ ಸಂಸ್ಥೆಗಳ – ಸಶಸ್ತ್ರ ಪಡೆಗಳು ಮತ್ತು ನ್ಯಾಯಾಂಗ – ಸಮಗ್ರತೆಯನ್ನೇ ಹಾಳು ಮಾಡುವಂಥ ಪ್ರಯತ್ನಗಳನ್ನು ನಡೆಸಿದ್ದನ್ನು ಕಂಡಿದ್ದೇವೆ.

2016ನೆ ವರ್ಷದ ಅಂತ್ಯದಲ್ಲಿ ಭೂಸೇನೆಗೆ ಹೊಸ ಮುಖ್ಯಸ್ಥರ ನೇಮಕ ಮಾಡಲಾಯಿತು. ಇಬ್ಬರು ಜನರಲ್‌ಗಳ ಸೇವಾಹಿರಿತನವನ್ನು ಕಡೆಗಣಿಸಿ ಜನರಲ್ ಬಿಪಿನ್ ರಾವತ್‌ರನ್ನು ನೇಮಿಸಲಾಯಿತು. ಸೇನೆಯಲ್ಲಿ ನಡೆದು ಬಂದ ಸೇವಾ ಹಿರಿತನ ಮತ್ತು ಪ್ರತಿಭೆ ಎಂಬ ತತ್ವವನ್ನು ಉಲ್ಲಂಘಿಸಲಾಯಿತು. ಅದಾದ ನಂತರ, ಮಿಲಿಟರಿ ಇಂಜಿನಿಯರಿಂಗ್ ಗ್ರೂಪ್‌ನ ಮುಖ್ಯಸ್ಥರಾದ ಇಂಜಿನಿಯರ್-ಇನ್-ಚೀಫ್ ಅನ್ನು ನೇಮಿಸಲಾಯಿತು. ಅತ್ಯಂತ ಹಿರಿಯ ಅಧಿಕಾರಿಯಾದ ಲೆಫ್ಟಿನೆಂಟ್ ಜನರಲ್ ವಿಶ್ವಂಭರ ಸಿಂಗ್ ಅವರನ್ನು ಕಡೆಗಣಿಸಿ ಲೆಫ್ಟಿನೆಂಟ್ ಜನರಲ್ ಸುರೇಶ್ ಶರ್ಮಾ ಅವರನ್ನು ನೇಮಕ ಮಾಡಲಾಯಿತು. ಇವೆಲ್ಲದರ ಸೂಚನೆ ಸ್ಪಷ್ಟವಾಗಿದೆ. ಇನ್ನು ಮುಂದೆ ಮೋದಿ ಸರಕಾರ ತನಗೆ ಇಷ್ಟವಾದ ಸೇನಾ ಸಿಬ್ಬಂದಿಯನ್ನು ಆಯ್ಕೆ ಮಾಡಿಕೊಳ್ಳುತ್ತದೆ. ಇದು ಸಶಸ್ತ್ರ ಪಡೆಗಳ ಉನ್ನತ ಹಂತಗಳಲ್ಲಿ ರಾಜಕೀಯಕರಣಕ್ಕೆ ಅವಕಾಶವನ್ನು ತೆರೆದಂತಾಗುತ್ತದೆ ಹಾಗೂ ಮಹತ್ವಾಕಾಂಕ್ಷೆಯುಳ್ಳ ಅಧಿಕಾರಿಗಳು ಆಳುವವರ ಸಿದ್ಧಾಂತಕ್ಕೆ ನಿಷ್ಠೆ ತೋರಿಸಲು ಅವಕಾಶ ಕಲ್ಪಿಸುತ್ತದೆ.

ಹೈಕೋರ್ಟ್‌ಗಳು ಮತ್ತು ಸುಪ್ರೀಂ ಕೋರ್ಟ್‌ಗೆ ನ್ಯಾಯಾಧೀಶರನ್ನು ನೇಮಕ ಮಾಡುವ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಮತ್ತು ಸರಕಾರದ ನಡುವಿನ ಹಗ್ಗ ಜಗ್ಗಾಟ ಇನ್ನೂ ಮುಂದುವರಿದಿದೆ. ನೇಮಕಾತಿಗಾಗಿನ ನಿಯಮಾವಳಿಗಳಿಗೆ ಸಂಬಂಧಿಸಿದಂತೆ ಈ ಕಾದಾಟ ನಡೆಯುತ್ತಿದೆ. ನ್ಯಾಯಾಂಗದ ಆಯ್ಕೆ ಮತ್ತು ನೇಮಕಾತಿಯನ್ನು ವಿಶಾಲ ತಳಹದಿಯ ಮೇಲೆ ನೆಲೆಗೊಳಿಸಲು ಒಂದು ಉತ್ತಮ ಕಾನೂನನ್ನು ರೂಪಿಸುವ ಬದಲು ಮೋದಿ ಸರಕಾರ ಉನ್ನತ ನ್ಯಾಯಾಲಯಗಳಲ್ಲಿ ಯಾರನ್ನು ನ್ಯಾಯಾಧೀಶರನ್ನಾಗಿ ನೇಮಿಸಬೇಕೆಂಬ ವಿಷಯದಲ್ಲಿ ವಿಟೋ ಅಧಿಕಾರ ಪಡೆಯಲು ಕಾತರವಾಗಿದೆ. ಸುಪ್ರಿಂ ಕೋರ್ಟ್‌ನ ಮಂಡಲಿ(ಕೊಲಿಜಿಯಂ) ಶಿಫಾರಸು ಮಾಡಿದ ವ್ಯಕ್ತಿಗಳನ್ನು ಪರೀಕ್ಷಿಸುವ ಒಂದು ಶರತ್ತನ್ನು ಸೂಚಿಸಿರುವುದು ಅನಿಷ್ಟಕಾರಿ ಸಂಗತಿ. ಸುಪ್ರಿಂ ಕೋರ್ಟಿನ ಮಂಡಲಿ ಶಿಫಾರಸುಮಾಡಿದ ಬಹಳಷ್ಟು ವ್ಯಕ್ತಿಗಳನ್ನು ನೇಮಕ ಮಾಡದೆ ತಡೆಹಿಡಿದಿರುವುದು ಸರಕಾರದ ಆದೇಶಗಳನ್ನು ಉನ್ನತ ನ್ಯಾಯಾಂಗ ಸ್ವೀಕರಿಸುವಂತೆ ಒರಟು ಒತ್ತಡಗಳನ್ನು ಹಾಕುವ ವಿಧಾನ. ಮೋದಿ ಸರಕಾರದ ಈ ನಿಲುವು ಈಗಾಗಲೇ ನ್ಯಾಯಾಧೀಶರ ಒಂದು ವಿಭಾಗದ ಮೇಲೆ ಪ್ರಭಾವ ಬೀರುತ್ತಿದೆ. ಅವರು ಅಧಿಕಾರಸ್ಥರಿಗೆ ವಿಧೇಯತೆಯನ್ನು ಪ್ರದರ್ಶಿಸಬೇಕೆಂದು ಭಾವಿಸುತ್ತಿದ್ದಾರೆ.

ಅನಾಣ್ಯೀಕರಣ ಆದೇಶವನ್ನು ತಂದ ರೀತಿಯು ಇನ್ನೊಂದು ಸಂಸ್ಥೆ, ಅಂದರೆ ಭಾರತೀಯ ರಿಸರ್ವ್ ಬ್ಯಾಂಕ್(ಆರ್‌ಬಿಐ)ನ್ನು ಹ್ರಾಸಗೊಳಿಸಿದೆ. 500 ಮತ್ತು 1000 ರೂಪಾಯಿ ಮೌಲ್ಯದ ನೋಟುಗಳನ್ನು ರದ್ದುಪಡಿಸುವ ಬಗ್ಗೆ ಪ್ರಧಾನ ಮಂತ್ರಿಗಳ ಪ್ರಕಟಣೆಯ ಕೆಲವೇ ಗಂಟೆಗಳ ಮುಂಚೆಯಷ್ಟೆ ಈ ವಿಷಯವನ್ನು ಯಾವುದೇ ಆಕ್ಷೇಪಣೆಯಿಲ್ಲದಂತೆ ಚರ್ಚಿಸುವಂತೆ ಆರ್‌ಬಿಐನ ಕೇಂದ್ರೀಯ ಮಂಡಳಿಗೆ ಹೇಳಲಾಯಿತು. ಅಧಿಸೂಚನೆಗಳನ್ನು ಹೊರಡಿಸಲು ಹಾಗೂ ಇದ್ದಕ್ಕಿದ್ದಂತೆ ಅವುಗಳನ್ನು ಬದಲಾಯಿಸಲು ಕೇಂದ್ರ ಹಣಕಾಸು ಸಚಿವಾಲಯ ನಿರ್ದೇಶನಗಳನ್ನು ನೀಡಿದ ರೀತಿ ಆರ್‌ಬಿಐನ ಪ್ರತಿಷ್ಠೆಯನ್ನು ಹಾಳು ಮಾಡಿವೆ.



ಅಧಿಕಾರಶಾಹಿಗೆ ಸಂಬಂಧಿಸಿ ಹೇಳುವುದಾದರೆ, ನಾಗರಿಕ ಸೇವೆಗಳ ಉನ್ನತ ಹಂತಗಳಿಗೆ ಸಂಬಂಧಪಟ್ಟಂತೆ ಪ್ರಧಾನಿಯವರ ಕಾರ್ಯಾಲಯ ಎಲ್ಲಾ ಅಧಿಕಾರಗಳನ್ನು ಕೇಂದ್ರೀಕರಿಸಿಕೊಂಡಿದೆ. ನಿಜವಾದ ಬಾಸ್ ಯಾರೆಂಬುದು ಇಲಾಖೆಗಳ ಕಾರ್ಯದರ್ಶಿಗಳಿಗೆ ಗೊತ್ತಿದೆ. ಗುಲಾಮಿಕೆ ಹಾಗೂ ಭಟ್ಟಂಗಿತನದ ವಾತಾವರಣ ನೆಲೆಸಿದೆ.

ಭಾರತದ ಕಾನೂನು ಆಯೋಗದಂಥ ವಿವಿಧ ಸಾಂವಿಧಾನಿಕ ಸಂಸ್ಥೆಗಳಲ್ಲಿ ಆರ್‌ಎಸ್‌ಎಸ್ ವ್ಯಕ್ತಿಗಳನ್ನು ತುಂಬಲಾಗುತ್ತಿದೆ. ಹಾಗೂ ಅವರು ಆರ್‌ಎಸ್‌ಎಸ್-ಬಿಜೆಪಿ ಕೂಟದ ಪಕ್ಷಪಾತಿ ಅಜೆಂಡಾದ ಪರವಾಗಿ ಕೆಲಸ ಮಾಡಲು ಯಾವ ಸಂಕೋಚವನ್ನೂ ತೋರುತ್ತಿಲ್ಲ. ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಗಳನ್ನು ಬುಡಮೇಲು ಮಾಡುವ ಕೆಲಸ ಭರದಿಂದ ಸಾಗಿದೆ. ಎಲ್ಲಾ ಕೇಂದ್ರೀಯ ವಿಶ್ವ ವಿದ್ಯಾನಿಲಯಗಳಿಗೆ ಈಗ ಮಾನವ ಸಂಪನ್ಮೂಲ ಖಾತೆಯಿಂದಲೇ ನಿರ್ದೇಶನಗಳು ಬರುತ್ತಿವೆ, ಅವುಗಳು ನಾಮಮಾತ್ರದ ಸ್ವಾಯತ್ತೆಯನ್ನೂ ಉಳಿಸಿಕೊಂಡಿಲ್ಲ. ಅಧ್ಯಯನ ಸ್ವಾತಂತ್ರ್ಯ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಹತ್ತಿಕ್ಕಲು ಪಕ್ಷಪಾತಿ ಕುಲಪತಿಗಳನ್ನು ಬಳಸಿಕೊಳ್ಳುತ್ತಿರುವುದನ್ನು ಜೆಎನ್‌ಯು, ಹೈದರಾಬಾದ್ ಕೇಂದ್ರೀಯ ವಿವಿ ಮತ್ತು ಹರ್ಯಾಣ ವಿವಿಗಳಲ್ಲಿ ನೋಡಿದ್ದೇವೆ.

ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಸ್ಥೆಗಳನ್ನು ಅಜಾತ್ಯತೀತಗೊಳಿಸುವುದರ ಜೊತೆಜೊತೆಯಲ್ಲೇ ಸಂವಿಧಾನದಲ್ಲಿ ಅಡಕವಾಗಿರುವ ಒಕ್ಕೂಟ ತತ್ವದ ಮೇಲೆ ಇನ್ನೊಂದು ರೀತಿಯ ದಾಳಿ ನಡೆ-ಯುತ್ತಿದೆ. ಮೋದಿ ಸರಕಾರ ಸಂವಿಧಾನದ 356ನೇ ವಿಧಿಯನ್ನು ಇದುವರೆಗೆ ಎರಡು ಬಾರಿ ಬಳಸಿಕೊಂಡಿದೆ- ಅರುಣಾಚಲ ಪ್ರದೇಶ ಮತ್ತು ಉತ್ತರಾಖಂಡದಲ್ಲಿ. ಆರ್‌ಎಸ್‌ಎಸ್ ನಿಷ್ಠರನ್ನು ಅದು ರಾಜ್ಯಗಳ ರಾಜ್ಯಪಾಲರನ್ನಾಗಿ ನೇಮಿಸುತ್ತಿದೆ. ಅಸ್ಸಾಂ ಮತ್ತು ತ್ರಿಪುರಾ ರಾಜ್ಯಪಾಲರು ಸೇರಿದಂತೆ ಅನೇಕ ರಾಜ್ಯಪಾಲರು ತಮ್ಮ ಸಾಂವಿಧಾನಿಕ ಸ್ಥಾನವನ್ನು ದುರುಪಯೋಗಪಡಿಸಿಕೊಂಡು ಹಿಂದುತ್ವ ಮತ್ತು ಹಿಂದೂ ಕೋಮುವಾದಿ ವಿಚಾರಗಳನ್ನು ಬಹಿರಂಗವಾಗಿಯೇ ಪ್ರತಿಪಾದಿಸುತ್ತಾರೆ. ಅವರಿಗೆ ಸ್ವಲ್ಪ ಕಾನೂನಿನ ಸದರ ಸಿಕ್ಕಿದರೆ ಮೋದಿ ಆಡಳಿತದಲ್ಲಿ ರಾಜ್ಯಗಳ ಹಕ್ಕುಗಳ ಪಾಡು ಏನಾಗಬಹುದು ಎನ್ನುವುದಕ್ಕೆ ದೆಹಲಿ ಉತ್ತಮ ಉದಾಹರಣೆಯಾಗಿದೆ. ಅಲ್ಲಿ ಅರವಿಂದ ಕೇಜ್ರಿವಾಲ್ ಸರಕಾರಕ್ಕೆ ಹೇಳಿಕೊಳ್ಳುವಂಥ ಯಾವುದೇ ಶಾಸಕಾಂಗ ಅಥವಾ ಆಡಳಿತಾತ್ಮಕ ಅಧಿಕಾರಗಳಿಲ್ಲ.

ಗಣರಾಜ್ಯದ ಸಂಸ್ಥೆಗಳ ಅಧಿಕಾರಗಳು ಈ ರೀತಿಯಾಗಿ ವಿರೂಪ ಮತ್ತು ದುರುಪಯೋಗಕ್ಕೆ ಒಳಗಾಗಿರುವ ಹೊತ್ತಿನಲ್ಲೇ ದೇಶವು ಬಿಜೆಪಿ ಸರಕಾರದ ಆಕ್ರಾಮಕ ನವ-ಉದಾರವಾದಿ ನೀತಿಗಳ ಅತ್ಯಂತ ಕೆಟ್ಟ ಪರಿಣಾಮಗಳಿಂದ ತತ್ತರಿಸುತ್ತಿದೆ.

ಮೋದಿ ಸರಕಾರದ ಆಡಳಿತದ ಅಡಿಯಲ್ಲಿ ಭಾರತ ಅಸಮಾನತೆಯ ಹೊಸ ಎತ್ತರಕ್ಕೇರಿದೆ. ಆಕ್ಸ್‌ಫಾಮ್ ಸಂಸ್ಥೆಯು ಅಸಮಾನತೆ ಕುರಿತಾದ ಇತ್ತೀಚಿನ ವರದಿಯ ಪ್ರಕಾರ ಜಾಗತಿಕ ಮಟ್ಟದಲ್ಲಿ ಶೇಕಡಾ ಒಂದರಷ್ಟು ಶ್ರೀಮಂತರ ಕೈಗಳಲ್ಲಿ ಶೇಕಡಾ 50ರಷ್ಟು ಸಂಪತ್ತು ಕೇಂದ್ರೀಕೃತವಾಗಿದ್ದರೆ, ಭಾರತದಲ್ಲಿ ಇದು ಇನ್ನೂ ಹೆಚ್ಚು, ಅಂದರೆ ಶೇಕಡಾ 58. ಭಾರತದ 84 ಬಿಲಿಯಾಧಿಪತಿಗಳ ಒಟ್ಟು ಸಂಪತ್ತಿನ ಮೌಲ್ಯ 248 ಬಿಲಿಯನ್ ಡಾಲರ್ ಆಗಿದೆ.

ಕ್ರೂರ ಅನಾಣ್ಯೀಕರಣವು ಈ ಅಸಮಾನತೆಯನ್ನು ಇನ್ನಷ್ಟು ಉಲ್ಬಣಗೊಳಿಸಲಿದೆ. ಯಾಕೆಂದರೆ ಕೋಟ್ಯಂತರ ಭಾರತೀಯರು ತಮ್ಮ ಜೀವನೋಪಾಯ, ಆದಾಯ ಮತ್ತು ಉಳಿತಾಯಗಳನ್ನೇ ಕಳೆದುಕೊಂಡಿದ್ದಾರೆ. ಆರೋಗ್ಯ ಸೇವೆ ಮತ್ತು ಶಿಕ್ಷಣ ಕ್ಷೇತ್ರಗಳನ್ನು ಖಾಸಗೀಕರಿಸಲು ಮೋದಿ ಸರಕಾರ ಅತ್ಯುತ್ಸಾಹ ತೋರುತ್ತಿರುವುದರಿಂದಲೂ ಅಸಮಾನತೆಯ ಕಂದಕ ಹೆಚ್ಚಾಗಲಿದೆ. ಏಕೆಂದರೆ ಆರೋಗ್ಯ ಮತ್ತು ಶಿಕ್ಷಣದ ಮೂಲಭೂತ ಸೇವೆಗಳು ಬಡವರಿಗೆ ಗಗನ ಕುಸುಮವಾಗಲಿವೆ.

ಈ ಬೃಹತ್ ಸ್ವರೂಪದ ಆರ್ಥಿಕ ಅಬಲೀಕರಣದಿಂದ ಪ್ರಜಾಪ್ರಭುತ್ವವೆನ್ನುವುದು ಹೆಚ್ಚೆಚ್ಚಾಗಿ ಔಪಚಾರಿಕ ಹಕ್ಕು ಅಷ್ಟೇ ಆಗುತ್ತಾ ಹೋಗುತ್ತದೆ. ರಾಜಕೀಯ ಪ್ರಜಾಪ್ರಭುತ್ವ ಮತ್ತು ಕಣ್ಣಿಗೆ ರಾಚುವಂಥ ಸಾಮಾಜಿಕ-ಆರ್ಥಿಕ ಅಸಮಾನತೆಗಳು ಒಟ್ಟೊಟ್ಟಿಗೆ ಇರಲು ಸಾಧ್ಯವಿಲ್ಲ ಎಂಬ ಡಾ. ಅಂಬೇಡ್ಕರ್‌ರ ಎಚ್ಚರಿಕೆ ನಿಜವಾಗುತ್ತಿದೆ.

ಆದ್ದರಿಂದ, 2017ರ ಗಣರಾಜ್ಯ ದಿನವು, ಹೇಗೆ ಸಂವಿಧಾನದ ಜಾತ್ಯತೀತ-ಪ್ರಜಾಪ್ರಭುತ್ವದ ಆಶಯಗಳಿಗೆ ಕೇಡುಂಟುಮಾಡುವ ಆಳ್ವಿಕೆ ತನ್ನ ಸಂಸ್ಥೆಗಳನ್ನು ಅಪಮೌಲ್ಯಗೊಳಿಸುತ್ತ, ಬುಡಮೇಲು ಮಾಡುತ್ತ ಸಾಗುತ್ತಿದೆ ಎಂಬುದರ ಸಮಚಿತ್ತದ ಅವಲೋಕನ ಮಾಡಬೇಕಾದ ಒಂದು ಸಮಯ. ಅವರು ಲಂಗುಲಗಾಮಿಲ್ಲದೆ ಮುಂದುವರಿಯಲು ಬಿಡಬಾರದು. ಅವರನ್ನು ತಡೆದು ನಿಲ್ಲಿಸಲೇ ಬೇಕು.

ಅನು: ವಿಶ್ವ

ಜನತೆಯ ಸಾರ್ವಭೌಮತೆಯನ್ನು ಮತ್ತೆ ನೆಲೆಗೊಳಿಸುವ ಪ್ರತಿಜ್ಞೆಯನ್ನು ಮಾಡೋಣ

-ಸೀತಾರಾಮ್ ಯೆಚುರಿ

ಅತ್ಯಂತ ಅನಿಶ್ಚಿತತೆ ಮತ್ತು ನಮ್ಮ ಬಹುಪಾಲು ಜನತೆ, ವಿಶೇಷವಾಗಿ ಅಂಚಿಗೆ ತಳ್ಳಲ್ಪಟ್ಟ ಜನ ಹೆಚ್ಚೆಚ್ಚು ಸಂಕಟಕ್ಕೆ ಗುರಿಯಾಗುತ್ತಿರುವಂತಹ ಒಂದು ವಾತಾವರಣದಲ್ಲಿ ಭಾರತ ತನ್ನ ಗಣ-ತಂತ್ರದ 68ನೇ ವರ್ಷವನ್ನು ಪ್ರವೇಶಿಸುತ್ತಿದೆ. ಹೀಗಾಗಿರುವುದು ಯುದ್ಧ ಮುಂತಾದ ಯಾವುದೇ ಹೊರಗಣ ಅಂಶದಿಂದಲ್ಲ, ಬದಲಿಗೆ ಇದು ನಾವೇ ಮಾಡಿಕೊಂಡದ್ದು, ನಮ್ಮ ಪ್ರಸಕ್ತ ಕೇಂದ್ರ ಸರಕಾರ ಮತ್ತು ಆಳುವ ವರ್ಗಗಳು ಅನುಸರಿಸುತ್ತಿರುವ ಧೋರಣೆಗಳಿಂದ ಉಂಟಾದದ್ದು..........

ಬಿಜೆಪಿ ಸರಕಾರ ಸೂರ್ಯ-ಚಂದ್ರರನ್ನೇ ತಂದು ಕೊಡುತ್ತೇವೆ ಎನ್ನುತ್ತ ಅಧಿಕಾರ ವಹಿಸಿಕೊಂಡಿತು., 'ಗರಿಷ್ಟ ಆಳ್ವಿಕೆ, ಕನಿಷ್ಟ ಸರಕಾರ' ಎಂದೆಲ್ಲ ಹೇಳಿತು. ವ್ಯಂಗ್ಯವೆಂದರೆ, ಗಣರಾಜ್ಯದಿನದ ವೇಳೆಗೆ ಪಾರದರ್ಶಕತೆಯ ಸೂಚ್ಯಂಕದ ಅಂತರ್ರಾಷ್ಟ್ರೀಯ ಪಟ್ಟಿಯಲ್ಲಿ ಭಾರತ ಅವಮಾನಕರ ಸ್ಥಾನದಲ್ಲಿದೆ, 'ಅಪಾಯದ ವಲಯ'ದಲ್ಲಿದೆ.

ನಮ್ಮ ಬಹುಪಾಲು ಜನತೆ ಎದುರಿಸುತ್ತಿರುವ ನಿಜವಾದ ಸಂಕಟಗಳು ಅದೃಶ್ಯವಾಗಿಯೇ ಉಳಿದಿವೆ, ಯಾವುದೇ ಸಾರ್ವಜನಿಕ ಸಂವಾದದಿಂದ ಅವನ್ನು ದೂರ ಇಡಲಾಗಿದೆ. ಮುದ್ರಣ ಮತ್ತು ದೃಶ್ಯ ಮಾಧ್ಯಮಗಳೆರಡರ ಮೇಲೂ ಸರಕಾರದ ಹತೋಟಿ ಅವನ್ನು ಪ್ರಚಾರ ಯಂತ್ರಗಳಾಗಿ ಪರಿವರ್ತಿಸಿದೆ. ಸಾಮಾಜಿಕ ಮಾಧ್ಯಮಗಳಲ್ಲಿ ಅಭಿವ್ಯಕ್ತಿಯ ಅವಕಾಶಗಳು ಪ್ರಭುತ್ವದ ಅಘೋಷಿತ ಸೆನ್ಸಾರ್‌ಷಿಪ್‌ನಿಂದಾಗಿ ಹೆಚ್ಚೆಚ್ಚು ಸೀಮಿತಗೊಳ್ಳುತ್ತಿವೆ. ಸರಕಾರ ಮತ್ತು ಅದರ ಭಟ್ಟಂಗಿ ಮಾಧ್ಯಮ ದೊರೆಗಳು ಏನೇ ಹೇಳಿದರೂ, ನಮ್ಮ ಸಂವಿಧಾನ ಸಾರಿರುವ, ನಮಗೆ ನಾವೇ ಕೊಟ್ಟುಕೊಂಡಿರುವ ಉನ್ನತ ನೀತಿಗಳೆಲ್ಲವನ್ನೂ, ನ್ಯಾಯ, ಸಮಾನತೆ, ಸ್ವಾತಂತ್ರ್ಯ ಮತ್ತು ಸೋದರತ್ವದ ನೀತಿಗಳನ್ನು ಕುಂಠಿತಗೊಳಿಸಲಾಗುತ್ತಿದೆ.

ನಮ್ಮ ಸಂವಿಧಾನ ಭಾರತ ತನ್ನೆಲ್ಲಾ ನಾಗರಿಕರಿಗೆ ವಿಚಾರದ, ಅಭಿವ್ಯಕ್ತಿಯ, ನಂಬಿಕೆಯ ಮತ್ತು ಪೂಜೆಯ ಸ್ವಾತಂತ್ರ್ಯವನ್ನು ಒದಗಿಸುತ್ತದೆ ಎಂದು ಹೆಮ್ಮೆಯಿಮದ ಹೇಳಿಕೊಳ್ಳುತ್ತದೆ. ಆದರೆ ಕಳೆದ ವರ್ಷದಲ್ಲಿ ನಮ್ಮ ಸಂವಿಧಾನದ ಈ ಮೂಲತತ್ವದ



ಎಲ್ಲ ಅಂಶಗಳನ್ನೂ ಉಲ್ಲಂಘಿಸಲಾಗಿದೆ ಎಂಬುದಕ್ಕೆ ಏನೂ ಸಾಕ್ಷಿಗಳು ಬೇಕಿಲ್ಲ......

ಆದ್ದರಿಂದ ಈ ವರ್ಷದ ಗಣರಾಜ್ಯ ದಿನದ ಸಂದರ್ಭದಲ್ಲಿ ಭಾರತೀಯ ಜನತೆ ಮಾಡುವ ಯಾವುದೇ ಸಮಚಿತ್ತದ ಪ್ರತಿಜ್ಞೆಯ ಅರ್ಥ ನಮ್ಮ ಗಣತಂತ್ರದ ಬುನಾದಿಯನ್ನು ಕೊರೆಯುತ್ತಿರುವ ಈ ಎಲ್ಲ ಪ್ರವೃತ್ತಿಗಳನ್ನು ತಿರಸ್ಕರಿಸುವುದು ಮತ್ತು ಸೋಲಿಸುವುದು ಎಂದೇ ಆಗಬೇಕು.....

..... ಈ ವರ್ಷದ ಗಣರಾಜ್ಯ ದಿನದಂದು ನಾವು ಜನತೆಯ ಸಾರ್ವಭೌಮತೆಯೇ ಪರಮ ತತ್ವ ಎಂಬುದನ್ನು ಮತ್ತೆ ನೆಲೆಗೊಳಿಸುವ ಪ್ರತಿಜ್ಞೆಯನ್ನು ಮಾಡಬೇಕಾಗಿದೆ.

ಗಣರಾಜ್ಯ ಉಳಿಸಲು ಕೆಂಬಾವುಟ ಹಿಡಿದರು...

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಸಿಪಿಐ(ಎಂ) ವತಿಯಿಂದ ರಾಜ್ಯಾದ್ಯಂತ ಈ ಗಣ–ರಾಜ್ಯ ದಿನದಂದು, 'ಗಣರಾಜ್ಯ ಉಳಿಸಿ, ಜನರಾಜ್ಯ ಬೆಳೆಸಿ' 'ಕೋಮುವಾದ, ಭಯೋತ್ಪಾದನೆ ಅಳಿಸಿ ಸಂವಿಧಾನದ ಆಶಯಗಳನ್ನು ಈಡೇರಿಸಿ' ಎನ್ನುವ ಘೋಷಣೆಯೊಂದಿಗೆ ಜಿಲ್ಲಾಧಿಕಾರಿಗಳ ಕಛೇರಿಯ ಎದುರು ಜಿಲ್ಲಾ ಕೇಂದ್ರಗಳಲ್ಲಿ ಮತ್ತು ಇತರೆಡೆಇ–ಡೀ ದಿನದ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿತ್ತು. ಬೆಂಗಳೂರು, ಚಿಕ್ಕಬಳ್ಳಾಪುರ, ಹಾಸನ, ಕೋಲಾರ, ದಕ್ಷಿಣ ಕನ್ನಡ, ಉಡುಪಿ, ತುಮಕೂರು, ಕೊಪ್ಪಳ, ದಾವಣಗೆರೆ, ಮೈಸೂರು, ಅಂಕೋಲಾ, ಸಿಂಧನೂರು, ಹಳಿಯಾಳ, ದೇವದುರ್ಗ ಮುಂತಾದ ಕಡೆ ಪ್ರತಿಭಟನೆಗಳು ನಡೆದು ಸಾವಿರಾರು ಜನ ಭಾಗವಹಿಸಿದ ವರದಿಗಳು ಬಂದಿವೆ. ಇಡೀ ದಿನ ಘೋಷಣೆಗಳು, ಭಾಷಣಗಳು, ಹಾಡುಗಳು ಇದ್ದವು. ಕೆಲವು ಕಡೆ ಪ್ರಗತಿಪರ ಬುದ್ಧಿಜೀವಿಗಳು ಭಾಗವಹಿಸಿದ್ದರು.

ದೇಶದ ಸ್ವಾತಂತ್ರ್ಯಕ್ಕಾಗಿ ಹಲವಾರು ಮಹನೀಯರು ಪ್ರಾಣ ತ್ಯಾಗ ಮಾಡಿ ಬ್ರಿಟೀಷರನ್ನು ಓಡಿಸಿದರು. ದೇಶದಲ್ಲಿ ಸಮಾನತೆ, ಕೋಮುಸೌಹಾರ್ದತೆ, ಐಕ್ಯತೆ ಸೇರಿದಂತೆ ಸರ್ವರಿಗೂ ಸಮಪಾಲು–ಸರ್ವರಿಗೂ ಸಮಬಾಳು ಆಶಯಗಳೊಂದಿಗೆ ರಚನೆಯಾದ ಸಂವಿಧಾನದ ಆಶಯಗಳನ್ನು ಆಡಳಿತ ನಡೆಸಿದ ಸರ್ಕಾರಗಳು ಗಾಳಿಗೆ ತೂರುತ್ತಿವೆ. ಅದರಲೂ ಈಗ ಅಧಿಕಾರಕ್ಕೆ ಬಂದಿರುವ ಕೇಂದ್ರದ ಬಿಜೆಪಿ ಸರ್ಕಾರವಂತೂ ಅತೀ ಆಕ್ರಮಣಕಾರಿಯಾಗಿ ಸಂವಿಧಾನದ ಮೇಲೆ ದಾಳಿ ನಡೆಸುತ್ತಿದೆ. ಸಂವಿಧಾನದ ಆಶಯಗಳ ಉಳಿವಿಗಾಗಿ ಸಂಘಟಿತ ಹೋರಾಟ ಅಗತ್ಯವಾಗಿದೆ ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.



ದಕ್ಷಿಣ ಕನ್ನಡ

ಸಂವಿಧಾನ ಶಿಕ್ಷಣ, ಉದ್ಯೋಗ, ಆರೋಗ್ಯ ಮೂಲಭೂತ ಹಕ್ಕಾಗಬೇಕು ಎಂದು ಹೇಳುತ್ತದೆ, ಆದರೆ ಸರ್ಕಾರಗಳು ಇವುಗಳನ್ನು ಖಾಸಗೀಕರಣಗೊಳಿಸುವ ಮೂಲಕ ಸಂವಿಧಾನ ಆಶಯಗಳಿಗೆ ಎಳ್ಳು ನೀರು ಬಿಟ್ಟಿವೆ. ಕಾರ್ಮಿಕರು–ರೈತರ ಕೂಲಿಯನ್ನೂ ಅಲ್ಪ ಗಳಿಕೆ ಹಾಗೂ ದುಡಿದ ತನ್ನ ಹಣ ಬಳಸಿಕೊಳ್ಳುವ ಪ್ರಾಥಮಿಕ ಸ್ವಾತಂತ್ರ್ಯ ಕಸಿದ ನೋಟು ನಿಷೇಧ ಕ್ರಮ ಅತ್ಯಂತ ಕಟುವಾದ ಪ್ರಜಾಪ್ರಭುತ್ವ–ವಿರೋಧಿ ಕ್ರಮ ಎಂಧು ಖಂಡಿಸಲಾಯಿತು.

ದೇಶದ ಅತ್ಯುನ್ನತವಾದ ಲೋಕಸಭೆಯಲ್ಲಿ ಇದಕ್ಕೆ ಯಾವುದೇ ರೀತಿಯ ಉತ್ತರವನ್ನು ನೀಡದೆ ಆಗೌರವ ತೋರುವ ಮೂಲಕ, ಪ್ರಧಾನಿ ಗಣರಾಜ್ಯ ವ್ಯವಸ್ಥೆಗೆ ವಿರುದ್ಧವಾಗಿ ವರ್ತಿಸುತ್ತಿದ್ದಾರೆ. ಒಂದು ಕಡೆ ಬೆಳೆಗಳನ್ನು ಬೆಳೆಯುವ ರೈತರು ಬೆಂಬಲ ಬೆಲೆ ಸಿಗದೆ ಪರಿತಪಿಸುತ್ತಿರುವಾಗ ರೈತರ ಸಾಲ ಮನ್ನಾ ಮಾಡುವ ಯಾವುದೇ ಘೋಷಣೆಗಳನ್ನು ಮಾಡದ ಕೇಂದ್ರ ಸರ್ಕಾರ ಬಂಡವಾಳಗಾರರ ಸಾಲಗಳನ್ನು ಮನ್ನಾ ಮಾಡುತ್ತಿದೆ. ಇಂದು ಪ್ರಕೃತಿದತ್ತಾವಾಗಿ ಸೀಗುವ ನೀರಿಗೂ ಸಹ ಹಣಕೊಟ್ಟು ಕುಡಿಯುವ ವ್ಯವಸ್ಥೆ ಜಾರಿಯಾಗುತ್ತಿದೆ ಎಂತಹ ಸ್ಥಿತಿಯಲ್ಲಿ ದೇಶದ ಜನಕ್ಕಾಗಿ ಸರ್ಕಾರಗಳು ಕೆಲಸ ಮಾಡುತ್ತಿವೆ ಎಂದು ವಿವರಿಸಿದರು.



ಹಾಸನ



ಉತ್ತರ ಕನ್ನಡ



ಬೆಂಗಳೂರು



ಚಿಕ್ಕಬಳ್ಳಾಪುರ



ಕೊಪ್ಪಳ



ಕೋಲಾರ



ಮೈಸೂರು



ದಾವಣಗೆರೆ



ರಾಯಚೂರು



ತುಮಕೂರು

ರಾಜ್ಯದಾದ್ಯಂತ ಸ್ಕೀಂ ಕಾರ್ಮಿಕರ ಭರ್ಜರಿ ಪ್ರತಿಭಟನೆ

ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ, ಅಕ್ಷರ ದಾಸೋಹ ಸಂಘ, ಆಶಾ ಕಾರ್ಯಕರ್ತರು ಸೇರಿದಂತೆ ವಿವಿಧ ಸಂಘಟನೆಗಳು ಸಿಐಟಿಯು ನೇತೃತ್ವದಲ್ಲಿ ಜನವರಿ 20ರಂದು ರಾಜ್ಯದ ವಿವಿದೆಡೆ ಪ್ರತಿಭಟನಾ ಧರಣಿ ನಡೆಸಿದರು. ರಾಜ್ಯದ ವಿವಿದೆಡೆ ನಡೆದ ಜಿಲ್ಲಾಧಿಕಾರಿಗಳ ಕಚೇರಿಯ ಮುಂಭಾಗದಲ್ಲಿ ಭಾರೀ ಸಂಖ್ಯೆಯಲ್ಲಿ ನೆರೆದಿದ್ದ ಎಲ್ಲಾ ಸ್ಕೀಂ ಕಾರ್ಮಿಕರು, ಪ್ರತಿಭಟನೆಯ ಮುಖಾಂತರ ಪ್ರಧಾನಿಯವರಿಗೆ ಮನವಿ ಸಲ್ಲಿಸಿದರು. ಬೇಡಿಕೆಗಳು ಈಡೇರದಿದ್ದಲ್ಲಿ ಮತ್ತಷ್ಟು ಪ್ರಬಲ ಹೋರಾಟವನ್ನು ಹಮ್ಮಿಕೊಳ್ಳಲಾಗುವುದೆಂದು ಪ್ರತಿಭಟನಾಕಾರರು ಎಚ್ಚರಿಸಿದರು. ಬಳ್ಳಾರಿ, ಚಿಕ್ಕೋಡಿ, ದಕ್ಷಿಣ ಕನ್ನಡ, ದಾವಣಗೆರೆ, ಕೊಪ್ಪಳ, ಮಂಡ್ಯ, ಮೈಸೂರು, ರಾಯಚೂರು, ರಾಮನಗರ, ತುಮಕೂರು, ಉತ್ತರ ಕನ್ನಡ, ವಿಜಯಪುರ ಜಿಲ್ಲಾ ಕೇಂದ್ರಗಳಿಂದ ಮತ್ತು ಕೆಲವು ತಾಲೂಕು ಕೇಂದ್ರಗಳಲ್ಲೂ ನಡೆದಿರುವ ವರದಿಗಳು ಬಂದಿವೆ. ಒಟ್ಟಾರೆಯಾಗಿ ರಾಷ್ಟ್ರೀಯ ಕರೆಯೂ ಆಗಿದ್ದ ಈ ಪ್ರತಿಭಟನೆ ಭರ್ಜರಿ ಯಶಸ್ವಿಯಾಗಿದೆ. ಪ್ರತಿಭಟನೆಯಲ್ಲಿ ವಿವಿಧ ಸ್ಕೀಂ ಕಾರ್ಮಿಕರ ವಿವಿಧ ವಿಭಾಗಗಳ ಹಕ್ಕೊತ್ತಾಯಗಳ ಜತೆ ದೇಶದ ಜನತೆಯ ಹಿತಾಸಕ್ತಿಗಳನ್ನು ಈಡೇರಿಸುವ ಈ ಸ್ಕೀಮುಗಳ ರಕ್ಷಣೆಯ ಉದ್ದೇಶವೂ ಇತ್ತು. ಹೆಚ್ಚಿನ ಜಿಲ್ಲಾ ಕೇಂದ್ರಗಳಲ್ಲಿ ಸ್ಕೀಂ ಕಾರ್ಮಿಕರು ಮೆರವಣಿಗೆಯಲ್ಲಿ ಬಂದು ಜಿಲ್ಲಾಧಿಕಾರಿಗಳ ಕಚೇರಿಯ ಎದುರಿಗೆ ನೆರೆದು ಪ್ರತಿಭಟನೆ ನಡೆಸಿದರು. ಸ್ಕೀಂ ಕಾರ್ಮಿಕರ ಮತ್ತು ಸಿಐಟಿಯು ನಾಯಕರು ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿ ಹಕ್ಕೊತ್ತಾಯಗಳ ವಿವರಗಳನ್ನು ವಿಶದೀಕರಿಸಿದರು.

ಕೇಂದ್ರ ಸರ್ಕಾರ ಅಕ್ಷರ ದಾಸೋಹ ಸೇರಿದಂತೆ ಅಂಗನವಾಡಿ, ಆಶಾ, ರಾಷ್ಟ್ರೀಯ ಆರೋಗ್ಯ ಅಭಿಯಾನ, ಸರ್ವ ಶಿಕ್ಷ ಅಭಿಯಾನ, ಉದ್ಯೋಗ ಖಾತರಿ ಯೋಜನೆಗಳಿಗೆ 3 ಲಕ್ಷ ಕೋಟಿ ಅನುದಾನ ಕಡಿತಗೊಳಿಸುವ ಮೂಲಕ ಜನತೆಯ ಜೀವನದ ಜೊತೆ ಚೆಲ್ಲಾಟವಾಡುತ್ತಿದೆ. ಜನತೆಯ ಯೋಜನೆಗಳಿಗೆ ಅನುದಾನ ನೀಡದೆ ದೇಶದ ಅಭಿವೃದ್ಧಿ ಅರ್ಥಹೀನ ಎಂದು ನಾಯಕರು ಮನವರಿಕೆ ಮಾಡಿಕೊಟ್ಟರು.

ಐಸಿಡಿಎಸ್ ಯೋಜನೆಗೆ ಕಡಿತ ಮಾಡಿದ ಅನುದಾನವನ್ನು ಕೇಂದ್ರ ಸರ್ಕಾರ ವಾಪಸ್ಸು ನೀಡಬೇಕು. 45ನೇ ಐ. .ಎಲ್.ಸಿ.ಯ ಶಿಫಾರಸ್ಸಿನಂತೆ ಸ್ಕೀಂನಲ್ಲಿ ಕೆಲಸ ಮಾಡುವವರನ್ನು ನೌಕರರೆಂದೂ ಪರಿಗಣಿಸಿ ಕನಿಷ್ಠ ವೇತನ ಮತ್ತು ನಿವೃತ್ತಿ ಸೌಲಭ್ಯ ಕೊಡಬೇಕು. ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರಿಗೆ ಪ್ರತ್ಯೇಕ ಸೇವಾ ನಿಯಮಾವಳಿ ರೂಪಿಸಬೇಕು. ಸಣ್ಣ ಪುಟ್ಟ ದೋಷಗಳಿಗೆ ಕೆಲಸದಿಂದ ಅಮಾನ್ಯ ಮಾಡಬಾರದು. ಸೇವಾವಧಿ ಭತ್ಯೆಯನ್ನು ಕೊಡಬೇಕು. ಮೇಲ್ವಿಚಾರಕಿ ಹುದ್ದೆ 100% ರಷ್ಟು ಕಾರ್ಯಕರ್ತೆಗೆ ನೀಡಬೇಕು. ವಯಸ್ಸಿನ ವಯೋಮಿತಿ ನಿಗತಿ, ಲಿಖಿತ ಪರೀಕ್ಷೆ ಇರಬಾರದು. ಸೇವಾ ಜ್ಯೇಷ್ಠತೆ ಆಧಾರದ ಮೇಲೆ ಮುಂಬಡ್ತಿ ನೀಡಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಅಕ್ಷರ ದಾಸೋಹ ಯೋಜನೆಗೆ ಕಡಿತ ಮಾಡಿದ ಅನುದಾನವನ್ನು ಕೇಂದ್ರ ಸರ್ಕಾರ ವಾಪಸ್ಸು ನೀಡಬೇಕು. ಕನಿಷ್ಠ ಕೂಲಿ ನಿಗದಿಯಾಗುವರೆಗೆ ಕೂಡಲೇ 5000 ರೂಗಳನ್ನು ವೇತನ ನಿಗದಿ ಮಾಡಬೇಕು. 4ನೇ ದರ್ಜೆಯ ನೌಕರರನ್ನಾಗಿ ಪರಿಗಣಿಸಬೇಕು. ಹಿಂದಿನ ಸರ್ಕಾರ ಘೋಷಣೆ ಮಾಡಿದ ಹೆಚ್ಚುವರಿ ಸಂಭಾವನೆಯನ್ನು ಇಂದಿನ ಸರ್ಕಾರ ಜಾರಿ ಮಾಡಬೇಕು. ಅಡುಗೆ ಮಾಡುವಾಗ ಸಂಭವಿಸುವ ಅಪಘಾತ ಮೊತ್ತವನ್ನು ಒಂದು ಲಕ್ಷ ರೂ.ದಿಂದ 5 ಲಕ್ಷಕ್ಕೆ ರೂ.ಗೆ ಹೆಚ್ಚಿಸಬೇಕು ಎಂದು ಒತ್ತಾಯಿಸಲಾಯಿತು.

ಅಕ್ಷರ ದಾಸೋಹ ಮತ್ತು ಅಂಗನವಾಡಿ ವ್ಯವಸ್ಥೆಯನ್ನು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಖಾಸಗೀಕರಣಗೊಳಿಸುತ್ತಿರುವುದನ್ನು ನಿಲ್ಲಿಸಬೇಕು. ಬೆಲೆ ಏರಿಕೆ ಸೂಚ್ಯಾಂಕದ ಪ್ರಕಾರ ಕನಿಷ್ಠ ವೇತನ 18 ಸಾವಿರ ರೂ., ಭವಿಷ್ಯ ನಿಧಿ, ವಿಮಾ ಯೋಜನೆ ಜಾರಿಗೊಳಿಸಬೇಕು ಹಾಗೂ ಸುಮಾರು ವರ್ಷ ಸೇವೆ ಸಲ್ಲಿಸಿದವರಿಗೆ ಖಾಯಂಗೊಳಿಸಬೇಕು ಎಂದು ನಾಯಕರು ವಿವರಿಸಿದರು.


ದಕ್ಷಿಣ ಕನ್ನಡ


ವಿಜಯಪುರ




ತುಮಕೂರು


ಉತ್ತರ ಕನ್ನಡ


ರಾಮನಗರ


ಬಳ್ಳಾರಿ


ಹಗರಿ ಬೊಮ್ಮನಹಳ್ಳಿ


ಮೈಸೂರು


ರಾಯಚೂರು


ಮಂಡ್ಯ


ಕೋಲಾರ

ಕೃಷಿ ಕೂಲಿಕಾರರಿಂದ ಜನರ ಐಕ್ಯತೆಗಾಗಿ ಪ್ರತಿಜ್ಞೆ ಸ್ವೀಕಾರ



ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಟನೆ ವತಿಯಿಂದ ಜನವರಿ 25ರಂದು ಗಣರಾಜ್ಯೋತ್ಸವದ ಅಂಗವಾಗಿ ಕೋಮುವಾದಿ, ಮೂಲಭೂತವಾದಿ ಶಕ್ತಿಗಳು ಹೆಚ್ಚೆಚ್ಚು ಆಕ್ರಮಣಕಾರಿಯಾಗಿ ಜನರ ನೆಮ್ಮದಿಗೆ ಭಂಗ ಉಂಟು ಮಾಡುತ್ತಿರುವುದನ್ನು, ದಲಿತರ ಮೇಲೆ, ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳನ್ನು, ದೇಶದಲ್ಲಿ ಸರ್ವಾಧಿಕಾರ ಹೆಡೆ ಎತ್ತತೊಡಗಿರುವುದನ್ನು ಬಲವಾಗಿ ಖಂಡಿಸುತ್ತೇವೆ ಮತ್ತು ಪ್ರಜಾಪ್ರಭುತ್ವದ ಉಳಿವಿಗಾಗಿ, ಕೋಮು ಸಾಮರಸ್ಯವನ್ನು ಬಲಪಡಿಸುವುದಕ್ಕಾಗಿ, ದುಡಿಯುವ ಜನರ ಐಕ್ಯತೆಯನ್ನು ಕಾಪಾಡುವುದಕ್ಕಾಗಿ ಬದ್ಧತೆಯಿಂದ ಹೋರಾಡುವುದಾಗಿ ಎಂಬ ಪ್ರತಿಜ್ಞೆ ಮಾಡುವ ಮೂಲಕ ವಿಶೇಷ ರೀತಿಯಲ್ಲಿ ಗಣರಾಜ್ಯೋತ್ಸವವನ್ನು ಆಚರಣೆ ಮಾಡಿದರು.



ಮಂಡ್ಯದ ಮಳವಳ್ಳಿಯಲ್ಲಿ ಇಳಿ ಸಂಜೆಯಲ್ಲಿ ಮತ ಪ್ರದರ್ಶನ ನಡೆಸಿ ಮೇಣದ ಬತ್ತಿ ಬೆಳಗಿಸುವ ಮೂಲಕ ಆಚರಣೆ ಮಾಡಿದರು ಹಾಗೂ ಮದ್ದೂರಿನ ಬೆಸಗರಹಳ್ಳಿ, ಕೆ.ಎಂ. ದೊಡ್ಡಿ, ಕಲಬುರಗಿ, ಗಜೇಂದ್ರಗಡ, ಯಾದಗಿರಿ, ಗಂಗಾವತಿ, ಹಮ್ನಾಬಾದ್, ಮಂಡಗೋಡ, ರಾಯಚೂರಿನ ಲಿಂಗಸಗೂರು, ದೇವದುರ್ಗ ತಾಲ್ಲೂಕುಗಳಲ್ಲಿ ಕೃಷಿಕೂಲಿಕಾರರು ಮತ ಪ್ರದರ್ಶನ ನಡೆಸಿದರು.

ಉಡುಪಿ:

ಜಾಗತೀಕರಣಕ್ಕೆ ತೆರೆದುಕೊಂಡ ಅನಂತರದ 25 ವರ್ಷಗಳಲ್ಲಿ ರೈತರು ದೊಡ್ಡ ಸಂಖ್ಯೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅನೇಕ ರೈತರು ನಿರ್ಗತಿಕರಾಗಿ ಕೃಷಿ ಕೂಲಿಕಾರರಾಗಿದ್ದಾರೆ. ಗ್ರಾಮೀಣ ಉದ್ಯೋಗ ಖಾತ್ರಿಯಲ್ಲಿ ಲಭ್ಯ ಕೆಲಸದ ದಿನಗಳು ಹಾಗೂ ಕೂಲಿ ತೀರಾ ಕಡಿಮೆಯಾಗಿದ್ದು, ಕೃಷಿ ಕೂಲಿಕಾರರು ಹಸಿವು ಬಡತನದಿಂದ ಬಳಲುತ್ತಿದ್ದಾರೆ ಎಂಬುದಾಗಿ ಪ್ರತಿಭಟನಾಕಾರರು ತಿಳಿಸಿದರು. ಜನರ ಪ್ರತಿಭಟನೆಯನ್ನು ಹಾದಿತಪ್ಪಿಸಲು ಹಿಂದೂ, ಮುಸ್ಲಿಂ ಎಂಬ ಕೋಮುಬೇಧವನ್ನು ಎಬ್ಬಿಸಲಾಗುತ್ತಿದೆ. ಕೇಂದ್ರದ ಸರ್ಕಾರ ಪ್ರಜಾಪ್ರಭುತ್ವಕ್ಕೆ ಗೌರವ ಕೊಡದೆ ಸರ್ವಾಧಿಕಾರಿ ನೆಲೆಯಲ್ಲಿ ವರ್ತಿಸುತ್ತಿದೆ ಎಂದು ಆರೋಪಿಸಲಾಯಿತು.

ಪ್ರತಿಭಟನೆಯನ್ನು ಉದ್ದೇಶಿಸಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಉಡುಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ್, ಸಿಐಟಿಯು ಜಿಲ್ಲಾಧ್ಯಕ್ಷ ವಿಶ್ವನಾಥ ರೈ ಮಾತನಾಡಿದರು. ಸಿಪಿಐ(ಎಂ) ಉಡುಪಿ ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ, ಕೃಷಿ ಕೂಲಿಕಾರರ ಸಂಘದ ಮುಖಂಡರಾದ ದಾಸ ಭಂಡಾರಿ, ಕವಿರಾಜ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಬಸ್ ಸೌಲಭ್ಯ ಕಲ್ಪಿಸಬೇಕೆಂದು ವಿದ್ಯಾರ್ಥಿಗಳ ಪ್ರತಿಭಟನೆ

ಬೆಂಗಳೂರು ನಗರದ ಮಧುರಾನಗರಕ್ಕೆ ಸ್ಥಳಾಂತರಗೊಂಡಿರುವ ವರ್ತೂರಿನ ಪದವಿ ಕಾಲೇಜಿಗೆ ಸಮರ್ಪಕ ಬಸ್ ಸೌಲಭ್ಯ ಕಲ್ಪಿಸಲು ಒತ್ತಾಯಿಸಿ ಜನವರಿ 25ರಂದು ಎಸ್‌ಎಫ್‌ಐನಿಂದ ಬೃಹತ್ ಪ್ರತಿಭಟನೆ ನಡೆಸಿದರು.



ಈಗ ಸ್ಥಳಾಂತರಿಸಿರುವ ವರ್ತೂರಿನ ಮಧುರಾನಗರದ 3ನೇ ಹಂತದಲ್ಲಿರುವ ನೂತನ ಕಟ್ಟಡದ ಕಾಲೇಜಿನಿಂದ ವರ್ತೂರಿನ ಗಾಂಧಿ ಸರ್ಕಲ್ ವರೆಗೆ ನೂರಾರು ವಿದ್ಯಾರ್ಥಿಗಳು ಸುಮಾರು 2.5 ಕಿ.ಮೀ. ರಸ್ತೆಯಲ್ಲಿ ರ್‍ಯಾಲಿಯಲ್ಲಿ ನಡೆದು ಬಿ.ಎಂ.ಟಿ.ಸಿ. ವ್ಯವಸ್ಥಾಪಕ ನಿರ್ದೇಶಕರ ವಿರುದ್ಧ ಘೋಷಣೆ ಕೂಗುತ್ತಾ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ತೀವ್ರಗೊಳ್ಳುತ್ತಿರುವುದನ್ನು ಮನಗಂಡ ಪೋಲೀಸರು ಸ್ಥಳಕ್ಕೆ ಸಂಚಾರಿ ಇನ್ಸ್‌ಪೆಕ್ಟರ್‌ರವರನ್ನು ಕರೆಸಿದರು. ಮನವಿ ಸ್ವೀಕರಿಸಿ ಮಾತನಾಡಿದ ಅವರು ಇನ್ನೆರೆಡು ದಿನಗಳಲ್ಲಿ ಸಮಸ್ಯೆ ಬಗೆಹರಿಸುವುದಾಗಿ ಅಧಿಕಾರಿಗಳು ಭರವಸೆ ನೀಡಿದ್ದಾರೆ ಎಂದರು. ಜನವರಿ 28ರ ಒಳಗೆ ಬೇಡಿಕೆ ಈಡೇರಿಸದಿದ್ದರೆ ಅದೇ ಕಾಲೇಜಿಗೆ ನೂತನ ಕಟ್ಟಡದ ಉದ್ಘಾಟನಾ ಸಮಾರಂಭಕ್ಕೆ ಆಗಮಿಸುವ ಉನ್ನತ ಶಿಕ್ಷಣ ಸಚಿವರಾದ ಬಸವರಾಜ ರಾಯರೆಡ್ಡಿರವರಿಗೆ ಘೇರಾವ್ ಹಾಕುವುದಾಗಿ ಎಚ್ಚರಿಕೆ ನೀಡಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಎಸ್‌ಎಫ್‌ಐನ ರಾಜ್ಯ ಉಪಾಧ್ಯಕ್ಷರಾದ ಚಿಕ್ಕರಾಜು ಎಸ್., ಜಿಲ್ಲಾ ಉಪಾಧ್ಯಕ್ಷ ವೇಗಾನಂದ್ ಎಸ್., ಮತ್ತು ಸಿಐಟಿಯು ಬೆಂ.ಉತ್ತರ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಮುನಿರಾಜು ಮಾತನಾಡಿದರು. ಪ್ರತಿಭಟನೆಯ ನೇತೃತ್ವವನ್ನು ಎಸ್‌ಎಫ್‌ಐ ಪೂರ್ವ ವಲಯ ಸಮಿತಿ ಕಾರ್ಯದರ್ಶಿ ಶ್ರೀಧರ್, ಮುಖಂಡರಾದ ಸಮಿತ್ರ, ಕಸ್ತೂರಿ, ಶಶಿಕಲಾ ಸೇರಿದಂತೆ ಹಲವರು ವಹಿಸಿದ್ದರು.

ವರದಿ : ವೇಗಾನಂದ ಎಸ್

ನಕಲಿ ಜ್ಯೋತಿಷಿಗಳ ವಿರುದ್ಧ ಯುವತಿಯರ ಮೌನ ಮೆರವಣಿಗೆ

ಮಂಗಳೂರು ನಗರದಲ್ಲಿ ನಕಲಿ ಜ್ಯೋತಿಷಿಗಳ ಹಾವಳಿ ಮಿತಿಮೀರಿದ್ದು, ಅವರ ವಿರುದ್ಧ ಕಾರ್ಯಾಚರಣೆ ನಡೆಸುವಂತೆ ಆಗ್ರಹಿಸಿ ಡಿವೈಎಫ್‌ಐ ಯುವತಿಯರ ಸಮಿತಿ ವತಿಯಿಂದ ಜನವರಿ 21ರಂದು ನಗರದಲ್ಲಿ ಮೌನ ಮೆರವಣಿಗೆ ನಡೆಸಲಾಯಿತು.

ನಗರದ ಹಂಪನಕಟ್ಟಾ ವೃತ್ತದಿಂದ ಮೌನ ಮೆರವಣಿಗೆಯಲ್ಲಿ ಹೊರಟ ಪ್ರತಿಭಟನಾಕಾರರು ಹಿರಿಯ ಸಾಹಿತಿ ಸಾರಾ ಅಬೂಬಕ್ಕರ್ ಅವರ ನೇತೃತ್ವದಲ್ಲಿ ಪೊಲೀಸ್ ಆಯುಕ್ತರ ಕಛೇರಿ ತಲುಪಿ ಡಿಸಿಪಿ ಅವರಿಗೆ ಸಲ್ಲಿಸಿದರು. ಡಿವೈಎಫ್‌ಐ ಯುವತಿಯರ ಸಮಿತಿ ಸಂಚಾಲಕಿ ಪ್ರಮೀಳಾ ಶಕ್ತಿನಗರ ಮೆರವಣಿಗೆ ಹಾಗೂ ಅರ್ಜಿ ಸಲ್ಲಿಕೆ ವೇಳೆ ಹಾಜರಿದ್ದರು.

ಸಂವಿಧಾನ–ಗಣರಾಜ್ಯ ರಕ್ಷಿಸಲು, ಸರ್ವಾಧಿಕಾರ ಮಟ್ಟಹಾಕಲು ಎಸ್‌ಎಫ್‌ಐನಿಂದ ಪ್ರತಿಜ್ಞೆ

ಸಂವಿಧಾನ ರಕ್ಷಿಸಲು, ಸರ್ವಾಧಿಕಾರವ ಮಟ್ಟಿಹಾಕುವ, ಗಣರಾಜ್ಯ ಉಳಿಸಿ ಜನರಾಜ್ಯ ಬಲಪಡಿಸುವ ಮಹತ್ವದ ಪ್ರತಿಜ್ಞೆಯನ್ನು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಕಾರ್ಯಕರ್ತರು ಕೈಗೊಂಡರು.

ಕೊಪ್ಪಳ ಜಿಲ್ಲೆಯ ಗಂಗಾವತಿ ನಗರದ ಬಸ್ ನಿಲ್ದಾಣದ ಹತ್ತಿರವಿರುವ ಶ್ರೀ ಕೃಷ್ಣದೇವರಾಯ ವೃತ್ತದಲ್ಲಿ ಜನವರಿ 25ರಂದು 68ನೆಯ ಪ್ರಜಾರಾಜ್ಯೋತ್ಸವ ದಿನವನ್ನು ಸ್ವಾಗತಿಸಿ ಅದರ ಮಹತ್ವವನ್ನು ಉಳಿಸುವ ಹಿನ್ನೆಲೆಯಲ್ಲಿ ಎಸ್‌ಎಫ್‌ಐ ತಾಲೂಕಾ ಘಟಕ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮಾನವ ಸರಪಳಿಯನ್ನು ನಿರ್ಮಿಸಿ ಮೇಣದ ಬತ್ತಿ ಬೆಳಗಿಸುವ ಮೂಲಕ ಐಕ್ಯತೆಯ ಸಂದೇಶ ಸಾರಿದರು.

ರಾಜ್ಯ ಉಪಾಧ್ಯಕ್ಷ ಬಸವರಾಜ ಪೂಜಾರ ಮಾತನಾಡಿ "ದೇಶದ ಸಂವಿಧಾನದ ಪೂರ್ವ ಪೀಠಿಕೆಯಲ್ಲಿರುವಂತೆ 'ಭಾರತವನ್ನು ಸಾರ್ವಭೌಮ ಸಮಾಜವಾದಿ ಧರ್ಮಾತೀತ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ಉಳಿಸಿ, ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ನ್ಯಾಯ, ವಿಚಾರ ಅಭಿವ್ಯಕ್ತಿ ನಂಬಿಕೆ ಧರ್ಮಶ್ರದ್ಧೆ ಉಪಾಸನ ಸ್ವಾತಂತ್ರ್ಯ ಹಾಗೂ ಅವಕಾಶಗಳಲ್ಲಿ ಸಮಾನತೆಯನ್ನು ದೊರುಕುವಂತೆ ಮಾಡಲು, ವ್ಯಕ್ತಿಯ ಘನತೆಯನ್ನು, ರಾಷ್ಟ್ರದ ಏಕತೆ ಅಖಂಡತೆಯನ್ನು ಸುನಿಶ್ಚಿತಗೊಳಿಸಿ ಅವರೆಲ್ಲರಲ್ಲಿ ಭಾತೃತ್ವ ವೃದ್ಧಿಗೊಳಿಸಬೇಕಿದೆ.

ದೇಶದಲ್ಲಿ ಇಂದು ಕೋಮುವಾದಿ ಮೂಲಭೂತವಾದಿ ಶಕ್ತಿಗಳು ಹೆಚ್ಚೆಚ್ಚು ಆಕ್ರಮಣಕಾರಿಯಾಗಿ ಜನರ ನೆಮ್ಮದಿಗೆ ಭಂಗವನ್ನುಂಟು ಮಾಡುತಿದ್ದು, ದಲಿತರ, ಮಹಿಳೆಯರ, ಅಲ್ಪಸಂಖ್ಯಾತರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳನ್ನು, ದೇಶದಲ್ಲಿ ಸರ್ವಾಧಿಕಾರ ಹೆಡೆ ಎತ್ತತೊಡಗಿರುವುದನ್ನು ಬಲವಾಗಿ ಖಂಡಿಸುವ ಮತ್ತು ಪ್ರಜಾಪ್ರಭುತ್ವದ ಉಳಿವಿಗಾಗಿ, ಕೋಮು ಸಾಮರಸ್ಯವನ್ನು ಬಲಪಡಿಸುವುದಕ್ಕಾಗಿ ಬದ್ಧತೆಯಿಂದ ಹೋರಾಡುವುದಾಗಿ ಸಂಕಲ್ಪಿಸುವ ಪ್ರತಿಜ್ಞಾವಿಧಿಯನ್ನು ಬೋಧಿಸಿದರು.



ರಾಜ್ಯ ಕಾರ್ಯದರ್ಶಿ ಗುರುರಾಜ ದೇಸಾಯಿ ಮೊಬತ್ತಿ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ದೇಶವನ್ನು ಸಂಕಷ್ಟಗಳಿದ ಪಾರು ಮಾಡಲು ವಿದ್ಯಾರ್ಥಿಗಳೆಲ್ಲ ಮುಂದಾಗಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದ ನೇತೃತ್ವವನ್ನು ಜಿಲ್ಲಾಧ್ಯಕ್ಷ ಅಮರೇಶ ಕಡಗದ, ಜಿಲ್ಲಾ ಕಾರ್ಯದರ್ಶಿ ಬಾಳಪ್ಪ, ತಾಲೂಕಾಧ್ಯಕ್ಷ ಗ್ಯಾನೇಶ್ ಕಡಗದ, ಕಾರ್ಯದರ್ಶಿ ಮರಿನಾಗ ಡಗ್ಗಿ, ಅಮರೇಶ್ ಕುರಿ, ಭೀಮೇಶ್ ಡಗ್ಗಿ, ನಾಗರಾಜ ಲಾಯದಹುಣಸಿ, ಯಮನೂರಪ್ಪ, ಮೌನೇಶ, ಮಂಜುನಾಥ, ಫೀರೋಜ್, ಮಾಬುಸಾಬ್, ಸದ್ದಾಂ, ಹನುಮೇಶ್, ಹನುಮಂತ, ನಿರುಪಾದಿ, ಮಂಜುನಾಥ ನೀರಲೂಟಿ, ನಾಗರಾಜ ಉತ್ತನೂರು ವಹಿಸಿದ್ದು, ಕಾರ್ಯಕ್ರಮದಲ್ಲಿ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಜನವಾದಿ ಮಹಿಳಾ ಸಂಘಟನೆಯ ದ.ಕ ಜಿಲ್ಲಾ ವಿಸ್ತೃತ ಸಭೆ:

ಜನವಾದಿ ಮಹಿಳಾ ಸಂಘಟನೆಯನ್ನು ಇನ್ನಷ್ಟು ಬಲಿಷ್ಠಗೊಳಿಸುವ ದೃಷ್ಟಿಯಿಂದ ಜನವರಿ 22ರಂದು ಬೋಳಾರದಲ್ಲಿ ನಡೆಯಿತು. ಜಿಲ್ಲೆಯ ಎಲ್ಲ ತಾಲೂಕುಗಳಲ್ಲೂ ಜೆ.ಎಂ.ಎಸ್‌ನ್ನು ಕಟ್ಟಿ ಬೆಳೆಸುವ ಉದ್ದೇಶದಿಂದ 4 ವಿಸ್ತೃತ ಸಮಾವೇಶವನ್ನು ಕರೆಯಲಾಗಿತ್ತು. 50 ಮಂದಿ ಪ್ರತಿನಿಧಿಗಳು ಈ ಸಮಾವೇಶದಲ್ಲಿ ಭಾಗವಹಿಸಿದ್ದರು.

ಮಹಿಳೆಯರ ಮೇಲಿನ ದೌರ್ಜನ್ಯ ಖಂಡಿಸುವ, ರೇಶನ್ ಪದ್ಧತಿ ಸಾರ್ವಜನಿಕಗೊಳಿಸಬೇಕೆಂದು ಆಗ್ರಹಿಸುವ ಹಾಗೂ ಇತರೆ ಬೇಡಿಕೆಗಳನ್ನು ಒಳಗೊಂಡ ಒಂದು ಕಾರ್ಯಕ್ರಮವನ್ನು ಜಿಲ್ಲಾ ಮಟ್ಟದಲ್ಲಿ ಹಮ್ಮಿಕೊಳ್ಳಲು ಆಯೋಜಿಸಲಾಗಿದೆ.

ಸಮಾವೇಶದ ಅಧ್ಯಕ್ಷತೆ ಸಂಘಟನೆಯ ಜಿಲ್ಲಾಧ್ಯಕ್ಷೆ ಜಯಂತಿ ಬಿ. ಶೆಟ್ಟಿ ವಹಿಸಿದ್ದರು. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯಾಧ್ಯಕ್ಷೆ ಗೀತಾ ಸಮಾವೇಶದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಸಂಘಟನೆಯ ಕಾರ್ಯದರ್ಶಿ ರಾಧಾ, ಪದಾಧಿಕಾರಿಗಳಾದ ಲಕ್ಷ್ಮೀ ಮತ್ತಿತರರು ಸಮಾವೇಶದಲ್ಲಿ ಭಾಗವಹಿಸಿದ್ದರು.

ಕಾಯ್ದೆಗೆ 10 ವರ್ಷ: ಅರಣ್ಯ ಹಕ್ಕುಗಳ ಜಾರಿಗೆ ಹತ್ತಾರು ಅಡ್ಡಿಗಳು

ಎಸ್.ವೈ.ಗುರುಶಾಂತ್

ದಿಡ್ಡಳ್ಳಿ ಆದಿವಾಸಿಗಳ ಸಮಸ್ಯೆಗಳು ಇನ್ನೂ ಇತ್ಯರ್ಥ ಕಾಣಲಿಲ್ಲ. ಕೊಡಗು ಜಿಲ್ಲೆಯ ಎಲ್ಲಾ ಆದಿವಾಸಿಗಳ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರ ತೆರೆದ ಮನಸ್ಸಿನಿಂದ ಇದೆ ಎಂದು ಹೇಳಿರುವುದು ಈಗಲೂ ಪುನರುಚ್ಚಾರಗೊಳ್ಳುತ್ತಿದೆ ಎಂಬುದೂ ನಿಜ. ಆದರೆ ಅಲ್ಲೇ ಪಕ್ಕದ ಬಿಟ್ಟಾಂಗಾಲ ಬಳಿಯ ಆದಿವಾಸಿಗಳು ಅರಣ್ಯ ಹಕ್ಕುಗಳ ಕಾಯ್ದೆಯ ಅನುಗುಣವಾಗಿ ತಮಗೆ ಭೂಮಿ ಮತ್ತು ಸಮುದಾಯದ ಹಕ್ಕುಗಳು ಸಿಕ್ಕೇ ಸಿಗುತ್ತದೆ ಎಂದು ನಂಬಿ ಕೊನೆಗೆ ನಿರಾಶೆಯೇ ಗತಿ ಎಂದು ಚಿಂತಿತರಾಗಿದ್ದಾರೆ. ಕಾಯ್ದೆಯ ನಿಯಮದಂತೆ ಎಲ್ಲಾ ದಾಖಲೆಗಳನ್ನು ಸಲ್ಲಿಸಿಯೂ, ತಮ್ಮ ಕ್ಲೇಮ್‌ಗಳನ್ನು ಅರಣ್ಯ ಇಲಾಖೆ ತಿರಸ್ಕರಿಸಿದೆ. ಇವರ ಕ್ಲೇಮ್‌ಗಳನ್ನು ದೃಢೀಕರಿಸಿ, ಅಂಗೀಕಾರದ ಮುದ್ರೆ ಒತ್ತಿರುವ ಗ್ರಾಮ ಅರಣ್ಯ ಹಕ್ಕುಗಳ ಸಮಿತಿಯ ಶಿಫಾರಸ್ಸುಗಳನ್ನು ಅರಣ್ಯ ಇಲಾಖೆ ಕಣ್ಣುಮುಚ್ಚಿ ತಿರಸ್ಕರಿಸಿ ಬಿಟ್ಟಿದೆ. ಮೇಲಾಗಿ ದಾಖಲೆಗಳನ್ನು ಸಲ್ಲಿಸಿಲ್ಲ ಎಂಬ ಆರೋಪ ಬೇರೆ! ಕಾಡಿನ ನಡುವೆ ಇದ್ದವರನ್ನು ಹೊರ ಹಾಕಿದ ಮೇಲೆ ಇದು ಗಾಯದ ಮೇಲೆ ಎಳೆದ ಬರೆ!

ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಹಲಲರು ಬುಡಕಟ್ಟು ಸಮುದಾಯದವರ ಪಾಡು ಬೇರೆಯೇನಲ್ಲ. ವಿಚಿತ್ರ ಎಂದರೆ, ಎಸ್.ಟಿ.ಸಮುದಾಯಕ್ಕೆ ಸೇರಿಸುವ ಇವರು ತಮ್ಮ ಪ್ರದೇಶದಲ್ಲಿ ಅರಣ್ಯ ಹಕ್ಕು ಕಾಯ್ದೆ 2006ರಂತೆ ಸಮುದಾಯದ ಹಕ್ಕುಗಳನ್ನು ಕೊಡಬೇಕೆಂದು ನಿಯಮದಂತೆ ಅತ್ಯಂತ ವ್ಯವಸ್ಥಿತವಾಗಿ ನಕಾಶೆ ಬರೆದು ಗ್ರಾಮ ಪಂಚಾಯ್ತಿಗೆ ಮನವಿ ಸಲ್ಲಿಸಲು ಹೋದರೆ ಕಪ್ಪಮಾರು ಪಂಚಾಯ್ತಿಯ ಪಿ.ಡಿ.ಓ. ಅರ್ಜಿ ಪಡೆಯಲು ನಿರಾಕರಿಸುತ್ತಾನೆ. ಬಳಿಕ ಹೀಗೇಕೆಂದು ಪ್ರಶ್ನಿಸಿ ಅರ್ಜಿಯನ್ನು ಸ್ವೀಕರಿಸಲು ಗ್ರಾಮ ಪಂಚಾಯತ್ ಅಧ್ಯಕ್ಷರಿಗೆ ಕೇಳಿದರೆ ಒಪ್ಪಿ ನಂತರ ನಿರ್ಲಕ್ಷಿಸುತ್ತಾರೆ. ಬಳಿಕ ಗತ್ಯಂತರವಿಲ್ಲದೇ ಉಪ ವಿಭಾಗೀಯ ಮ್ಯಾಜಿಸ್ಟ್ರೇಟ್ (ಅಸಿಸ್ಟಂಟ್ ಕಮಿಷನರ್) ರವರಿಗೆ ಮನವಿ ಸಲ್ಲಿಸಿದರೆ ತಮ್ಮನ್ನು ಮೀರಿ ಹೇಗೆ ಹೋದಿರೆಂದು ಹಾರಾಡುತ್ತಾರೆ.! ಇವರ ದರ್ಪ, ಕುಯುಕ್ತಿ ಇಷ್ಟಕ್ಕೆ ನಿಲ್ಲುವುದಿಲ್ಲ. ಪಿ.ಡಿ.ಓ 'ಸಾಹೇಬರು ಸಮುದಾಯ ಹಕ್ಕು ಕೇಳಿದ ಹಸಲರು ಸಮುದಾಯದವರ ವಿರುದ್ಧ ಗ್ರಾಮಸ್ಥರನ್ನು ಎತ್ತಿ ಕಟ್ಟಲು ಮುಂದಾಗುತ್ತಾರೆ. ಹಸಲರು ಊರಿನವರ ಆಸ್ತಿಗಳನ್ನು ತಮಗೆ ಕೊಡಬೇಕೆಂದು ಕೇಳುತ್ತಿದ್ದಾರೆ ಎಂದೆಲ್ಲಾ ಸುಳ್ಳು ಸುದ್ದಿ ಹಬ್ಬಿಸಿ ಜನರನ್ನು ಪ್ರಚೋದಿಸುತ್ತಾನೆ. ಬಳಿಕ ವ್ಯಾಜ್ಯವೇಕೆ ರಾಜಿ ಸಂಧಾನ ಮಾಡೋಣವೆಂದು ಸಭೆ ಸೇರಲು ಹೇಳಿ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ರಾಜ್ಯ ಸಂಘಟನಾ ಸಮಿತಿ ಸದಸ್ಯರಾದ ಶ್ರೀಧರ ಕೊರಗ, ಎಂ.ನಾಗರಾಜ್‌ರವರನ್ನು ಹೊಡೆಸಲು ತಂತ್ರ ರೂಪಿಸುತ್ತಾರೆ. ಪೊಲೀಸ್ ಅಧಿಕಾರಿಗಳಿಗೆ ಇವರು 'ನಕ್ಸಲೀಯರು' 'ಹೊರಗಿನವರು' ಎಂದೆಲ್ಲಾ ಸುಳ್ಳು ಹೇಳಿ ಅವರನ್ನು ತಪ್ಪುದಾರಿಗೆಳೆಯುತ್ತಾರೆ.

ಕೆಲವು ಪಂಚಾಯ್ತಿ ಸದಸ್ಯರು ಇವರು ಧರ್ಮಸ್ಥಳದವರನ್ನೂ ಬಿಟ್ಟಿಲ್ಲ ಎಂಬಂತೆ ಇಲ್ಲಸಲ್ಲದ ಅಪಪ್ರಚಾರಕ್ಕೂ ತೊಡಗುತ್ತಾರೆ. ಸಭೆ ದಿನ ಆದಿವಾಸಿ ಹಕ್ಕು ಪ್ರತಿಪಾದಿಸಿದವರ ಮೇಲೆ 'ವಿಚಾರಣೆ, ದಂಡನೆಗೂ ಯತ್ನಿಸಲಾಗುತ್ತದೆ, ವಂಚಿತರ ಪರ ನಿಲ್ಲಬೇಕಾದ ಉಪ ತಹಶೀಲ್ದಾರ್ ತಮ್ಮ ಅಧಿಕಾರದ ದಂಡವನ್ನು ನ್ಯಾಯ ಕೇಳಿದವರ ಮೇಲೆಯೇ ಬೀಸುತ್ತಾರೆ.

ಇದು ಒಂದು ಊರಿನ, ಒಂದು ಜಿಲ್ಲೆಯ ಅಥವಾ ರಾಜ್ಯದ ಕಥೆ ಮಾತ್ರವಲ್ಲ. 2006ರಲ್ಲಿ ಅಂಗೀಕರಿಸಲ್ಪಟ್ಟ ಅರಣ್ಯ ಹಕ್ಕುಗಳ ಕಾಯ್ದೆ ಜಾರಿಯ ಗತಿಯೇನಾಗಿದೆ ಎಂದರೆ ದೇಶದ ಉದ್ದಗಲಕ್ಕೂ ಇದೇ ಪಾಡು–ವ್ಯಥೆಯ ಹಾಡು! (ಎಡರಂಗಗಳ ಆಡಳಿತ ಬಿಟ್ಟರೆ). ತ್ರಿಪುರಾ, ಕೇರಳ ರಾಜ್ಯಗಳನ್ನು ಹೊರತು ಪಡಿಸಿದರೆ ಪ್ರತಿ ರಾಜ್ಯದಲ್ಲೂ ಅರಣ್ಯವಾಸಿಗಳ ಆದಿವಾಸಿಗಳ ಆಕ್ರಂದನ, ಆಕ್ರೋಶ ಒಂದೇ ಆಗಿದೆ.

ಅಂದು ಯುಪಿಎ–1 ಸರಕಾರ ಕೇಂದ್ರದಲ್ಲಿದ್ದಾಗ ಎಡಪಕ್ಷಗಳು ನಿರಂತರ ಆಗ್ರಹ, ಒತ್ತಾಯಗಳಿಂದ ಅತ್ಯಂತ ಮಹತ್ವಾಕಾಂಕ್ಷೆಯ ಈ ಕಾಯ್ದೆ ಅಂಗೀಕಾರವಾಯಿತು. 2016ರ ಡಿಸೆಂಬರ್‌ಗೆ ಒಂದು ದಶಕ ಅಂದರೆ 10 ವರುಷಗಳು ಪೂರೈಸಿದವು. ಭಾರತದ ಆದಿವಾಸಿ–ಬುಡಕಟ್ಟು ಸಮುದಾಯಗಳ ಬದುಕಿನಲ್ಲಿ ಒಂದಿಷ್ಟಾದರೂ ಬದಲಾವಣೆಯನ್ನು ತರಬಹುದಾಗಿದ್ದ ಈ ಕಾಯ್ದೆಯ ಜಾರಿಗೆ ಭಾರತ ಸರಕಾರವೂ ಒಳಗೊಂಡು ಬಹುತೇಕ ರಾಜ್ಯಗಳು ಜಾರಿಯನ್ನು ಪ್ರಜ್ಞಾಪೂರ್ವಕವಾಗಿಯೇ ನಿರ್ಲಕ್ಷಿಸಿದವು. ಆದಿವಾಸಿಗಳನ್ನೂ ಸಂರಕ್ಷಿಸುವ ಮಾತಿರಲಿ, ಬದಲಾಗಿ ಅತ್ಯಧಿಕ ನೆಲೆಗೊಂಡುರುವ ಝಾರ್ಖಂಡ್, ಛತ್ತೀಸ್‌ಘಡ್, ಆಂಧ್ರ, ತೆಲಂಗಾಣ, ಗುಜರಾತ್, ಒಡಿಸ್ಸಾ, ಅಸ್ಸಾಂ, ಹೀಗೆ ಅದರ ನೆಲೆಗಳಿಂದಲೇ ಎತ್ತಂಗಡಿ ಮಾಡಿ ದಿಕ್ಕೇಡಿಗಳನ್ನಾಗಿಸಲಾಗಿದೆ. ಕಾನೂನೊಂದೇ ಸಾಲದು ಜಾರಿಗಾಗಿಯೂ ಪ್ರತಿ ಹೆಜ್ಜೆಯಲ್ಲೂ ಸಂಘರ್ಷ ನಡೆಸಬೇಕಾಗುತ್ತದೆ ಎಂಬುದು ಅನುದಿನದ ಅನುಭವ.



ಹಾಗೆ ನೋಡಿದರೆ ಇಂತಹ ಕಾಯ್ದೆಯನ್ನೂ ತರಲು ಆಳುವ ವರ್ಗಗಳಿಗೆ ಇಷ್ಟವೇ ಇರಲಿಲ್ಲ. ಮಸೂದೆ ರೂಪಿಸುವ ಪ್ರಕ್ರಿಯೆಯಲ್ಲಿ ಸಿಪಿಐ(ಎಂ)ನ ಸಂಸದರಾದ ಆದಿವಾಸಿ ನಾಯಕ ಕಾಂ॥ಬಾಜುಬಾನ್ ರಿಯಾಂಗ್, ಕಾಂ॥ಬಾಬುರಾವ್, ಕಾಂ॥ಬೃಂದಾ ಕಾರಟ್ ಅತ್ಯಂತ ಕ್ರಿಯಾಶೀಲ ಪಾತ್ರವಹಿಸಿದ್ದರು. ಆಗಲೇ ಸ್ಥಾಪಿತ ಹಿತಾಸಕ್ತಿಗಳು ಕಾಯ್ದೆಯು ನಾಮಕಾವಸ್ತೆಯಾಗುವಂತೆ ಹವಣಿಸಿದವು. ಅದು ಸಾಧ್ಯವಾಗದಿದ್ದಾಗ ಕಾಯ್ದೆಯ ಜಾರಿಗಾಗಿ ನಿಯಮಗಳನ್ನೂರೂಪಿಸುವಾಗ ದುರ್ಬಲಗೊಳಿಸಲು ಯತ್ನಿಸಿದರು. ಅರಣ್ಯ ಹಕ್ಕುಗಳನ್ನು ನೀಡುವಾಗ ಗ್ರಾಮ ಸಭೆ, ಪಂಚಾಯತ್ ಪಾತ್ರ, ಆದಿವಾಸಿ ಸಮುದಾಯಗಳಿಗೆ ಸಿಗಬೇಕಾದ ಅರಣ್ಯ ಸಂಪನ್ಮೂಲಗಳನ್ನೂ ಗುರುತಿಸುವಾಗ ನಿರ್ಬಂಧ ವಿಧಿಸುವುದಕ್ಕೆ ಎಡಪಕ್ಷಗಳು ಪ್ರತಿರೋಧಿಸಿ, ವಿಸ್ತರಿಸಿದವು. ಅಂದಿನ ವಿರೋಧ ಪಕ್ಷವಾಗಿದ್ದ ಬಿಜೆಪಿ ಪಕ್ಷ ಈ ಕಾಯ್ದೆಗೆ ವಿರೋಧಿಸಿತ್ತು. ಅದು ಅಂಗೀಕಾರವಾದಾಗ, ಅರಣ್ಯ ವಾಸಿಗಳ ಪಟ್ಟಿಯಲ್ಲಿ ಬಾಂಗ್ಲಾ ವಲಸಿಗರು ನುಸುಳುತ್ತಾರೆ ಎಂದೂ ಖ್ಯಾತೆ ತೆಗೆದಿತ್ತು. ಈ ಹತ್ತು ವರ್ಷಗಳಲ್ಲಿ ಬಿಜೆಪಿ ಪಕ್ಷದ ಆಡಳಿತ ಇರುವಲ್ಲಿ ಬಾಂಗ್ಲಾ ಭಾಷಿಕರಲ್ಲ, ಮೂಲ ಆದಿವಾಸಿಗಳಿಗೆ ಒಂದಿಷ್ಟು ಹಕ್ಕು ಕೊಡಲಿಲ್ಲ ಎಂಬುದು ಜಗಜ್ಜಾಹೀರಾಗಿದೆ.

ಈಗಿನ ಮೋದಿ ನೇತೃತ್ವದ ಕೇಂದ್ರ ಸರಕಾರವಂತೂ ಎಲ್ಲಾ ಕಾಯ್ದೆ, ನೀತಿ ನಿಯಮಗಳನ್ನೂ ಗಾಳಿಗೆ ತೂರಿ ಆದಿವಾಸಿಗಳನ್ನು ನೆಲೆಗಳಿಂದ ಓಡಿಸುತ್ತಾ, ಅದಾನಿ, ಅಂಬಾನಿ, ಬಾಬಾ ರಾಮ್‌ದೇವ್‌ರಂತಹ ಕಾರ್ಪೋರೇಟ್ ಕಂಪನಿಗಳನ್ನು ನೆಲೆಗೊಳಿಸುತ್ತಿದೆ. ಅರಣ್ಯ ಹಕ್ಕುಗಳ ಕಾಯ್ದೆ, ಸಂವಿಧಾನದ 5ನೇ ಷೆಡ್ಯೂಲ್‌ನ ಖಾತ್ರಿ, ಪಂಚಾಯತ್ ಹಕ್ಕುಗಳನ್ನು ನೆಲಸಮಗೊಳಿಸಲು ಖನಿಜ, ಗಣಿಗಾರಿಕೆ ಕಾಯ್ದೆಗೆ ತಿದ್ದುಪಡಿ ಮತ್ತು ಕಾಯ್ದೆಯ ಸಂರಕ್ಷಣಾ ನಿಯಮಗಳನ್ನು ಸಡಿಲಗೊಳಿಸಿ ಧಾಳಿ ನಡೆಸುತ್ತಿದೆ. ಆದಿವಾಸಿ ಪ್ರದೇಶಗಳಲ್ಲಿ ಆದಿವಾಸಿಗಳ ಒಪ್ಪಿಗೆ, ಗ್ರಾಮ ಸಭೆ, ಪಂಚಾಯತ್ ಅಂಗೀಕಾರ ಅಗತ್ಯವೆಂಬುದನ್ನೇ ಮೂಲೆಗೊತ್ತಿದೆ. ಆಂಧ್ರ, ತೆಲಂಗಾಣ ರಾಜ್ಯಗಳಲ್ಲಿ ತೆಲುಗುದೇಶಂ, ಬಿಜೆಪಿಯ ಎನ್‌ಡಿಎ ಗ್ರಾಮ ಪಂಚಾಯತ್‌ಗಳ ಅಂಗೀಕಾರದ ಖೋಟಾ ಪ್ರಮಾಣ ಪತ್ರಗಳನ್ನೇ ಸೃಷ್ಟಿಸಿ ಬುಡಮೇಲು ಮಾಡ ಹೊರಟ ಹಗರಣ ಬಯಲಾಗಿದೆ. ವಿರೋಧಿಸಿದವರನ್ನೂ ದಮನಿಸಲು ಹತ್ಯೆ, ಜೈಲು ಶಿಕ್ಷೆಗಳಂತಹ ಕ್ರಮ ಅನುಸರಿಸಲಾಗುತ್ತಿದೆ.

ಅರಣ್ಯ ಹಕ್ಕುಗಳ ಕಾಯ್ದೆಯಲ್ಲಿ ಆದಿವಾಸಿಗಳಿಗೆ ಅವರ ನೆಲೆಯಲ್ಲಿ 10 ಎಕರೆಯವರೆಗೆ ಜಮೀನು ನೀಡಬೇಕೆಂದಿದೆ. ಅಲ್ಲದೇ ಆ ಪ್ರದೇಶದಲ್ಲಿನ ಅರಣ್ಯದ ಕಿರು ಉತ್ಪನ್ನಗಳ ಸಂಗ್ರಹ, ಅಲ್ಲದೇ ದೇವಸ್ಥಾನ, ಸ್ಮಶಾನ, ನೀರಿನ ಮೇಲಿನ ಹಕ್ಕು, ಅಂದರೆ ಕೃಷಿ, ಮೀನುಗಾರಿಕೆ ಇತ್ಯಾದಿಗಳಿಗೆ ನೀರಿನ ಬಳಕೆ ಅಭಾದಿತ ಅನುಭವಿಸುವ ಹಕ್ಕು ಇದೆ. ಆದರೆ ಇವಾವೂ ಪೂರ್ಣ ಜಾರಿಯಾದ ಉದಾಹರಣೆಗಳೇ ಇಲ್ಲ.

ಕರ್ನಾಟಕವೂ ಒಳಗೊಂಡು ದೇಶದ ಬಹುತೇಕ ರಾಜ್ಯಗಳಲ್ಲಿ ಜಿಲ್ಲಾಧಿಕಾರಿಗಳು ಭೂಮಿ ನೀಡಿಕೆಯನ್ನೂ 10 ಗುಂಟೆಯಿಂದ 1/2 ಎಕರೆ ಬಹಳವೆಂದರೆ 1 ಎಕರೆಗೆ ಸೀಮಿತಗೊಳಿಸಿದ್ದಾರೆ. ಕೆಲವೆಡೆ 30X30 ಮನೆ ನಿವೇಶನವನ್ನೇ ಅರಣ್ಯ ಹಕ್ಕುಗಳ ಜಾರಿ ಎಂದು ಬರೆದುಕೊಂಡಿದ್ದಾರೆ.

ಕರ್ನಾಟಕದಲ್ಲಿ 2015ರ ಅಂತಿಮ ವರದಿಯಂತೆ ಸಮುದಾಯ ಹಕ್ಕಿಗಾಗಿ 6204 ಕ್ಲೇಮ್ ಸಲ್ಲಿಕೆಯಾಗಿದ್ದರೆ ಅಂಗೀಕರಿಸಿದ್ದು ಕೇವಲ 144. ಅರಣ್ಯ ಹಕ್ಕಿನಂತೆ ಭೂಮಿಗಾಗಿ ಕ್ಲೇಮ್‌ನಲ್ಲಿ ಪಡೆದಿದ್ದು 2,60,679. ಇದರಲ್ಲಿ 2,56,104 ವ್ಯಕ್ತಿಗತ, 4,575 ಸಮುದಾಯಗಳ ಹಕ್ಕು. ಆದರೆ ಪರಿಗಣಿಸಿ, ಭೂಮಿ ನೀಡಿದ್ದು 7,700 ಕ್ಕೆ ಮಾತ್ರ. ಇದರಲ್ಲಿ 7,604 ವ್ಯಕ್ತಿಗತ, 96 ಸಮುದಾಯಗಳದ್ದು. ಇಲ್ಲಿ ಕೂಡ ಮಾಡಿದ್ದು 36,536.12 ಎಕರೆ–ಯಾದರೂ ವ್ಯಕ್ತಿಗಳಿಗೆ ಸಿಕ್ಕಿದ್ದು 10,292.85 ಎಕರೆ ಮಾತ್ರ. ಈ ವಿವರಗಳೇ ತೋರಿಸುವಂತೆ ಅರಣ್ಯ ಹಕ್ಕುಗಳ ಜಾರಿಯಲ್ಲಿ ಕರ್ನಾಟಕ ಅತ್ಯಂತ ಕೆಳಗಿನ ಸ್ಥಾನದಲ್ಲಿದೆ. ಇದನ್ನೂ ಒಳಗೊಂಡು ಉತ್ತರ ಪ್ರದೇಶ ಶೇ.74, ಪಶ್ಚಿಮ ಬಂಗಾಳ ಶೇ.68, ಮಹಾರಾಷ್ಟ್ರ ಶೇ.64, ಮಧ್ಯಪ್ರದೇಶ ಶೇ.61ರಷ್ಟು ಕ್ಲೇಮುಗಳನ್ನು ತಿರಸ್ಕರಿಸಿವೆ. ಒಟ್ಟು ದೇಶದಲ್ಲಿ ಕೇವಲ ಶೇ.3 ಮಾತ್ರವೇ ಸಂಪನ್ಮೂಲ ಹಕ್ಕು ಹಂಚಿಕೆಯಲ್ಲಿ ಸರಿಯಾಗಿ ಜಾರಿಯಾಗಿದೆ ಎಮದು ಮಾಹಿತಿಗಳು ತಿಳಿಸುತ್ತವೆ. ಶೇ.97ರಷ್ಟು ತಿರಸ್ಕೃತಗೊಂಡಿವೆ.

ಆದರೆ ಕರ್ನಾಟಕವೂ ಸೇರಿದಂತೆ ರಾಜ್ಯಗಳು ಆದಿವಾಸಿಗಳಿಗೆ ಭೂಮಿ, ಸೌಲಭ್ಯ ಕೊಡುವ ಮಾತುಗಳನ್ನೂ ಆಡುತ್ತಲೇ ಇವೆ. ನ್ಯಾಯಾಲಯಗಳಿಗೆ ಭರವಸೆ ನೀಡುತ್ತಲೇ ಇವೆ. ದುರಂತವೆಂದರೆ ಈ ಕಾಯ್ದೆ ಜಾರಿಗೆ ಇನ್ನೆಷ್ಟು ದಿನಬೇಕು, ಬೇಗನೇ ಅಂತ್ಯ ಹಾಡಿ ಎಂಬ ಅರ್ಥ ಬರುವ ಆದೇಶ ಸುಪ್ರೀಂ ಕೋರ್ಟ್‌ನಿಂಧ ಬಂದಿದೆ. ಅಂದರೆ ಜಾರಿಯ ಪ್ರಕ್ರಿಯೆ ಮುಗಿಸಿ ಬಿಡುವುದು ಸರಕಾರಗಳ ಉದ್ದೇಶವೂ ಆಗಿದೆ. ತಮಿಳುನಾಡು ಸರಕಾರವಂತೂ 10 ವರ್ಷಗಳ ಕಾಲ ಈ ಕಾಯ್ದೆ ಜಾರಿಯಾಗದಂತೆ ನ್ಯಾಯಾಲಯದಿಂದಲೇ ತಡೆ–ಯಾಜ್ಞೆ ತಂದಿತ್ತು !

ಉಜ್ವಲ ಉದಾಹರಣೆ :

ಇದು ಭಾರತದ ಘನ ಕೇಂದ್ರ ಸರಕಾರ, ಇವೇ ಪಕ್ಷಗಳ ಆಡಳಿತದ ರಾಜ್ಯ ಸರಕಾರಗಳ ಪಾಡಾದರೆ, ಇದಕ್ಕೆ ಭಿನ್ನವಾದ ಕ್ರಮಗಳಿರುವುದು ಸಿಪಿಐ(ಎಂ) ನೇತೃತ್ವದ ಎಡ, ಎಡ ಪ್ರಜಾಸತ್ತಾತ್ಮಕ ರಂಗಗಳ ಸರಕಾರಗಳಲ್ಲಿ. ತ್ರಿಪುರಾ ರಾಜ್ಯದ ದಾಖಲೆ ಗಮನಾರ್ಹ. ಕಾಯ್ದೆ ಅಂಗೀಕಾರವಾಗುತ್ತಿದ್ದಂತೆಯೇ ಆದಿವಾಸಿ ಸಂಘಟನೆ ಗಣ ಮುಕ್ತಿ ಪರಿಷದ್, ಕಿಸಾನ್ ಸಭಾಗಳು ರಾಜ್ಯದಾದ್ಯಂತ ಶಿಬಿರಗಳನ್ನು ನಡೆಸಿ, ಕಾಯ್ದೆಯ ಬಗ್ಗೆ ಜಾಗೃತಿ ಸೃಷ್ಟಿಸಿತು. ಜಾಥಾ ಅಭಿಯಾನ ಸಂಘಟಿಸಿತು. ಬಳಿಕ ರಾಜ್ಯ ಸರಕಾರ ತನ್ನ ಎಲ್ಲಾ ಹಂತಗಳ ಆಡಳಿತವನ್ನೂ ತೊಡಗಿಸಿ ಪ್ರತಿಯೊಬ್ಬ ಹಕ್ಕುದಾರರೂ ಕ್ಲೇಮ್‌ಗಳನ್ನೂ ಹಾಕುವಂತೆ ನೋಡಿಕೊಂಡಿತು ಮತ್ತು ಅವುಗಳಲ್ಲಿ ಶೇ.95ರಷ್ಟನ್ನು ಜಾರಿಗೆ ಅಂಗೀಕರಿಸಿತು.

ಕೇವಲ ಆದಿವಾಸಿಗಳು ಮಾತ್ರವಲ್ಲ, ಅರಣ್ಯವಾಸಿ ಭೂರಹಿತರಿಗೂ ಜಮೀನು ಸಿಕ್ಕಿರುವುದು ದಾಖಲೆಯೇ ಆಗಿದೆ. (1,82,617 ಕ್ಲೇಮುಗಳಲ್ಲಿ 1,70,473 ಆದಿವಾಸಿಗಳು) ಹಾಗೇ ಕೇರಳ ಹಿಂದೆ ಎಲ್‌ಡಿಎಫ್ ಮತ್ತು ಈಗ ಆದಿವಾಸಿಗಳ ಎಲ್ಲಾ ಹಕ್ಕುಗಳ ರಕ್ಷಣೆಗೆ ಕಟಿಬದ್ಧವಾಗಿದೆ. 37,535 ಕ್ಲೇಮ್‌ಗಳಲ್ಲಿ 24,599 ಗಣಿಸಿದೆ.

33,018.12 ಎಕರೆ ಭೂಮಿ ನೀಡಿದೆ ಮತ್ತು ವಿವಿಧ ಯೋಜನೆಗಳ ಮೂಲಕ ಅವರ ಬದುಕು ರಕ್ಷಿಸಲು ಕ್ರಮ ವಹಿಸಿದೆ. ಅಭಿವೃದ್ಧಿಯಲ್ಲಿ ದಾಪುಗಾಲು ಎಂದು ಬೊಗಳೆ ಹೊಡೆವ ಗುಜರಾಯ್, ಕರ್ನಾಟಕದಂತಹ ರಾಜ್ಯಗಳು ನಾಚಿಕೆಪಡಬೇಕಿದೆ.

ಮುಖ್ಯ ಸಂಗತಿಯೆಂದರೆ ಈ ಬಹುತೇಕ ರಾಜ್ಯಗಳಿಗೆ ಆದಿವಾಸಿ ಹಕ್ಕುಗಳ ಕಾಯ್ದೆ ಜಾರಿಯಾಗಲೇಬಾರದೆಂದು ಪ್ರಜ್ಞಾಪೂರ್ವಕವಾಗಿ ನಿರ್ಧರಿಸಿವೆ. ಹೀಗಾಗಿ ಸಾಮೂಹಿಕವಾಗಿ ಎತ್ತಂಗಡಿ ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ಆದಿವಾಸಿಗಳು ಮತ್ತು ಪ್ರಜಾಸತ್ತಾತ್ಮಕ ಜನ ಚಳುವಳಿ ಕಾಯ್ದೆಯ ಜಾರಿಗೆ, ಅದರ ರಕ್ಷಣೆಗೆ ಹೋರಾಡುವ ಮಹತ್ತರ ಹೊಣೆ ಇದೆ. ಇದು ಸವಾಲ ಕೂಡ. ●

ಸಾರ್ವಜನಿಕ ವಲಯದ ಕಂಪನಿಗಳಿಗೆ 'ಸ್ವತಂತ್ರ' ನಿರ್ದೇಶಕರಾಗಿ ಬಿಜೆಪಿ ಮುಖಂಡರ ನೇಮಕ: ಗರಿಷ್ಟ ಭಾಷಣ–ಕನಿಷ್ಟ ಶಾಸನದ ಪ್ರತೀಕ:ಯೆಚೂರಿ ವ್ಯಂಗ್ಯ

ಎನ್‌ಡಿಎ ಸರಕಾರದ ಸಂಪುಟ ನೇಮಕ ಸಮಿತಿ(ಎಸಿಸಿ) ಕಳೆದ ವಾರ ಕನಿಷ್ಟ 10 ಬಿಜೆಪಿ ರಾಜಕಾರಣಿಗಳನ್ನು ಸಾರ್ವಜನಿಕ ವಲಯದ ಪ್ರತಿಷ್ಠಿತ ಕಂಪನಿಗಳಿಗೆ 'ಸ್ವತಂತ್ರ' ನಿರ್ದೇಶಕರಾಗಿ ನೇಮಕ ಮಾಡಿದೆ ಎಂದು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆ ವರದಿ ಮಾಡಿದೆ.

2014ರಲ್ಲಿ ಸೆಬಿ(ಸೆಕ್ಯುರಿಟಿಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ) ಒಂದು ತಿದ್ದುಪಡಿ ತಂದು ಕಂಪನಿಗಳ ಆಡಳಿತ ಮಂಡಳಿಗಳಲ್ಲಿ ಕನಿಷ್ಟ 50% 'ಸ್ವತಂತ್ರ' ನಿರ್ದೇಶಕರಿರಬೇಕು, ಅವರಲ್ಲಿ ಒಬ್ಬರಾದರೂ ಮಹಿಳೆಯರಿರಬೇಕು ಎಂದು ವಿಧಿಸಿತ್ತು.


ಈ ಹಿಂದೆ ಕಾಂಗ್ರೆಸ್ ನೇತೃತ್ವದ ಸರಕಾರ ಸಾರ್ವಜನಿಕ ವಲಯದ ಸಂಸ್ಥೆಗಳಿಗೆ ತನ್ನ ಪಕ್ಷಕ್ಕೆ ವಿಧೇಯರಾದವರನ್ನು'ಸ್ವತಂತ್ರ' ನಿರ್ದೇಶಕರಾಗಿ ನೇಮಿಸಿದ್ದನ್ನು ಟೀಕಿಸುತ್ತಿದ್ದ ಈಗ 'ಕಾಂಗ್ರೆಸ್ ಮುಕ್ತ' ಭಾರತವನ್ನು ಕಟ್ಟುವುದಾಗಿ ಹೇಳುತ್ತಿರುವ ಬಿಜೆಪಿ ಈಗ ಅದೇ ಕಾಂಗ್ರೆಸ್ ದಾರಿಯನ್ನೇ ಹಿಡಿದಿರುವುದು ಸುಮಾರು ಮುರು ವರ್ಷಗಳ'ಅಚ್ಚೇದಿನ' ನಂತರ ಆಶ್ಚರ್ಯವೇನೂ ಉಂಟು ಮಾಡಿಲ್ಲ.

ಬಿಜೆಪಿಯ ದಿಲ್ಲಿ ಘಟಕ ಉಪಾಧ್ಯಕ್ಷೆ ಶಾಜಿಯ ಇಲ್ಮಿಯವರನ್ನು ಇಂಜಿನಿಯರ್ಸ್ ಇಂಡಿಯಾ ಲಿ.(ಇಐಎಲ್)ಗೆ, ಗುಜರಾತಿನ ಐಟಿ ಸೆಲ್‌ನ ಸಂಯೋಜಕರಾದ ರಾಜಿಕ ಕಚೆರಿಯಾರನ್ನು ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾಕ್ಕೆ, ಗುಜರಾತಿನ ಬಿಜೆಪಿಯ ಮುಖಂಡೆ ಅಸೀಫಾ ಖಾನ್‌ರವರನ್ನು ನವರತ್ನ ಕಂಪನಿ ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್‌ಗೆ ಹಾಗೂ ಬಿಹಾರದ ಎಂಎಲ್‌ಸಿ ಕಿರಣ್ ಘಾಯ್ ಸಿನ್ಹ ಅವರನ್ನು ನಾಲ್ಕೊ(ರಾಷ್ಟ್ರೀಯ ಅಲ್ಯುಮಿನಿಯಂ ಕಂಪನಿ)ಗೆ 'ಸ್ವತಂತ್ರ' ನಿರ್ದೇಶಕರಾಗಿ ನೇಮಿಸಲಾಗಿದೆ.

ಇಐಎಲ್‌ಗೆ ನೇಮಕಗೊಂಡಿರುವ ಇಲ್ಮಿ ಸಾಮೂಹಿಕ ಸಂಪರ್ಕದ ಪದವಿ ಪಡೆದವರು, ಕಾಟನ್ ಕಾರ್ಪೊರೇಷನ್‌ಗೆ ನೇಮಕಗೊಂಡಿರುವ ರಾಜಿಕ ಕಚೆರಿಯ ಪ್ರಸಾಧನ ತಜ್ಞರು, ಹಿಂದುಸ್ತ ಆನ್ ಪೆಟ್ರೋಲಿಯಂಗೆ ನೇಮಕಗೊಂಡಿರುವ ಅಸೀಫಾ ಖಾನ್ ಇಂಗ್ಲಿಷ್ ಅಧ್ಯಾಪಕರು.

ಇವರನ್ನೆಲ್ಲ ಉತ್ತಮ ಆಳ್ವಿಕೆಯ, ಗರಿಷ್ಟ ಆಳ್ವಿಕೆ, ಕನಿಷ್ಟ ಸರಕಾರದ 'ಅಚ್ಚೇದಿನ'ಗಳನ್ನು ತರಲು ನೇಮಿಸಿದಂತೆ ಕಾಣುತ್ತದೆಯೇ?

ಆದ್ದರಿಂದಲೇ ಈ ಬಗ್ಗೆ ಟಿಪ್ಪಣಿ ಮಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿಯವರು ಇದು 'ಗರಿಷ್ಟ ಭಾಷಣ, ಕನಿಷ್ಟ ಶಾಸನ'ದ ಪ್ರತೀಕ ಎಂದಿರುವುದು.



"ನೋಟುನಿಷೇಧಕ್ಕೆ ನನ್ನನ್ನು ಶಿಕ್ಷಿಸಬೇಡಿ"

ಪಂಜಾಬಿನ ಬಿಜೆಪಿ ಮಂತ್ರಿಯ ಚುನಾವಣಾ ಮನವಿ!

ಪಂಜಾಬಿನ ಅಕಾಲಿ–ಬಿಜೆಪಿ ಸರಕಾರದಲ್ಲಿ ಸ್ಥಳೀಯ ಸಂಸ್ಥೆಗಳ ಮಂತ್ರಿಯಾಗಿರುವ ಬಿಜೆಪಿಯ ಅನಿಲ್ ಜೋಷಿ ಉತ್ತರ ಅಮೃತಸರ ಅಸೆಂಬ್ಲಿ ಕ್ಷೇತ್ರದ ಅಭ್ಯರ್ಥಿಯಾಗಿ ನೋಟು ನಿಷೇಧಕ್ಕೆ ನಾನು ಜವಾಬ್ದಾರನಲ್ಲ, ಅದಕ್ಕಾಗಿ ನನ್ನನ್ನು ಶಿಕ್ಷಿಸಬೇಡಿ ಎಂದು ಅಂಗಲಾಚುತ್ತಿದ್ದಾರೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ.

ನೋಡು ರದ್ದತಿಯ 80–90ಶೇ. ಪರಿಣಾಮ ಮುಗಿದಿದೆ. ಆದರೂ ಜನರಲ್ಲಿರುವ ಸಂದೇಹಗಳನ್ನು ದೂರಮಾಡಲು ಹಾಗೆ ಹೇಳುತ್ತಿದ್ದೇನೆ ಎಂದು ಅವರು ಪತ್ರಕರ್ತರಿಗೆ ಸಮಜಾಯಿಷಿ ನೀಡಿದ್ದಾರಂತೆ. ಅಲ್ಲದೆ ಅವರು ಆಳುವ ಅಕಾಲಿ ದಳದ ಮುಖಂಡರನ್ನು ಸತತವಾಗಿ ಟೀಕಿಸಿಕೊಂಡು ಬಂದವರು, ಮುಖ್ಯಮಂತ್ರಿಗಳ ಬಗ್ಗೆ ಚುನಾವಣಾ ಪ್ರಚಾರದಲ್ಲಿ ಮಾತಾಡುತ್ತಲೇ ಇಲ್ಲವಂತೆ. ಇದೀಗ 'ಅಚ್ಚೇದಿನ'ಗಳ ಮತ್ತೊಂದು ಉದಾಹರಣೆ.

ಧಭೋಲ್ಕರ್, ಪನ್ಸರೆ, ಕಲಬುರ್ಗಿ ಕೊಲೆಗಳು ನಡುವೆ ಸಾಮ್ಯತೆ ಫಿರಂಗಿ ವಿಜ್ಞಾನದ ಪರೀಕ್ಷಣೆಯಿಂದಲೂ ಸಾಬೀತು, ಆದರೂ...

ಫಿರಂಗಿ ವಿಜ್ಞಾನದ ಪರೀಕ್ಷಣೆಯಿಂದ ಡಾ.ನರೇಂದ್ರ ದಭೋಲ್ಕರ್, ಕಾಂ.ಗೋವಿಂದ ಪನ್ಸರೆ ಮತ್ತು ಡಾ.ಕಲಬುರ್ಗಿಯವರ ಕೊಲೆಗಳು ಒಂದಕ್ಕೊಂದು ಸಂಬಂಧಪಟ್ಟವುಗಳು ಎಂಬುದಕ್ಕೆ ಮತ್ತಷ್ಟು ಪುರಾವೆಗಳನ್ನು ನೀಡಿದೆ ಎಂದು ವರದಿಯಾಗಿದೆ. ಕಳೆದ ವರ್ಷ ಕರ್ನಾಟಕದ ಫೊರೆನ್ಸಿಕ್ ಸಾಯನ್ಸ್ ಲೆಬರೊಟರಿ(ಎಫ್‌ಎಸ್‌ಎಲ್) ಈ ಕೊಲೆಗಳಲ್ಲಿ ಬಳಸಿದ ಕಾರ್ಟ್ರಿಜ್‌ಗಳಲ್ಲಿ ಸಂಬಂಧವಿದೆ ಎಂದಿತ್ತು. ಈಗ ಅಹಮದಾಬಾದಿನ ಗುಜರಾತ್ ಡೈರೆಕ್ಟೊರೇಟ್ ಆಫ್ ಫೊರೆನ್ಸಿಕ್ ಸಾಯನ್ಸಸ್(ಡಿಎಫ್‌ಎಸ್) ಸಿಬಿಐಗೆ ನೀಡಿದ ವರದಿ ಕೂಡ ಇವು ಪರಸ್ಪರ ಸಂಬಂಧವಿರುವ ಕೊಲೆಗಳು ಎಂದು ಹೇಳಿರುವದಾಗಿ ಟೈಮ್ಸ್ ನ್ಯೂಸ್ ಸರ್ವಿಸ್(ಟಿಎನ್‌ಎಸ್) ವರದಿ ಮಾಡಿದೆ

ಗೋವಿಂದ ಪನ್ಸರೆಯವರನ್ನು ಕೊಲ್ಲಲು ಎರಡು ಶಸ್ತ್ರಗಳನ್ನು ಬಳಸಲಾಗಿತ್ತು, ಇವುಗಳಲ್ಲಿ ಒಂದರ ತರಹದ್ದನ್ನು ಧಭೋಲ್ಕರ್‌ರವರನ್ನು ಕೊಲ್ಲಲು ಹಾಗೂ ಮತ್ತೊಂದರ ರೀತಿಯದನ್ನು ಕಲಬುರ್ಗಿಯವರನ್ನು ಕೊಲ್ಲಲು ಬಳಸಲಾಗಿದೆ ಎಂದು ಮೂಲಗಳು ಹೇಳಿರುವುದಾಗಿ ಈ ವರದಿ ತಿಳಿಸುತ್ತದೆ.

ಮೂವರನ್ನೂ ಮುಂಜಾನೆಯ ವೇಳೆಯಲ್ಲಿ 7.65 ಕ್ಯಾಲಿಬರ್‌ನ ಕಂಟ್ರಿ ಪಿಸ್ತೂಲುಗಳಿಮದ ಕೊಲೆ ಮಾಡಲಾಗಿದೆ ಎಂಬುದು ತನಿಖೆಗಳಲ್ಲಿ ಈಗಾಗಲೇ ದಾಖಲಾಗಿದೆ.

ಈ ಮೂವರು ವಿಚಾರವಾದಿಗಳ ಕೊಲೆಗಳಲ್ಲಿನ ಸಂಬಂಧ ಸ್ಪಷ್ಟವಾಗಿದ್ದರೂ ಕೊಲೆಗಾರರು ಆರಾಮವಾಗಿ ಹೊರಗೆ ತಿರುಗಾಡುತ್ತಿದ್ದಾರೆಂದರೆ ಅವರಿಗೆ ಪ್ರಸಕ್ತ ಆಡಳಿತದ ಪೋಷಣೆ ಇದೆಯೆಂದೇ ಅರ್ಥ ಎಂದು ವಿಶ್ಲೇಷಕರು ಹೇಳುತ್ತಿದ್ದಾರೆ..

ಮೋದಿಯವರನ್ನು ಗಾಂಧಿಯಾಗಿಸಿದಾತ ಅದಾನಿ ಮನುಷ್ಯ?

ಖಾದಿ–ಗ್ರಾಮೋದ್ಯೋಗ ಆಯೋಗದ ಕ್ಯಾಲೆಂಡರಿನಲ್ಲಿ ಗಾಂಧೀಜಿ ಜಾಗದಲ್ಲಿ ಮೋದೀಜಿ ಕೂರಿಸಿದ ಅದರ ಅಧ್ಯಕ್ಷ ವಿ.ಕೆ.ಸಕ್ಸೆನ ಮೋದಿಯವರ ಘನಿಷ್ಟ ಉದ್ಯಮಿ ಮಿತ್ರ ಅದಾನಿಯ ಉದ್ಯಮಗುಂಪಿನ 'ಮೂಲ ಉತ್ಪನ್ನ' ಎಂದು ಪತ್ರಿಕೆಯೊಂದು ವರದಿಮಾಡಿದೆ.

ಗ್ರಾಮೀಣ, ಗೃಹ ಅಥವ ಸಣ್ಣ ಪ್ರಮಾಣದ ಉದ್ದಿಮೆಯಲ್ಲಿ ಯಾವುದೇ ಅನುಭವವಿಲ್ಲದ ಈ ವ್ಯಕ್ತಿ ಬಹಳ ವರ್ಷಗಳಿಂದ ಅದಾನಿ ಗುಂಪಿನ ವಿವಿಧ ಕಂಪನಿಗಳಲ್ಲಿ ಬಹಳ ವರ್ಷಗಳಿಂದ ದುಡಿದವರು.

ಈ ಮನುಷ್ಯ ಅದಾನಿಗಳ ಮತ್ತು ಜೆಕೆ ಇಂಡಸ್ಟ್ರೀಸ್‌ನ ಧೊಲೆರ ಪ್ರಾಜೆಕ್ಟ್‌ನಲ್ಲಿ ಕೆಲಸ ಮಾಡಿದವರಲ್ಲಿ ಒಬ್ಬರು. ಇದು ಬಹಳ ವರ್ಷಗಳ ಕಾಲ ಸ್ಥಳೀಯ ರೈತರಿಂದ ಭೂಮಿಯನ್ನು ಕಿತ್ತಕೊಳ್ಳುವ ಮತ್ತು ನರ್ಮದಾ ನದಿ ನೀರನ್ನು ಬಲವಂತವಾಗಿ ಪಡೆಯುವ ಪ್ರಕ್ರಿಯೆಯಲ್ಲಿ ವಿಫಲಗೊಂಡಿರುವಂತದ್ದು ಎಂಬುದು ಗಮನಾರ್ಹ.

ಅಲ್ಲದೆ 2002 ರ ಗುಜರಾತ್ ಹಿಂಸಾಚಾರದ ನಂತರ ಶಾಂತಿಸಭೆಯೊಂದರಲ್ಲಿ ಸಾಬರಮತಿ ಆಶ್ರಮದಲ್ಲಿ'ನರ್ಮದಾ ಬಚಾವ್ ಆಮದೋಲನದ ಮುಖಂಡೆ ಮೇಧಾ ಪಾಟ್ಕರ್ ಮೇಲೆ ಹಲ್ಲೆ ನಡೆಸಿದ ಘಟನೆಯಲ್ಲಿ ಪಾಲ್ಗೊಂಡಿರುವ ದಾಖಲೆಯೂ ಈತನಿಗಿದೆಯಂತೆ.

ಪೇಟಿಯಂ ಮುಖ್ಯಸ್ಥನ ಹೊಸ ವರ್ಷದ ಕುಣಿದಾಟದ ಪ್ರದರ್ಶನ ಪ್ರದರ್ಶಿಸಿರುವುದೇನು?

ತನ್ನ ನೋಟುಹರಣ ಪರಾಕ್ರಮದಿಂದಾಗಿ ಶ್ರೀಮಂತರ ನಿದ್ದೆಗೆಟ್ಟಿದೆ, ಬಡವರು ಹಾಯಾಗಿ ನಿದ್ರಿಸುತ್ತಿದ್ದಾರೆ ಎಂದು ನಮ್ಮ ಮಾನ್ಯ 'ಅಚ್ಚೇ ದಿನ' ಪ್ರವಾದಿ ಹೇಳಿರುವುದು ಹಳೆಯ ಸುದ್ದಿ. ಬಡವರು ಸಣ್ಣಪುಟ್ಟ ನಗದಿಗಾಗಿ ಮೈಲುದ್ದ ಸಾಲುಗಳಲ್ಲಿ ನಿಂತಿದ್ದನ್ನು, ಶ್ರೀಮಂತರು ತನ್ನನ್ನು ಹೊಗಳುತ್ತಿರುವುದನ್ನು ಕಂಡ ನಂತರ ಡಿಜಿಟಲ್ ವ್ಯವಹಾರದ ಮಾತಾಡುತ್ತಿರುವುದೂ ಈಗ ಹೊಸ ಸಂಗತಿಯೇನಲ್ಲ. ಆದರೆ ಈ ಹೊಸದೆನಿಸುವ ರಾಗದಿಂದ ಪರಮ ಲಾಭ ಪಡೆಯುತ್ತಿರುವವರು ಮತ್ತರಾಗಿ ಅಕ್ಷರಶಃ ಕುಣಿದಾಡಿದ ವೀಡಿಯೋ ಹಬ್ಬಿರುವುದು ಅವರಿಗೂ ಮುಜುಗರ ಉಂಟು ಮಾಡಿದೆಯೋ ಗೊತ್ತಾಗಿಲ್ಲ.

ಡಿಜಿಟಲ್ ವ್ಯವಹಾರದ ಕಂಪನಿ ಪೇಟಿಎಂ ನೋಟುರದ್ದತಿಯ ಪ್ರಕಟಣೆಯ ಮರುದಿನವೇ ಮುಖಪುಟದಲ್ಲಿ ಪೂರ್ಣಪುಟದ ಜಾಹೀರಾತುಗಳನ್ನು ನೀಡಿ ಅದನ್ನು ಸ್ವಾಗತಿಸಿದ್ದು ನಮ್ಮ ಓದುಗರಿಗೆ ನೆನಪಿರಬಹುದು. ಈ ಕಂಪನಿಯ ಮುಖ್ಯಸ್ಥ ವಿಜಯ ಶೇಖರ ಶರ್ಮಾ ಹೊಸವರ್ಷದ ಪಾರ್ಟಿಯೊಂದರಲ್ಲಿ 'ಪೇಟಿಎಂ, ಪೇಟಿಎಂ, ಪೇಟಿ–ಎಂ' ಎಂದು ಕುಣಿದಾಡಿರುವ ವೀಡಿಯೋ ನೋಟು ರದ್ದತಿಯ ನಿಜ ಉದ್ದೇಶವನ್ನು ಬಯಲು ಮಾಡಿದೆಯೇ? ಕಾದು ನೋಡಬೇಕು.

'ನೋಟು ರದ್ದತಿಯ ನಂತರ ಇಂತಹ ಕಂಪನಿಗಳ ಲಾಭ ಮೂರು ಪಟ್ಟಾಗಿದೆ ಎಂದು ವರದಿಗಳು ಹೇಳುತ್ತಿವೆ.


ನೋಟುರದ್ದತಿಯಲ್ಲಿ ಯಾವುದೇ ಖೋಟಾನೋಟು ಸಿಕ್ಕಿಲ್ಲ!

ನೋಟು ರದ್ದತಿಯ ಪ್ರಕಟಣೆ ಮಾಡಿದ ನವಂಬರ್ 8ರಿಂದ ಪ್ರಧಾನಿಗಳು ಕೇಳಿದ ಗಡುವು ಮುಗಿದ ಡಿಸೆಂಬರ್ 30ರ ನಡುವೆ ಯಾವುದೇ ಕಳ್ಳನೋಟನ್ನು ವಶಪಡಿಸಿಕೊಂಡಿಲ್ಲ ಎಂದು ಸಂಸತ್ತಿನ ಸಾರ್ವಜನಿಕ ಲೆಕ್ಕಪತ್ರ ಸಮಿತಿ(ಎಇಎಸಿ)ಯ ನಿರ್ದಿಷ್ಟ ಪ್ರಶ್ನೆಗೆ ಉತ್ತರಿಸುತ್ತ ಹಣಕಾಸು ಮಂತ್ರಾಲಯ ಹೇಳಿದೆ.

474.37 ಕೋಟಿ ರೂ. ಗಳಷ್ಟು ಹಳೆಯ ಮತ್ತು ಹೊಸ ನೋಟುಗಳನ್ನು ಆದಾಯ ತೆರಿಗೆ ಇಲಾಖೆ ವಶಪಡಿಸಕೊಂಡಿದ್ದರೂ ಸಂಬಂಧಪಟ್ಟ ವ್ಯಕ್ತಿಗಳು ಭಯೋತ್ಪಾದಕರಿಗೆ ಸಂಬಂಧಪಟ್ಟವರೋ ಎಂಬ ಮಾಹಿತಿ ತಿಳಿದಿಲ್ಲ ಎಂದೂ ಅದು ಹೇಳಿರುವುದಾಗಿ ವರದಿಯಾಗಿದೆ.

ನೋಟು ರದ್ದತಿಯಿಂದ ಕಾಶ್ಮೀರ ಕಣಿವೆಯಲ್ಲಿ ಏನೂ ಪ್ರಭಾವ ಬೀರಿಲ್ಲ ಎಂದು ಕಳೆದ ವಾರ ಅಚ್ಚೇದಿನಗಳ ಸಾಥ್ ನೀಡಲು ಒಪ್ಪಿಕೊಂಡಿರುವ ಜಮ್ಮು–ಕಾಶ್ಮೀರ್ ಮುಖ್ಯಮಂತ್ರಿಗಳು ಹೇಳಿದ್ದರು. ಈಗ ನೋಟುರದ್ದತಿಯ ಇನ್ನೊಂದು ಘೋಷಿತ ಉದ್ದೇಶವಾದ ಖೋಟಾ ನೋಟುಗಳ ತಡೆ ಕೂಡ ಈಡೇರಿಲ್ಲವೇ ಎಂಬ ಪ್ರಶ್ನೆ ಏಳುವುದು ಸಹಜ.

ವಾಸ್ತವವಾಗಿ ನೋಟುರದ್ದತಿ ಕಪ್ಪುಹಣವನ್ನು ಬಿಳಿವಾಡುವುದರೊಮದಿಗೆ, ಖೋಟಾನೋಟನ್ನು ಸಾಚಾಗೊಳಿಸಿದೆ ಎಂಬ ವಾದವನ್ನು ಇದು ಪುಷ್ಟಿಗೊಳಿಸುತ್ತಿದೆಯೇ?



ನೋಟುಹರಣ : ಇಲಿ ಹಿಡಿಯಲು ಆರ್ಥಿಕವನ್ನು ಹಾಳುಗೆಡವಿದ ಪ್ರಕರಣ?



ನೋಟುರದ್ದತಿ ಪ್ರಕರಣ: ರಿಸರ್ವ್ ಬ್ಯಾಂಕಿನ ಪತನದ ಸೂಚನೆ



ಕೆ.ಎಂ.ನಾಗರಾಜ್

ತನ್ನ ಸ್ವಭಾವಕ್ಕೆ ತಕ್ಕಂತೆ ಮೋದಿ ಸರ್ಕಾರವು ಪ್ರಜಾಪ್ರಭುತ್ವದ ಸಂಸ್ಥೆಗಳನ್ನು ನಾಶಮಾಡಲು ಹೊರಟಿದೆ. ಭಾರತೀಯ ರಿಸರ್ವ್ ಬ್ಯಾಂಕ್ ಅದಕ್ಕೆ ಇತ್ತೀಚಿನ ಸೇರ್ಪಡೆ. ಆದರೆ, ತಮ್ಮ ಸಂಸ್ಥೆಯನ್ನೇ ಹಾಳುಗೆಡವಲು ಹೊರಟವರ ವಿರುದ್ಧ ಅದರ ನೇತೃತ್ವ ವಹಿಸಿರುವವರು ಕಿಂಚಿತ್ತಾದರೂ ಪ್ರತಿರೋಧ ತೋರಿಸದಿರುವುದು ಮಾತ್ರ ಒಂದು ದುರಂತ.

ಇಲ್ಲಿ ಅಡಗಿರುವುದು ದೇಶಕೇಂದ್ರೀಯ ಬ್ಯಾಂಕಿನ ಸ್ವಾಯತ್ತೆಯ ಪ್ರಶ್ನೆಯಲ್ಲ, ಬದಲಿಗೆ ಅದು ತನ್ನದೇ ಆದ ಅಭಿಪ್ರಾಯ ಹೊಂದಿರಬೇಕು ಎಂಬುದು. ನೋಟು ರದ್ದತಿ ಪ್ರಕರಣದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಯಾವುದೇ ಅಭಿಪ್ರಾಯ ಹೊಂದಿರಲಿಲ್ಲ ಎಂಬುದು ದರುದೃಷ್ಟದ ಸಂಗತಿ ಎನ್ನುತ್ತಾರೆ ಪ್ರೊ.ಪ್ರಭಾತ್ ಪಟ್ನಾಯಕ್.

ಅದಕ್ಕೆ ನಾಲ್ಕು ನಿದರ್ಶನಗಳನ್ನು ಕೊಟ್ಟಿರುವ ಪೀಪಲ್ಸ್ ಡೆಮಾಕ್ರಸಿ' ಪತ್ರಿಕೆ ಪ್ರಕಟಿಸಿರುವ ಅವರ The Reserve Bank's Fall? ಲೇಖನದ ಭಾವಾನುವಾದ.

1000 ಮತ್ತು 500 ರೂಪಾಯಿ ನೋಟುಗಳನ್ನು ರದ್ದುಮಾಡಿದ ಮೂರ್ಖತನದ ಮತ್ತು ದಬ್ಬಾಳಿಕೆಯ ಕ್ರಮವನ್ನು ಭಾರತೀಯ ರಿಸರ್ವ್ ಬ್ಯಾಂಕ್ ಈ ದೇಶದ ದುಡಿಯುವ ಜನತೆಯ ಮೇಲೆ ಹೇರಿತ್ತೇ ಎಂಬ ಅಂಶ ಇಲ್ಲಿ ಮುಖ್ಯವಲ್ಲ. ಏಕೆಂದರೆ, ಈ ವಿಷಯದ ಬಗ್ಗೆ ಅದು ಏನನ್ನೂ ಹೇಳುವಂತಿರಲಿಲ್ಲ. ತನ್ನ ಸ್ವಂತ ವಿಚಾರಗಳನ್ನು, ತಪ್ಪೊ ಸರಿಯೊ, ಸರಕಾರ ಅದನ್ನು ಮುಚ್ಚುಮರೆ ಇಲ್ಲದೆ ರಿಸರ್ವ್ ಬ್ಯಾಂಕ್ ತಿಳಿಸಿದ್ದಿದ್ದರೆ, ಅದು ಈ ಪಾಟಿ ನಗೆಪಾಟಲಿಗೆ ಗುರಿಯಾಗುತ್ತಿರಲಿಲ್ಲ. ರಿಸರ್ವ್ ಬ್ಯಾಂಕ್ ಒಂದು ವೇಳೆ ನೋಟು ರದ್ದತಿಗೆ ವಿರೋಧವಾಗಿದ್ದರೂ, ಚುನಾಯಿತ ಸರ್ಕಾರದ ನಿರ್ಧಾರಕ್ಕೆ ಶರಣಾಗಿದ್ದಿದ್ದರೆ ಅದು ಅವಹೇಳನಕ್ಕೆ ಗುರಿಯಾಗುತ್ತಿರಲಿಲ್ಲ. ನೋಟು ರದ್ದತಿಯ ಬಗ್ಗೆ ರಿಸರ್ವ್ ಬ್ಯಾಂಕ್ ತನ್ನ ಅಭಿಪ್ರಾಯಗಳನ್ನು ಜನತೆಯ ಬಳಿ ಮುಕ್ತವಾಗಿ ಹಂಚಿಕೊಳ್ಳುವುದು ಕಷ್ಟದ ಸಂಗತಿ. ಆದರೂ, ಅದು ಒಂದು ಸ್ಪಷ್ಟ ನಿಲುವು ತಳೆದಿದ್ದರೆ, ಆ ನಿಲುವು ವದಂತಿಗಳ ಮೂಲಕವಾದರೂ ಹರಡುತ್ತಿತ್ತು. ಆ ನಿಲುವು ಒಪ್ಪಿತವಲ್ಲದಿದ್ದರೂ, ರಿಸರ್ವ್ ಬ್ಯಾಂಕ್ ಜನತೆಯ ಪ್ರಶಂಸೆಗೆ ಪಾತ್ರವಾಗುತ್ತಿತ್ತು. ರಿಸರ್ವ್ ಬ್ಯಾಂಕ್ ನಗೆಪಾಟಲಿಗೀಡಾಗಿರುವುದು ಅದು ತಳೆದಿರುವ ನಿಲುವಿನಿಂದಾಗಿ ಅಲ್ಲ. ಅದು ನಿಲುವು ತಳೆಯಲೇ ಇಲ್ಲ. ಸರ್ಕಾರದ ಬಾಲಬಡುಕನಂತೆ ವರ್ತಿಸಿರುವುದರಿಂದ ಅದು ನಗೆಪಾಟಲಿಗೀಡಾಗಿದೆ.

ಕೇಂದ್ರ ಬ್ಯಾಂಕ್‌ಗಳ ಸ್ವಾಯತ್ತತೆಗೆ ಸಂಬಂಧಿಸಿದಂತೆ ಜನಾಭಿಪ್ರಾಯವು ವಿಶ್ವದ ಎಲ್ಲೆಡೆಯಲ್ಲೂ ಸ್ವಾಯತ್ತತೆ-ಯ ವಿರುದ್ಧವೇ ಇದೆ. ಏಕೆಂದರೆ, ಒಂದು ದೇಶದ ಕೇಂದ್ರ ಬ್ಯಾಂಕಿನ ಗವರ್ನರ್ ಆಗಿ ನೇಮಕಗೊಂಡ ಒಬ್ಬ ವ್ಯಕ್ತಿಯು ಆಳುವ ಸರಕಾರದಿಂದ ಸ್ವಾಯತ್ತೆಯ ಹೆಸರಲ್ಲಿ ಅಂತರಾಷ್ಟ್ರೀಯ ಹಣಕಾಸು ಬಂಡವಾಳದ ಕೈಗೊಂಬೆಯಾದರೆ, ಆ ವ್ಯಕ್ತಿಯು ಚುನಾಯಿತ ಸರ್ಕಾರವು ಅನುಸರಿಸ ಬಯಸುವ ಆರ್ಥಿಕ ನೀತಿಗಳನ್ನು ಧಿಕ್ಕರಿಸಿ, ಹಣಕಾಸು ಬಂಡವಾಳದ ತಾಳಕ್ಕೆ ಕುಣಿಯುವ ಸಾಧ್ಯತೆಗಳಿವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ, ಕೇಂದ್ರ ಬ್ಯಾಂಕಿಗೆ ನೇಮಕಗೊಂಡ ಗವರ್ನರ್ ಹೊಂದಿರುವ ಅಧಿಕಾರಕ್ಕಿಂತಲೂ ಜನರಿಂದ ಆಯ್ಕೆಯಾದ ಸರ್ಕಾರದ ಅಧಿಕಾರವೇ ಅಂತಿಮ. ಹಾಗಾಗಿ, ಕೇಂದ್ರ ಬ್ಯಾಂಕಿನ ಸ್ವಾಯತ್ತತೆ ಎಂಬುದು ಮೂಲಭೂತವಾಗಿ ಪ್ರಜಾಪ್ರಭುತ್ವ ವಿರೋಧಿಯಾಗಿದೆ. ಆದರೆ, ಕೇಂದ್ರ ಬ್ಯಾಂಕಿನ ಸ್ವಾ-ಯತ್ತತೆಯ ಸುತ್ತ ಮುತ್ತ ನಡೆಯುವ ಚರ್ಚೆಯಲ್ಲಿ ಅಂತರ್ಗತವಾಗಿರುವ ಅಂಶವೆಂದರೆ, ಕೇಂದ್ರ ಬ್ಯಾಂಕ್ ತನ್ನದೇ ಆದ ಅಭಿಪ್ರಾಯ ಹೊಂದಿರಬೇಕು ಎಂಬುದು. ನೋಟು ರದ್ದತಿ ಪ್ರಕರಣದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಯಾವುದೇ ಅಭಿಪ್ರಾಯ ಹೊಂದಿರಲಿಲ್ಲ ಎಂಬುದು ದುರದೃಷ್ಟದ ಸಂಗತಿ.

ಸ್ವಾಯತ್ತತೆ ಮತ್ತು ಸ್ವತಂತ್ರ ಅಭಿಪ್ರಾಯ


ಕೇಂದ್ರ ಬ್ಯಾಂಕಿನ ಸ್ವಾಯತ್ತತೆಯನ್ನು ವಿರೋಧಿಸುವುದು ಮತ್ತು ಅದರ ಸ್ವತಂತ್ರ ಅಭಿಪ್ರಾಯವನ್ನು ವಿರೋಧಿಸುವುದು, ಎರಡೂ ಒಂದೇ ಅಲ್ಲ. ಏಕೆಂದರೆ, ಪ್ರಜಾಪ್ರಭುತ್ವದಲ್ಲಿ ಜನರಿಂದ ನೇರವಾಗಿ ಆಯ್ಕೆಯಾದ ಮತ್ತು ಉನ್ನತಾಧಿಕಾರವುಳ್ಳ ಶಾಸಕಾಂಗವು ಕೇಂದ್ರ ಬ್ಯಾಂಕ್ ಹಾಗೂ ಕಾರ್ಯಾಂಗದ ಅಭಿಪ್ರಾಯಗಳನ್ನು ಅವಲೋಕನೆಗೆ ಒಳಪಡಿಸುತ್ತದೆ. ಕೇಂದ್ರ ಬ್ಯಾಂಕ್ ಹಾಗೂ ಕಾರ್ಯಾಂಗಗಳು ಸ್ಪಷ್ಟವಾದ ಮತ್ತು ಸ್ವತಂತ್ರವಾದ ಅಭಿಪ್ರಾಯಗಳನ್ನು ಹೊಂದಿಲ್ಲದಿದ್ದರೆ, ಒಂದು ನಿರ್ದಿಷ್ಟ ನೀತಿಯನ್ನು ಜಾರಿಮಾಡುವ ಸಂದರ್ಭದಲ್ಲಿ ತೀವ್ರ ಸ್ವರೂಪದ ಲೋಪ ದೋಷಗಳಿಗೆ ಕಾರಣವಾದ ಒಂದು ಅಂಗವು ಆ ಹೊಣೆಗಾರಿಕೆಯನ್ನು ಇನ್ನೊಂದು ಅಂಗದ ಮೇಲೆ ಹೊರಿಸಿ ತಾನು ನುಣುಚಿಕೊಳ್ಳುತ್ತದೆ. ಹಾಗಾಗಿ, ಹಣಕಾಸು ಬಂಡವಾಳವು ಬಯಸುವ ರೀತಿಯ ಸ್ವಾಯತ್ತತೆಯಲ್ಲದಿದ್ದರೂ, ಪ್ರಜಾಜಾತಂತ್ರ ವ್ಯವಸ್ಥೆಯಲ್ಲಿ, ಸ್ಪಷ್ಟವಾದ ಮತ್ತು ಸ್ವತಂತ್ರವಾಗಿ ನಿರೂಪಿಸಿಕೊಂಡ ಅಭಿಪ್ರಾಯಗಳನ್ನು ವ್ಯೆಗೂಡಿಸಿಕೊಂಡಿರಬೇಕೆಂಬ ಪೂರ್ವಾಪೇಕ್ಷೆ ಕೇಂದ್ರ ಬ್ಯಾಂಕಿನ ಮೇಲಿರುತ್ತದೆ. ಆ ನಿರೀಕ್ಷೆಗೆ ತಕ್ಕಂತೆ ಕೇಂದ್ರ ಬ್ಯಾಂಕಿಗೆ ಸ್ವಾಯತ್ತತೆಯಿಲ್ಲದಿದ್ದರೂ ತನ್ನ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಮತ್ತು ಸ್ವತಂತ್ರವಾಗಿ ಅದು ನಿರೂಪಿಸಿಕೊಂಡಿರಬೇಕಾಗುತ್ತದೆ.

ಆರ್‌ಬಿಐ ಪರಿಸ್ಥಿತಿ ಜುಗುಪ್ಸೆ ಬರಿಸುತ್ತದೆ

ನೋಟು ರದ್ದತಿಯಂತಹ ಕಠಿಣ ಸಮಸ್ಯೆಯ ಬಗ್ಗೆ ಭಾರತೀಯ ರಿಸರ್ವ್ ಬ್ಯಾಂಕ್ ಸ್ಪಷ್ಟ ಮತ್ತು ಸ್ವತಂತ್ರ ಅಭಿಪ್ರಾಯಗಳನ್ನು ಹೊಂದಿರಲಿಲ್ಲ. ಈ ಬಗ್ಗೆ ತನಗೆ ಎಲ್ಲವೂ ಗೊತ್ತಿತ್ತೆಂದು ಅದು ಸೋಗು ಹಾಕಿರುವುದು ಹಾಸ್ಯಾಸ್ಪದವಾಗಿದೆ. ಕೇವಲ ನಾಲ್ಕು ನಿದರ್ಶನಗಳ ಮೂಲಕ ರಿಸರ್ವ್ ಬ್ಯಾಂಕ್ ಜುಗುಪ್ಸೆ ಬರಿಸುವ ಮಟ್ಟ ತಲುಪಿರುವುದನ್ನು ತಿಳಿಯಬಹುದು. ರಿಸರ್ವ್ ಬ್ಯಾಂಕಿನ ಉದ್ಯೋಗಿಗಳ ಸಂಘಟನೆಗಳು ಬ್ಯಾಂಕಿನ ಆಡಳಿತ ವರ್ಗವು ತನ್ನ ಕಾನೂನುಬದ್ಧ ಕರ್ತವ್ಯಗಳನ್ನು ನಿರ್ವಹಿಸಲು ಸೆಟೆದು ನಿಲ್ಲಬೇಕೆಂದು ಆಗ್ರಹಿಸಿರುವುದು ರಿಸರ್ವ್ ಬ್ಯಾಂಕ್ ಕಕ್ಕಾಬಿಕ್ಕಿಯಾಗಿದೆ ಎಂಬುದನ್ನು ತೋರಿಸುತ್ತದೆ.

ಮೊದಲನೆಯ ನಿದರ್ಶನ, ಬ್ಯಾಂಕಿನ ಕೇಂದ್ರ ಮಂಡಳಿ ಸಭೆಗೆ ಸಂಬಂಧಿಸಿದ್ದು. ನೋಟು ರದ್ದತಿಯ ತೀರ್ಮಾನವನ್ನು ತೆಗೆದುಕೊಂಡ ರಿಸರ್ವ್ ಬ್ಯಾಂಕಿನ ಕೇಂದ್ರ ನಿರ್ದೇಶಕ ಮಂಡಳಿಯ ಸಭೆಯು, ಮೋದಿಯವರು ಟಿ.ವಿ ಮೂಲಕ ಘೋಷಣೆ ಮಾಡಲು ನಿಗದಿ ಮಾಡಿದ ಸಮಯಕ್ಕಿಂತ ಕೇವಲ ಮೂರು ಗಂಟೆಗಳ ಮೊದಲು ಸೇರುತ್ತದೆ. ಅದೊಂದು ಶಾಸ್ತ್ರವಷ್ಟೇ ಆಗಿತ್ತು. 21 ಸದಸ್ಯರ ರಿಸರ್ವ್ ಬ್ಯಾಂಕಿನ ಕೇಂದ್ರ ನಿರ್ದೇಶಕ ಮಂಡಳಿಯಲ್ಲಿ ಈಗ ಕೇವಲ 10 ಮಂದಿ ಸದಸ್ಯರಿದ್ದಾರೆ. ಕೇಂದ್ರ ಸರ್ಕಾರವು ಉಳಿದ 11 ಸ್ಥಾನಗಳನ್ನು ಖಾಲಿ ಇಟ್ಟಿದೆ. ಹಾಗಾಗಿ, ಅತ್ಯುನ್ನತ ಮಟ್ಟದ ತೀರ್ಮಾನಗಳನ್ನು ತೆಗೆದುಕೊಳ್ಳುವ ರಿಸರ್ವ್ ಬ್ಯಾಂಕಿನ ಕೇಂದ್ರ ನಿರ್ದೇಶಕ ಮಂಡಳಿಯು ರಬ್ಬರ್ ಸ್ಟ್ಯಾಂಪ್ ಆಗಿದೆ. ಸರ್ಕಾರ ಆ ರೀತಿ ಭಾವಿಸಿರುವುದರಿಂದಲೇ ಮತ್ತು ತೀರ್ಮಾನವು ಹೀಗೇ ಇರುತ್ತದೆ ಎಂಬ ದೃಢ ವಿಶ್ವಾಸದಲ್ಲೇ ಮೋದಿಯವರು ನೋಟು ರದ್ದತಿಯ ತೀರ್ಮಾನದ ಘೋಷಣೆಗೆ ಮುಹೂರ್ತ ನಿಗದಿಪಡಿಸಿದ್ದರು. ಬ್ಯಾಂಕಿನ ಕೇಂದ್ರ ನಿರ್ದೇಶಕ ಮಂಡಳಿಯಲ್ಲಿ 11 ಸ್ಥಾನಗಳು ಖಾಲಿ ಇರುವ ಪರಿಸ್ಥಿತಿಗೆ ರಿಸರ್ವ್ ಬ್ಯಾಂಕಿನ ಉನ್ನತಾಧಿಕಾರಿಗಳು ಹೊಣೆಗಾರರಲ್ಲದಿದ್ದರೂ ಪೂರ್ಣ ಪ್ರಮಾಣದ ನಿರ್ದೇಶಕ ಮಂಡಳಿಯ ಅಗತ್ಯತೆಯನ್ನು ಅವರು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಬೇಗಿತ್ತು.

ಎರಡನೆಯ ನಿದರ್ಶನ, ಪಾರ್ಲಿಮೆಂಟರಿ ಸಮಿತಿಗೆ ರಿಸರ್ವ್ ಬ್ಯಾಂಕ್ ಕೊಟ್ಟಿರುವ ಉತ್ತರಗಳಿಗೆ ಸಂಬಂಧಿಸಿದೆ. ನೋಟು ರದ್ದತಿಯ ತೀರ್ಮಾನವನ್ನು ಪಾರ್ಲಿಮೆಂಟಿನ ಸಾರ್ವಜನಿಕ ಲೆಕ್ಕ ಸಮಿತಿಯು ಪರಿಶೀಲಿಸುತ್ತಿದೆ. ಸರ್ಕಾರ ಮತ್ತು ರಿಸರ್ವ್ ಬ್ಯಾಂಕ್ ನಡುವೆ ನೋಟು ರದ್ದತಿಯ ಬಗ್ಗೆ ಪರಸ್ಪರ ಸಮಾಲೋಚನೆ ನಡೆದಿತ್ತೆಂದೂ ಮತ್ತು ಕ್ರಮ ಕೈಗೊಳ್ಳುವ ಬಗ್ಗೆ ಒಪ್ಪಂದವಾಗಿತ್ತೆಂದೂ ಸಮಿತಿಯ ಮುಂದೆ ರಿಸರ್ವ್ ಬ್ಯಾಂಕ್ ಹೇಳಿದೆ. ಆದರೆ, ನೋಟು ರದ್ದತಿಯ ಮುಖ್ಯ ಉದ್ದೇಶ ಏನೆಂದು ರಿಸರ್ವ್ ಬ್ಯಾಂಕ್ ಹೇಳುತ್ತಿರುವುದಕ್ಕೂ ಮತ್ತು ಸರ್ಕಾರ ಹೇಳುತ್ತಿರುವುದಕ್ಕೂ ವ್ಯತ್ಯಾಸವಿದೆ. ಖೋಟಾ ನೋಟುಗಳ ನಿರ್ಮೂಲನೆಯೇ ಮುಖ್ಯ ಉದ್ದೇಶವೆಂದು ರಿಸರ್ವ್ ಬ್ಯಾಂಕ್ ಹೇಳುತ್ತದೆ. ಆದ-ರೆ, ಕಪ್ಪು ಹಣದ ಮೇಲೆ ದಾಳಿ ಮಾಡುವುದೇ ಮುಖ್ಯ ಉದ್ದೇಶವೆಂದು ಸರ್ಕಾರ ಹೇಳುತ್ತಿದೆ. ಅದೇನಿದ್ದರೂ, ಒಂದು ಪ್ರಶ್ನೆ ಏಳುತ್ತದೆ: ಚಲಾವಣೆಯಲ್ಲಿರುವ ನೋಟುಗಳಲ್ಲಿ ಖೋಟಾ ನೋಟುಗಳ ಸಂಖ್ಯೆ ಅತ್ಯಲ್ಪವಿರುವಾಗ – ಈ ಸಮಸ್ಯೆಯ ಬಗ್ಗೆ ಅಧ್ಯಯನ ನಡೆಸಿರುವ ಭಾರತೀಯ ಸಂಖ್ಯಾಶಾಸ್ತ್ರ ಸಂಸ್ಥೆಯು ಚಲಾವಣೆಯಲ್ಲಿರುವ ಒಟ್ಟು ಕರೆನ್ಸಿಯ ಶೇ.0.022ರಷ್ಟು ಮೌಲ್ಯದ ಖೋಟಾ ನೋಟುಗಳು(ಅಥವಾ ಸುಮಾರು 400 ಕೋಟಿ ರೂ.ಮೌಲ್ಯ) ಇರಬಹುದೆಂದು ತಿಳಿಸಿದೆ ಮತ್ತು ಈ ಅಂಕಿ ಅಂಶಗಳನ್ನು ರಿಸರ್ವ್ ಬ್ಯಾಂಕ್ ಅಲ್ಲಗಳೆದಿಲ್ಲ. ಹೀಗಿರುವಾಗ ಚಲಾವಣೆಯಲ್ಲಿರುವ ಒಟ್ಟು ಕರೆನ್ಸಿಯ ಶೇ.86ರಷ್ಟು ಮೌಲ್ಯದ ನೋಟುಗಳನ್ನು ರದ್ದುಮಾಡುವಂತಹ ಉಗ್ರ ಕ್ರಮ ಕೈಗೊಳ್ಳುವ ಅವಶ್ಯಕತೆಯಾದರೂ ಎಲ್ಲಿತ್ತು? ಅಷ್ಟಕ್ಕೂ, ಖೋಟಾ ನೋಟುಗಳ ನಿರ್ಮೂಲನೆಯೇ ಮುಖ್ಯ ಉದ್ದೇಶವಾಗಿದ್ದರೆ ಘೋಷಣೆ ಮಾಡಿದ ಕೇವಲ ನಾಲ್ಕು ಗಂಟೆಗಳ ಬಳಿಕ ನೋಟು ರದ್ದತಿ ಜಾರಿಮಾಡಿ ಇಡೀ ಜನಸ್ತೋಮವನ್ನು ಹೇಳತೀರದ ಕಷ್ಟ ಕಾರ್ಪಣ್ಯಗಳಿಗೆ ಈಡುಮಾಡುವ ಅಗತ್ಯವಾದರೂ ಎಲ್ಲಿತ್ತು? ಖೋಟಾ ನೋಟುಗಳ ನಿರ್ಮೂಲನೆಯೇ ಗುರಿಯಾಗಿದ್ದ-ರೆ, ರದ್ದಾದ ನೋಟುಗಳಷ್ಟೇ ಮೌಲ್ಯದ ಹೊಸ ನೋಟುಗಳನ್ನು ಚಲಾವಣೆಗೆ ಬಿಡುವುದಿಲ್ಲವೆಂದು ಸರ್ಕಾರ ಪದೇ ಪದೇ ಹೇಳುತ್ತಿರುವುದಾದರೂ ಏಕೆ? ಮತ್ತು ಈ ಬಗ್ಗೆ ರಿಸರ್ವ್ ಬ್ಯಾಂಕ್ ತನ್ನ ಅಸಮ್ಮತಿ ವ್ಯಕ್ತಪಡಿಸದಿರಲು ಕಾರಣವೇನು? ನೋಟುಗಳ ಸರಬರಾಜಿನಲ್ಲಿ ಕೊರತೆ ಉಂಟಾದರೆ ಅದು ಜನತೆಯನ್ನು ನಗದು ರಹಿತ ವ್ಯವಹಾರಗಳತ್ತ ತಳ್ಳುತ್ತದೆ ಎಂಬುದು ಸರ್ಕಾರದ ವಾದ. ರಿಸರ್ವ್ ಬ್ಯಾಂಕಿನ ಕಳಕಳಿ ಖೋಟಾ ನೋಟುಗಳ ನಿರ್ಮೂಲನೆಯೇ ಆಗಿದ್ದರೆ, ಅದು ನೋಟುಗಳ ಕೊರತೆಗೆ ಅಥವಾ ನಗದು ರಹಿತ ವ್ಯವಹಾರಗಳಿಗೆ ಮೌನವಾಗಿ ಒಪ್ಪಿಗೆ ಕೊಟ್ಟಿದೆಯೇ? ಒಪ್ಪಿಗೆ ಕೊಟ್ಟಿದ್ದರೆ, ಯಾವ ಪುರುಷಾರ್ಥಕ್ಕಾಗಿ? ಹಾಗಾಗಿ, ನೋಟು ರದ್ದತಿಯ ಬಗ್ಗೆ ರಿಸರ್ವ್ ಬ್ಯಾಂಕ್ ಹೊರಡಿಸಿರುವ ಅಧಿಕೃತ ಪ್ರಕಟಣೆಗಳಿಗೆ ವಿಶ್ವಾಸಾರ್ಹತೆ ಉಳಿದಿಲ್ಲ.



ವ್ಯಂಗ್ಯಚಿತ್ರ ಕೃಪೆ: ಮಂಜುಲ್, ಡಿಎನ್‌ಎ

ಅಸತ್ಯಗಳಿಗೆ ಮೊರೆ

ಮೂರನೆಯ ನಿದರ್ಶನ ರಿಸರ್ವ್ ಬ್ಯಾಂಕಿನ ಡೆಪ್ಯುಟಿ ಗವರ್ನರ್ ಆರ್. ಗಾಂಧಿಯವರ ಹೇಳಿಕೆಗೆ ಸಂಬಂಧಿಸಿದೆ. ಟಿ.ವಿ. ಸಂದರ್ಶನದಲ್ಲಿ ಆರ್. ಗಾಂಧಿಯವರು, ನವೆಂಬರ್ 10ರಿಂದ ಡಿಸೆಂಬರ್ 5ರವರೆಗಿನ ಅವಧಿಯಲ್ಲಿ, 100, 50, 20 ಮತ್ತು 10 ರೂಪಾಯಿಗಳ 19.1 ಶತಕೋಟಿ ನೋಟುಗಳನ್ನು ರಿಸರ್ವ್ ಬ್ಯಾಂಕ್ ಚಲಾವಣೆಗೆ ಬಿಟ್ಟಿತ್ತು ಮತ್ತು ಅದು ಹಿಂದಿನ ಮೂರು ವರ್ಷಗಳಲ್ಲಿ (ಅಂ-ದರೆ, 2013–14, 2014–15 ಮತ್ತು 2015–16 ವರ್ಷಗಳಲ್ಲಿ) ಚಲಾವಣೆಗೆ ಬಿಟ್ಟ ಒಟ್ಟು ನೋಟುಗಳ ಸಂಖ್ಯೆಗಿಂತಲೂ ಅಧಿಕವಾಗಿತ್ತು ಎಂದು ಹೇಳಿದ್ದರು. ಅವರ ಈ ಹೇಳಿಕೆ ಸತ್ಯಕ್ಕೆ ದೂರವಾಗಿತ್ತು. ಏಕೆಂದರೆ, ಈ ಮೂರು ವರ್ಷಗಳಲ್ಲಿ ರಿಸರ್ವ್ ಬ್ಯಾಂಕ್ 50.2 ಶತಕೋಟಿ ನೋಟುಗಳನ್ನು ಚಲಾವಣೆಗೆ ಬಿಟ್ಟಿತ್ತು. ರಿಸರ್ವ್ ಬ್ಯಾಂಕ್ ವೆಬ್ ಸೈಟಿನಲ್ಲಿ ಪ್ರಕಟವಾಗಿದ್ದ ಗಾಂಧಿಯವರ ಈ ಹೇಳಿಕೆಯನ್ನು ನಂತರ ಪರಿಷ್ಕೃತ ಪ್ರಕಟಣೆಯಲ್ಲಿ ಕೈಬಿಡಲಾಗಿದೆ. ನೋಟು ರದ್ದತಿಯಿಂದ ಜನರಿಗೆ ಉಂಟಾಗಿರುವ ತೊಂದರೆಯ ಬಗ್ಗೆ ರಿಸರ್ವ್ ಬ್ಯಾಂಕ್ ಕಾಳಜಿ ಹೊಂದಿದೆ ಎಂಬುದನ್ನು ಬಿಂಬಿಸಲು ಡೆಪ್ಯುಟಿ ಗವರ್ನರ್ ಆರ್. ಗಾಂಧಿ ಅಸತ್ಯದ ಮೊರೆ ಹೋಗಿದ್ದರು. ವಾಸ್ತವಾಂಶಗಳ ಬಗ್ಗೆಯೂ ರಿಸರ್ವ್ ಬ್ಯಾಂಕಿನ ಉನ್ನತಾಧಿಕಾರಿಗಳು ಸುಳ್ಳು ಹೇಳುತ್ತಾರೆಂದರೆ ಅದು ರಿಸರ್ವ್ ಬ್ಯಾಂಕಿನ ಪತನವನ್ನು ಸೂಚಿಸುತ್ತದೆ.

ನಾಲ್ಕನೆಯ ನಿದರ್ಶನ ರಿಸರ್ವ್ ಬ್ಯಾಂಕಿನ ಕರೆನ್ಸಿ ಮ್ಯಾನೇಜ್‌ಮೆಂಟಿಗೆ ಸಂಬಂಧಿಸಿದೆ. ರಿಸರ್ವ್ ಬ್ಯಾಂಕಿನ ದೈನಂದಿನ ನೋಟುಗಳ ನಿರ್ವಹಣೆಯ (ಕರೆನ್ಸಿ ಮ್ಯಾನೇಜ್‌ಮೆಂಟ್) ಬಗ್ಗೆ ಕೇಂದ್ರ ಹಣ ಕಾಸು ಮಂತ್ರಾಲಯದ ಜಂಟಿ ಕಾರ್ಯದರ್ಶಿಯೊಬ್ಬರು ಮೇಲುಸ್ತುವಾರಿ ಮಾಡುತ್ತಿದ್ದಾರೆ ಎಂಬುದಾಗಿ ರಿಸರ್ವ್ ಬ್ಯಾಂಕಿನ ಉದ್ಯೋಗಿಗಳ ಸಂಘಟನೆಗಳು ದೂರಿವೆ. ರದ್ದಾದ ನೋಟುಗಳ ಪೈಕಿ ಅತಿ ಹೆಚ್ಚಿನ ಪ್ರಮಾಣದ ನೋಟುಗಳು (ಸುಮಾರು 97%) ವಾಣಿಜ್ಯ ಬ್ಯಾಂಕುಗಳಲ್ಲಿ ಜಮೆ ಆಗಿರುವ ಅಂಶವನ್ನು ರಿಸರ್ವ್ ಬ್ಯಾಂಕ್ ಹೊರ ಹಾಕುವ ಸಮಯದಲ್ಲಿ, ಹಣ ಕಾಸು ಮಂತ್ರಾಲಯದ ಅಧಿಕಾರಿಗಳು ಆ ಅಂಕಿ ಸಂಖ್ಯೆಗಳನ್ನು ಅನುಮಾನಿಸಿದ್ದರಂತೆ. ರಿಸರ್ವ್ ಬ್ಯಾಂಕಿನ ಉದ್ಯೋಗಿಗಳ ಸಂಘಟನೆಗಳು ಹೇಳಿರುವಂತೆ ನೋಟುಗಳ ಮೇಲುಸ್ತುವಾರಿಯ ಸಲುವಾಗಿ ಜಂಟಿ ಕಾರ್ಯದರ್ಶಿಯೊಬ್ಬರನ್ನು ನಿಯೋಜಿಸಿದ್ದರೆ ರಿಸರ್ವ್ ಬ್ಯಾಂಕ್ ಬೆನ್ನುಮೂಳೆ ಮುರಿದ ಅಡ್ಡಕಸುಬಿಯ ಮಟ್ಟಕ್ಕೆ ಈಗ ಇಳಿದಿದೆ ಎಂಬುದನ್ನು ಸೂಚಿಸುತ್ತದೆ. ಒಂದು ವೇಳೆ, ಅಂಕಿ ಅಂಶಗಳ ಬಗ್ಗೆ ತೇಪೆ ಹಾಕುವ ಕೆಲಸ ಏನಾದರೂ ನಡೆದಿದ್ದರೆ, ಪರಿಸ್ಥಿತಿ ಅಂದುಕೊಂಡದ್ದಕ್ಕಿಂತಲೂ ಕೆಟ್ಟದಾಗಿರುತ್ತದೆ.

ಈ ಎಲ್ಲ ನಿದರ್ಶನಗಳನ್ನು ಒಟ್ಟಿಗೆ ನೋಡಿದಾಗ, ಎಂಭತ್ತು ವರ್ಷಗಳಷ್ಟು ದೀರ್ಘ ಕಾಲದಿಂದಲೂ ಅಸ್ತಿತ್ವದಲ್ಲಿರುವ ಮತ್ತು ದೇಶದ ಪ್ರಖ್ಯಾತ ಅರ್ಥಶಾಸ್ತ್ರಜ್ಞರು ಮುನ್ನಡೆಸಿರುವ ಈ ಸಂಸ್ಥೆಗೆ ಈಗ ದುರ್ಗತಿ ಬಂದಿದೆ. ಸಂಸ್ಥೆಗಳನ್ನು ಸುಟ್ಟು ಅವುಗಳ ಬೂದಿಯ ಮೇಲೆ ಸರ್ವಾಧಿಕಾರ ತಲೆ ಎತ್ತುತ್ತದೆ. ತನ್ನ ಸ್ವಭಾವಕ್ಕೆ ತಕ್ಕಂತೆ ಮೋದಿ ಸರ್ಕಾರವು ಭಾರತೀಯ ರಿಸರ್ವ್ ಬ್ಯಾಂಕ್‌ನಂತಹ ಸಂಸ್ಥೆಗಳನ್ನು ನಾಶಮಾಡಲು ಹೊರಟಿದೆ. ಆದರೆ, ತಮ್ಮ ಸಂಸ್ಥೆಯನ್ನೇ ಹಾಳುಗೆಡವಲು ಹೊರಟವರ ವಿರುದ್ಧ ಅದರ ನೇತೃತ್ವ ವಹಿಸಿರುವವರು ಕಿಂಚಿತ್ತಾದರೂ ಪ್ರತಿರೋಧ ತೋರಿಸದಿರುವುದು ಒಂದು ದುರಂತ. ಅವಿವೇಕದ ಅನಾಣ್ಯೀಕರಣವನ್ನು ಸಹಿಸಿಕೊಂಡದ್ದು ಸಾಲದೆಂಬಂತೆ, ಒಂದರ ನಂತರ ಇನ್ನೊಂದು ಮಹತ್ವದ ಸಂಸ್ಥೆಗಳನ್ನು ಉದ್ದೇಶಪೂರ್ವಕವಾಗಿ ಹಾಳುಗೆಡವುತ್ತಿರುವುದನ್ನು ದೇಶದ ಜನತೆ ಬಲವಂತವಾಗಿ ನೋಡುವಂತಾಗಿದೆ. ಈ ಸಾಲಿನಲ್ಲಿ ರಿಸರ್ವ್ ಬ್ಯಾಂಕ್ ಇತ್ತೀಚೆಗೆ ಸೇರಿಕೊಂಡಿದೆ. ●

ನೋಟುರದ್ದತಿಯ ಸಂಕಟಗಳಿಗಾಗಿ ಪ್ರಧಾನ ಮಂತ್ರಿಗಳ ಅಣಕು ವಿಚಾರಣೆ: ಕೇರಳದಾದ್ಯಂತ ನವೀನ ರೀತಿಯ ಪ್ರತಿಭಟನೆ



ಜನವರಿ 25ರಂದು, ಗಣತಂತ್ರ ದಿನದ ಹಿಂದಿನ ದಿನ ಕೇರಳದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ನೋಟುರದ್ದತಿಯನ್ನು ಮಾಡಿದ ಪ್ರಧಾನ ಮಂತ್ರಿಗಳ ಸಾರ್ವಜನಿಕ 'ವಿಚಾರಣೆ' ನಡೆಸಲಾಯಿತು. ಇದರಲ್ಲಿ ಸಾವಿರಾರು ಮಂದಿ ಭಾಗವಹಿಸಿದರು.

ತಿರುವನಂತಪುರದ ಪುತರಿಕ್ಕಂಡಂ ಮೈದಾನದಲ್ಲಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅಣಕು ವಿಚಾರಣೆಯನ್ನು ಉದ್ಘಾಟಿಸಿದರು.

ತ್ರಿಶೂರಿನಲ್ಲಿ ರಾಜ್ಯ ಕಾರ್ಯದರ್ಶಿ ಕೊಡಿಯೇರಿ ಬಾಲಕೃಷ್ಣನ್ ಮತ್ತು ಇತರ ಜಿಲ್ಲಾ ಕೇಂದ್ರಗಳಲ್ಲಿ ಸಿಪಿಐ(ಎಂ)ನ ಹಿರಿಯ ಮುಖಂಡರು ಈ ಅಣಕು ವಿಚಾರಣೆಗಳನ್ನು ಉದ್ಘಾಟಿಸಿದರು.

ಫೆಬ್ರುವರಿ ತಿಂಗಳಲ್ಲಿ ರಾಜ್ಯ 2000 ಕೇಂದ್ರಗಳಲ್ಲಿ 'ಜನತಾವೇದಿಕೆ'ಗಳ ಮೂಲಕ ಎಲ್ಲ ಜನವಿಭಾಗಗಳನ್ನು ಅಣಿನೆರೆಸಿ ನಗದು ಹಣ ಪಡೆಯುವುದರ ಮೇಲೆ ಹೇರಿರುವ, ಪ್ರಧಾನ ಮಂತ್ರಿಗಳು ಕೇಳಿದ 50ದಿನಗಳ ಗಡುವಿನ ನಂತರವೂ ತೆಯದಿರುವ ಎಲ್ಲ ಮಿತಿಗಳನ್ನೂ ತೆಗೆಯಬೇಕು ಮತ್ತು ಡಿಜಿಟಲ್ ವ್ಯವಹಾರಗಳನ್ನು ನಡೆಸಬೇಕು ಎಂಬ ಜುಲುಮೆ ಮಾಡಬಾರದು ಎಂಬುದು ಈ ಪ್ರತಿಭಟನೆಯ ಪ್ರಮುಖ ಆಗ್ರಹ.

10ವರ್ಷ ನಂತರ ಮತ್ತೊಂದು ಆರೆಸ್ಸೆಸ್ ಪಿತೂರಿ ಬಟಾಬಯಲು

ಕೇರಳದಲ್ಲಿ 2006ರಲ್ಲಿ ನಡೆದ ರಾಜಕೀಯ ಕೊಲೆಯಲ್ಲಿ ತಾನು ಭಾಗಿಯಾಗಿರುವುದಾಗಿ ಒಪ್ಪಿಕೊಂಡಿರುವುದು, ಆದರೂ ಈ ಕೊಲೆಯ ತನಿಖೆ ಮಾಡುತ್ತಿರುವ ಸಿಬಿಐ ಅದನ್ನು ಉಪೇಕ್ಷಿಸುತ್ತಿರುವುದು ಆರೆಸ್ಸೆಸ್‌ನ ಮತ್ತು ಸಿಬಿಐನ ನಿಜಸ್ವರೂಪವನ್ನು ಮತ್ತೊಮ್ಮೆ ಬಹಿರಂಗಕ್ಕೆ ತಂದಿದೆ.

ತೀವ್ರಗಾಮಿ ಸಂಘಟನೆಯಾದ ಎನ್‌ಡಿಎಫ್‌ನ ಕಾರ್ಯಕರ್ತನಾದ ಫೈಜಲ್ ಎಂಬ ವ್ಯಕ್ತಿಯ ಕೊಲೆ ಮೊಕದ್ದಮೆಯಲ್ಲಿ ಸಿಬಿಐ 2012ರಲ್ಲಿ ಸಿಪಿಐ(ಎಂ) ಮುಖಂಡರನ್ನು ಬಂಧಿಸಿತು. ಈ ಮೊಕದ್ದಮೆಯಲ್ಲಿ ಕಣ್ಣೂರು ಜಿಲ್ಲೆಯ ಸಿಪಿಐ(ಎಂ) ಮುಖಂಡರಾದ ರಾಜನ್ ಮತ್ತು ಚಂದ್ರಶೇಖರನ್ ಅವರನ್ನು ಅತಿ ಕಠಿಣ ಜಾಮೀನಿನ ಮೇಲೆ, 2.5 ವರ್ಷ ಜೈಲುವಾಸ ಅನುಭವಿಸಿದ ನಂತರ ಹೊರಗೆ ಬಿಡಲಾಗಿತ್ತಾದರೂ ಅವರು ತಮ್ಮ ಜಿಲ್ಲೆಗೆ ಬರುವಂತಿರಲಿಲ್ಲ.

ಫೈಜಲ್ ಕೊಲೆ ಮೊಕದ್ದಮೆಯನ್ನು ಸಿಬಿಐ ವಿಶೇಷ ತನಿಖಾ ತಂಡಕ್ಕೆ 2007ರಂದು ನೇಮಿಸಲಾಯಿತು. ಆಗಿನ ಯುಡಿಎಫ್ ಗೃಹಮಂತ್ರಿ ಮುಲ್ಲಪಳ್ಳಿ ರಾಮಚಂದ್ರನ್ ಅವರ ಮಧ್ಯಪ್ರವೇಶದಿಂದಾಗಿ ಎನ್‌ಡಿಎಫ್‌ನೊಂದಿಗೆ ಸಿಪಿಐ(ಎಂ)ನವರಿಗೆ ದ್ವೇಷವಿರುವ ಕಾರಣದಿಂದಾಗಿ ಈ ಕೃತ್ಯ ಎಸಗಿದ್ದಾರೆಂದು ಪೋಲಿಸರು ರಾಜನ್ ಮತ್ತು ಚಂದ್ರಶೇಖರನ್‌ಅವರನ್ನು ಈ ಮೊಕದ್ದಮ್ಮೆಯಲ್ಲಿ ಸಿಲುಕಿಸಿದ್ದರು.

ಫೈಜಲ್ ಕೊಲೆ ಮೊಕದ್ದಮೆಯನ್ನು ಬಳಸಿಕೊಂಡು ಸಿಪಿಐ(ಎಂ) ಕಾರ್ಯಕರ್ತರು ಕೊಲೆಗಡುಕರೆಂಬ ಅಪಪ್ರಚಾರವನ್ನು ಆರ್‌ಎಸ್‌ಎಸ್ ರಾಜ್ಯದಾದ್ಯಂತ ಹರಡಿಸಿತು. ಆದರೆ ಕಳೆದ ನವೆಂಬರ್‌ನಲ್ಲಿ ಸುಭೀಶ್ ಎಂಬ ಆರೆಸ್ಸೆಸ್ ಕಾರ್ಯಕರ್ತನನ್ನು ಕಣ್ಣೂರಿನ ಸಿಪಿಐ(ಎಂ) ಕಾರ್ಯಕರ್ತ ಮೋಹನನ್ ಕೊಲೆ ಪ್ರಕರಣದಲ್ಲಿ ಬಂಧಿಸಿ ವಿಚಾರಣೆ ನಡೆಸಿದಾಗ ಆತನ ಬಾಯಿಂದ ಫೈಜಲ್ ಕೊಲೆಯ ಸತ್ಯಾಂಶವೂ ಹೊರಬಂದಿದೆ.

ಈ ಹೊಸ ಸಾಕ್ಷಿಯ ಹಿನ್ನೆಲೆಯಲ್ಲಿ ಸಿಬಿಐ ಫೈಜಲ್ ಕೊಲೆ ಪ್ರಕರಣದ ಮರುತನಿಖೆ ನಡೆಸಬೇಕು ಮತ್ತು ನಿಜವಾದ ಅಪರಾಧಿಗಳನ್ನು ಹಿಡಿದು ಶಿಕ್ಷಿಸಬೇಕೆಂದು ಸಿಪಿಐ(ಎಂ) ಕೇರಳ ರಾಜ್ಯ ಕಾರ್ಯದರ್ಶಿ ಮಂಡಳಿ ಹೇಳಿದೆ.

ಆ ಕೊಲೆಯ ನೆಪದಲ್ಲಿ ಸಿಪಿಐ(ಎಂ) ಮುಖಂಡರಿಗೆ ವಿಪರೀತ ಕಿರುಕುಳ ಕೊಡಲಾಗಿದೆ. ಇದು ರಾಜಕೀಯ ದುರುದ್ದೇಶದಿಂದಲೇ ನಡೆದಿರುವಂತದ್ದು. ಆರಂಭದಲ್ಲಿ ಎನ್‌ಡಿಎಫ್ ಇದು ಆರೆಸ್ಸೆಸ್ ನಡೆಸಿದ ಕೃತ್ಯ ಎಂದಿತ್ತು. ಆದರೆ ನಂತರ ತಿಪ್ಪರಲಾಗ ಹಾಕಿ ಸಿಪಿಐ(ಎಂ)ನ್ನು ದೂಷಿಸಿತ್ತು. ಈಗ ಸಂಘಪರಿವಾರದೊಳಗಿನ ತಿಕ್ಕಾಟಗಳಿಂದಾಗಿ ಸತ್ಯಾಂಶ ಹೊರಬಿದ್ದಿದೆ. ಇದು ಆರೆಸ್ಸೆಸ್ ಹಿಂಸಾಚಾರದ ಬಗ್ಗೆ ಸಿಪಿಐ(ಎಂ) ಹೇಳುತ್ತ ಬಂದಿರುವುದನ್ನು ಮತ್ತೊಮ್ಮೆ ಸಾಬೀತು ಮಾಡಿದೆ.

ಆದರೆ ಈ ಪ್ರಕ್ರಿಯೆಯಲ್ಲಿ ಗಡೀಪಾರಿನಲ್ಲಿರುವ ರಾಜನ್ ಮತ್ತು ಚಂದ್ರಶೇಖರನ್ ಅವರ ಮಾನವ ಹಕ್ಕುಗಳ ತೀವ್ರ ಉಲ್ಲಂಘನೆಯಾಗಿದೆ. ಈ ಬಗ್ಗೆ ನ್ಯಾಯ ಸಿಗಬೇಕಾಗಿದೆ. ಕೇರಳ ಪೋಲೀಸ್ ಈ ಸಾಕ್ಷ್ಯವನ್ನು ಸಿಬಿಐಗೆ ನೀಡಿದೆ ಎಂದು ವರದಿಯಾಗಿದೆ.

ಛತ್ತೀಸ್‌ಗಡ: ಸಾಮಾಜಿಕ ಕಾರ್ಯಕರ್ತೆಯ ಮೇಲೆ ಸರಕಾರ ಮತ್ತು ಪೋಲೀಸ್ ಪೋಷಿತ ಗೂಂಡಾಗಳ ದಾಳಿ

ಆದಿವಾಸಿಗಳ ಹಿತಾಸಕ್ತಿಗಳಿಗಾಗಿ ಹೋರಾಟ ನಡೆಸುತ್ತಿರುವ ಸಾಮಾಜಿಕ ಕಾರ್ಯಕರ್ತೆ ಬೇಲಾ ಭಾಟಿಯಾ ಅವರ ಮನೆಗೆ ನುಗ್ಗಿ ಬಸ್ತರ್ ಪ್ರದೇಶವನ್ನು ಬಿಟ್ಟುಹೋಗದಿದ್ದರೆ ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಬೆದರಿಕೆ ಒಡ್ಡಿರುವದನ್ನು ಸಿಪಿಐ(ಎಂ) ಛತ್ತೀಸ್‌ಗಡ ರಾಜ್ಯ ಕಾರ್ಯದರ್ಶಿ ಸಂಜಯ್ ಪರಾತೆ ಬಲವಾಗಿ ಖಂಡಿಸಿದ್ದಾರೆ ಹಾಗೂ ಈ ದಾಳಿಕೋರರನ್ನು ಬಂಧಿಸಬೇಕು ಎಂದು ಆಗ್ರಹಿಸಿದ್ದಾರೆ.

ಮುಖಗಳಿಗೆ ಬಟ್ಟೆ ಕಟ್ಟಿಕೊಂಡು ಮನೆಗೆ ನುಗ್ಗಿದ ಈ ದಾಳಿಕೋರರು ವಾಸ್ತವವಾಗಿ ಇಲ್ಲಿಯ ಸರಕಾರ ಹಾಗೂ ಪೋಲೀಸರಿಂದ ಪೋಷಿತ ಗೂಂಡಾಗಳೇ. ಅವರು ವಿವಿಧ ಹೆಸರುಗಳ ಸಂಘಟನೆಗಳ ಮೂಲಕ ಮಾವೋವಾದದ ವಿರುದ್ಧ ಕೆಲಸಮಾಡುವ ಹೆಸರಿನಲ್ಲಿ, ಆದಿವಾಸಿಗಳನ್ನು ಅವರ 'ಜಲ-ಜಂಗಲ್-ಜಮೀನಿ'ನಿಂದ ವಂಚಿಸುವವರ ಹಿತಾಸಕ್ತಿಗಳನ್ನು ಕಾಪಾಡಲು, ಆದಿವಾಸಿಗಳ ಅವರ ಮಾನವಾಧಿಕಾರ ರಕ್ಷಣೆಯಲ್ಲಿ ತೊಡಗಿರುವ ಸಂಘಟನೆಗಳು ಮತ್ತು ವ್ಯಕ್ತಿಗಳ ಮೇಲೆ ದಾಳಿ ಮಾಡುವುದನ್ನೇ ತಮ್ಮ ಗುರಿಯಾಗಿಸಿಕೊಂಡಿದ್ದಾರೆ, ಬಸ್ತರ್ ಪ್ರದೇಶವನ್ನು ಕಾರ್ಪೊರೇಟ್‌ಗಳು ಮುಕ್ತವಾಗಿ ಮೇಯಬಹುದಾದ ಮೈದಾನವಾಗಿ ಮಾಡುವುದೇ ಅವರ ಮುಖ್ಯ ಉದ್ದೇಶ ಎಂದು ಸಂಜಯ್ ಪರಾತೆ ಹೇಳಿದ್ದಾರೆ.

ಕಳೆದ ಕೆಲವು ದಿನಗಳಿಂದ ಬೇಲಾ ಭಾಟಿಯಾ ಅವರು ಬಸ್ತರ್‌ನ ಆದಿವಾಸಿ ಮಹಿಳೆಯರ ಮೇಲೆ ನಡೆದಿರುವ ಅತ್ಯಾಚಾರ ಮತ್ತು ಮಾನವ ಹಕ್ಕುಗಳ ಉಲ್ಲಂಘನೆಗಳ ತನಿಖೆ ಮಾಡಲು ಬಂದ ಮಾನವಹಕ್ಕು ಆಯೋಗದವರಿಗೆ ಸಹಾಯ ಮಾಡಿದ್ದರು, ಆಕಾರಣ-ಕ್ಕಾಗಿಯೇ ಅವರ ಮೇಲೆ ಇಂತಹದ್ದೊಂದು ಧಾಳಿ ನಡೆದಿದೆ. ಯಾರೇ ಆದರು ಮಾನವ ಹಕ್ಕು ಉಲ್ಲಂಘನೆಯ ಬಗ್ಗೆ ಆಯೋಗದವರಿಗೆ ಸಹಕಾರ ತೋರಿದರೆ ಛತ್ತೀಸ್‌ಗಡದ ರಾಜ್ಯಸರಕಾರ ಮತ್ತು ಪೋಲೀಸ್ ಕೂಡಿಕೊಂಡು ಅಂತಹವರ ಮೇಲೆ ಧಾಳಿಮಾಡಿಸುವದು ಒಂದು ರೀತಿಯ ಪ್ರವೃತ್ತಿಯಾಗಿಬಿಟ್ಟಿದೆ ಎಂದು ಸಂಜಯ್ ಪರಾತೆ ಹೇಳಿದ್ದಾರೆ.

ಮಾನವ ಹಕ್ಕು ಆಯೋಗ ತಾನಾಗಿಯೇ ಈ ಬೆದರಿಕೆಯ ಪ್ರಕರಣ ಧಾಖಲಿಸಿಕೊಂಡು ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ತನಿಖೆ ನಡೆಸಿ ಶಿಕ್ಷೆಗೆ ಗುರಿಪಡಿಸಬೇಕೆಂದು ಅವರು ಮನವಿ ಮಾಡಿದ್ದಾರೆ.

ರೋಹಿತ್ ವೇಮುಲ ಸಾಂಸ್ಥಿಕ ಹತ್ಯೆಯ ನೆನಪು

ಪುಟ 2 ರಿಂದ

ರೋಹಿತ್ ತಾಯಿ ತನ್ನೆಲ್ಲ ನೋವು ಸಂಕಟಗಳ ನಡುವೆಯೂ ಈ ಅನ್ಯಾಯದ ವಿರುದ್ಧ ಹೋರಾಟ ನಡೆಸುತ್ತಿದ್ದು ಮಾದರಿಯಾಗಿದ್ದಾರೆ ಎಂದೂ ಅವರು ಹೇಳಿದರು.

ಡಿಎಸ್‌ಎಂಎನ ನಾಥೂ ಪ್ರಸಾದ್ ಮತ್ತಿತರ ಸಂಘಟನೆಗಳ ಮುಖಂಡರು ಈ ನೆನಪಿನ ಸಭೆಯಲ್ಲಿ ಮಾತಾಡಿದರು.

ಸಭೆಯ ಕೊನೆಯಲ್ಲಿ ರೋಹಿತ್ ನೆನಪಿನಲ್ಲಿ ಮೇಣಬತ್ತಿಗಳನ್ನು ಹಚ್ಚಲಾಯಿತು.

ಹೈದರಾಬಾದಿನಲ್ಲಿ 'ಶಹಾದತ್ ದಿನ'

ಎಡ ಮತ್ತು ಅಂಬೇಡ್ಕರ್‌ವಾದಿ ವಿದ್ಯಾರ್ಥಿ ಸಂಘಟನೆಗಳು ರೋಹಿತ್ ವೇಮುಲಗೆ ನ್ಯಾಯ ದೊರಕಿಸಬೇಕೆಂದು ಆಗ್ರಹಿಸಿ ಒಂದು ದಿನದ ಕಾರ್ಯಕ್ರಮವನ್ನು ನಡೆಸಿದವು. ಇದನ್ನು 'ಶಹಾದತ್' (ಹುತಾತ್ಮನಾದ) ದಿನ ಎಂದು ಅವರು ಹೆಸರಿಸಿದರು. ವಿಶ್ವವಿದ್ಯಾಲಯ ಆಡಳಿತ ಇದನ್ನು ವಿವಿ ಆವರಣದಲ್ಲಿ ಮಾಡಲು ಬಿಡದಿದ್ದರೂ ವಿದ್ಯಾರ್ಥಿಗಳು ದೊಡ್ಡ ಸಂಖ್ಯೆಯಲ್ಲಿ ಇದರಲ್ಲಿ ಭಾಗವಹಿಸಿದರು.

ಈ ಕಾರ್ಯಕ್ರಮಕ್ಕೆ ರೋಹಿತ್ ತಾಯಿ ರಾಧಿಕ ವೇಮುಲ ಮತ್ತು ತಮ್ಮ ರಾಜ ವೇಮುಲ ಮಾತ್ರವಲ್ಲದೆ, ಗುಜರಾತಿನ ಉನಾದಲ್ಲಿ 'ಗೋರಕ್ಷಕ'ರಿಂದ ಹಿಂಸೆ ಅನುಭವಿಸಿದ ದಲಿತರು, ಉತ್ತರಪ್ರದೇಶದ 'ಗೋರಕ್ಷಕ'ರು ಬಲಿ ತೆಗೆದುಕೊಂಡ ಮಹಮ್ಮದ್ ಅಖ್ಲಾಕ್‌ನ ಕುಟುಂಬದವರು, ಇತ್ತೀಚೆಗೆ ಕಾಣೆಯಾದ ನಜೀಬ್‌ನ ಕುಟುಂಬದವರೂ ಭಾಗವಹಿಸಿದ್ದರು.

ರಾಧಿಕ ವೇಮುಲ ತಮ್ಮನ್ನು ಆಳುವ ಮಂದಿ ಅವಮಾನಿಸಿದ ಅನುಭವಗಳನ್ನು ಹಂಚಿಕೊಂಡಾಗ ಸಭಿಕರ ಮನಗಳು ಮಿಡಿದವು. ಆಕೆ ಅನುಭವಿಸಿದ ಸಂಕಟಗಳು ಅಪಾರ. ಆದರೂ ಸಾಮಾಜಿಕ ನ್ಯಾಯದ ಹೋರಾಟಕ್ಕೆ ತಾನು ಸಿದ್ಧ, ವಿದ್ಯಾರ್ಥಿ ಸಮುದಾಯ ಈ ಸಾಮೂಹಿಕ ಹೋರಾಟದಲ್ಲಿ ತನ್ನೊಡನೆ ಭಾಗಿಯಾಗಬೇಕು ಎಂದು ಹೇಳಿದರು. **"ಪ್ರಧಾನ ಮಂತ್ರಿಗಳು ಹಲ್ಲೆಮಾಡಬೇಕೆಂದರೆ ನನ್ನ ಮೇಲೆ ಮಾಡಿ, ದಲಿತರ ಮೇಲಲ್ಲ, ನನಗೆ ಗುಂಡು ಹೊಡೆಯಿರಿ, ದಲಿತರನ್ನು ಮುಟ್ಟಬೇಡಿ ಅಂದರು. ನಮ್ಮನ್ನು ಮುಟ್ಟದೆಯೇ ಇವರೆಲ್ಲ ನಮ್ಮನ್ನು ಬದಿಗೆ ತಳ್ಳುವಲ್ಲಿ, ಸಾಯಿಸುವಲ್ಲಿ ಚತುರರಾಗಿದ್ದಾರೆ"** ಎಂದು ಮಾರ್ಮಿಕವಾಗಿ ಹೇಳಿದರು.

ರಾಜ್ಯಗಳ ಸುತ್ತ



ಭಾರತಿ ಗಾಂವ್ಕರ್

ತಮಿಳುನಾಡು : ಮೂವರು ಪೋಲಿಸ್ ಕಮಿಶನರ್‌ಗಳ ಅಮಾನತಿಗೆ ಸಿಪಿಐ(ಎಂ) ಆಗ್ರಹ

ಜಲ್ಲಿಕಟ್ಟು ಪರ ಪ್ರತಿಭಟನಾಕಾರರ ವಿರುದ್ಧ ಹಿಂಸಾಚಾರಕ್ಕೆ ಸಂಬಂಧಪಟ್ಟಂತೆ ಚೆನ್ನೈ, ಮಧುರೈ ಮತ್ತು ಕೊಯಮತ್ತೂರಿನ ಪೊಲೀಸ್‌ಕಮಿಶನರ್‌ಗಳನ್ನು ತಕ್ಷಣವೇ ಅಮಾನತುಗೊಳಿಸಬೇಕು ಎಂದು ಸಿಪಿಐ(ಎಂ) ತಮಿಳುನಾಡು ರಾಜ್ಯ ಕಾರ್ಯದರ್ಶಿ ಜಿ.ರಾಮಕೃಷ್ಣನ್ ಆಗ್ರಹಿಸಿದ್ದಾರೆ.

ಜನವರಿ 23ರಂದು ಜಲ್ಲಿಕಟ್ಟು ಕುರಿತ ತಿದ್ದುಪಡಿಯ ಮಸೂದೆಯನ್ನು ತಮಿಳುನಾಡು ವಿಧಾನಸಭೆಯಲ್ಲಿ ಮಂಡಿಸುವ ಮೊದಲೇ ಪೋಲೀಸರು ಬೆಳಗ್ಗಿನಿಂದ ಸಂಜೆಯ ವರೆಗೆ ಹಿಂಸಾಚಾರದಲ್ಲಿ ತೊಡಗಿದರು. ಅಶ್ರುವಾಯು ಪ್ರಯೋಗ, ವಾಹನಗಳಿಗೆ ಬೆಂಕಿ, ಯುವತಿಯರು, ಗರ್ಭಿಣಿಯರೆನ್ನದೆ ಹಲ್ಲೆ, ಹತ್ತಿರದ ಪ್ರದೇಶಗಳ ಮನೆಗಳಿಗೂ ನುಗ್ಗಿ ಜನಗಳ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಅವರು ಹೇಳಿದ್ದಾರೆ.

"ಎಡಿಎಂಕೆ ಸರಕಾರ ಪ್ರತಿಭಟನೆಯ ದನಿಗಳನ್ನು ಅಡಗಿಸಲು ಪೋಲೀಸರನ್ನು ಬಳಸುತ್ತಿದೆ, ಶಾಂತಿಯುತ ಪ್ರತಿಭಟನಾಕಾರರನ್ನು ಬಂಧಿಸಿ, ಅವರ ಮನೆಗಳಿಗೆ ನುಗ್ಗಿ ಹಲ್ಲೆ ಮಾಡಿ, ಅವರ ವಿರುದ್ಧ ಕೇಸುಗಳನ್ನು ಹಾಕಲಾಗಿದೆ" ಎಂದು ಜಿ.ರಾಮಕೃಷ್ಣನ್ ಹೇಳಿದ್ದಾರೆ.

ಈ ಮೂರು ಪೊಲೀಸ್ ಕಮಿಶನರುಗಳು ವಿದ್ಯಾರ್ಥಿಗಳನ್ನು 'ರಾಷ್ಟ್ರ-ವಿರೋಧಿಗಳು' ಎಂದು ಕರೆದು ಅವರ ವಿರುದ್ಧ ಹಿಂಸಾಚಾರವನ್ನು ಹರಿಯ ಬಿಟ್ಟಿದ್ದಾರೆ, ಈ ಮೂವರನ್ನೂ ಅಮಾನತು ಮಾಡಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಪಂಜಾಬ್: ಎಡಪಕ್ಷಗಳಿಂದ 52 ಅಭ್ಯರ್ಥಿಗಳು

ಪಂಜಾಬ್ ವಿಧಾನಸಭಾ ಚುನಾವಣೆಗಳಲ್ಲಿ ಸಿಪಿಐ, ಸಿಪಿಐ(ಎಂ) ಮತ್ತು ಆರ್‌ಎಂಪಿಐ ಈ ಮೂರು ಎಡಪಕ್ಷಗಳು ಜಂಟಿಯಾಗಿ ಸ್ಪರ್ಧಿಸುತ್ತಿವೆ. ಒಟ್ಟು 52 ಸ್ಥಾನಗಳಲ್ಲಿ ಸ್ಪರ್ಧಿಸಿದ್ದು ಸಿಪಿಐ(ಎಂ) 12 ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದೆ. ಫೆಬ್ರುವರಿ 4ರಂದು ಇಲ್ಲಿ ಮತದಾನ ನಡೆಯಲಿದೆ.

ಉತ್ತರಪ್ರದೇಶ: 140 ಸ್ಥಾನಗಳಲ್ಲಿ ಎಡಪಕ್ಷಗಳ ಸ್ಪರ್ಧೆ

ಉತ್ತರಪ್ರದೇಶದಲ್ಲಿ ಆರು ಎಡಪಕ್ಷಗಳು ಕೋಮುವಾದಿ ಮತ್ತು ಬಂಡವಾಳಶಾಹಿ ಪಕ್ಷಗಳ ವಿರುದ್ಧ 140 ಸ್ಥಾನಗಳಲ್ಲಿ ಜಂಟಿಯಾಗಿ ಸ್ಪರ್ಧಿಸಲು ನಿರ್ಧರಿಸಿವೆ. ರಾಜ್ಯದಲ್ಲಿ ಒಟ್ಟು 403 ಸ್ಥಾನಗಳಿಗೆ ಚುನಾವಣೆ ನಡೆಯುತ್ತದೆ.

105 ಸ್ಥಾನಗಳ ಪಟ್ಟಿಯನ್ನು ಈಗಾಗಲೇ ಪ್ರಕಟಿಸಿದ್ದು ಇದರಲ್ಲಿ ಸಿಪಿಐ 58, ಸಿಪಿಐ(ಎಂ) 18, ಸಿಪಿಐ(ಎಂ-ಎಲ್) 17, ಫಾರ್ವರ್ಡ್ ಬ್ಲಾಕ್ 7 ಮತ್ತು ಎಸ್‌ಯುಸಿಐ(ಸಿ) 5 ಸ್ಥಾನಗಳಲ್ಲಿ ಸ್ಪರ್ಧಿಸುತ್ತಿವೆ. ಉಳಿದ ಸಥಾನಗಳ ಪಟ್ಟಿಯನ್ನು ಸದ್ಯದಲ್ಲೇ ಪ್ರಕಟಿಸಲಾಗುವುದು ಎಂದು ಹೇಳಿವೆ.

ಕೇಂದ್ರದ ಬಿಜೆಪಿ ಸರಕಾರದ ಧೋರಣೆಗಳು ರಾಜ್ಯದ ಜನಗಳ ಮೇಲೂ ಪ್ರತಿಕೂಲ ಪರಿಣಾಮ ಬೀರಿದ್ದರೆ, ರಾಜ್ಯ ಸರಕಾರ ಅಂಗೀಕರಿಸಿರುವ ಧೋರಣೆಗಳೂ ರೈತರು, ಕೂಲಿಕಾರರು ಮತ್ತು ಬಡಜನರನ್ನು ಬಹುವಾಗಿ ತಟ್ಟಿವೆ ಎಂದು ಎಡ ಪಕ್ಷಗಳು ಈ ಚುನಾವಣಾ ಕಣಕ್ಕಿಳಿದಿವೆ.

ಟ್ರಂಪ್ ವಿರುದ್ಧ ಭುಗಿಲೆದ್ದ ಆಕ್ರೋಶ

ಜಗದ ಸುತ್ತ

ಎಂ.ಜಿ. ವೆಂಕಟೇಶ್

ಎಲ್ಲಾ ಮಾಧ್ಯಮಗಳು ಟ್ರಂಪ್ ಅಧ್ಯಕ್ಷೀಯ ಉದ್ಘಾಟನೆಯ ಭರಾಟೆ ಮಾತ್ರ ತೋರಿಸಿದವು, ಅದರ ಹಿಂದಿನ ದಿನ ಮತ್ತು ಆ ದಿನವೂ ಅಮೆರಿಕದಲ್ಲಿ ಮತ್ತು ಇಡೀ ಜಗತ್ತಿನಲ್ಲಿ ಭಗಿಲೆದ್ದ ಪ್ರತಿಭಟನೆ ತೋರಿಸಲಿಲ್ಲ. ಈ ಪ್ರತಿಭಟನೆಗಳು 'ಭಯ'ದಿಂದ 'ಭರವಸೆ' ಕಡೆಗೆ ಹೊಸ ರಾಜಕೀಯ ಚಳುವಳಿ ಬೆಳೆಯುತ್ತಿದೆ ಎಂದು ತೋರಿಸಿದವು. ವಿಶ್ವದ ಎಲ್ಲಾ ಕಡೆಗಳಲ್ಲೂ 20 ಲಕ್ಷ ಜನ, ಅದರಲ್ಲೂ ಹೆಚ್ಚಿನ ಪಾಲು ಮಹಿಳೆಯರು ದನಿಯೆತ್ತಿದ್ದಾರೆ. ಆಕ್ರೋಶವಿದ್ದರೂ ಶಾಂತಿಯುತವಾಗಿ ರಾಜಧಾನಿ ವಾಷಿಂಗ್‌ಟನ್ ನಲ್ಲಿ 5 ಲಕ್ಷ ಮಹಿಳೆಯರು ಟ್ರಂಪ್ ವಿರೋಧಿ ನಡೆಯಲ್ಲಿ ಪಾಲ್ಗೊಂಡು, 1973ರಲ್ಲಿ ನಿಕ್ಸನ್ ಮರು ಅಧಿಕಾರ ಸ್ವೀಕರಿಸುವಾಗ ವಿಯೆಟ್ನಾಂ ಯುದ್ಧ



ವಿರುದ್ಧ 60 ಸಾವಿರ ಪ್ರತಿಭಟಿಸಿದ್ದ ರ್‍ಯಾಲಿಯನ್ನು ಕುಬ್ಜವಾಗಿಸಿದ್ದಾರೆ. "ನಿಮ್ಮ ಮೊದಲನೇಯ ದಿನಕ್ಕೆ ಸ್ವಾಗತ ಆದರೆ ನಾವು ಬರುವುದಿಲ್ಲ" ಘೋಷಣೆ ಮೊಳಗುತ್ತಿತ್ತು. ಆಮೇರಿಕಾದಲ್ಲಿ 600 ಹೆಚ್ಚು "ಸಹೋದರಿಯರ ನಡೆ", ಚಿಕಾಗೋದಲ್ಲಿ 2.5 ಲಕ್ಷ ಲಾಸ್ ಎಂಜಲೀಸ್ ಮತ್ತು ಬಾಸ್ಟನ್‌ನಲ್ಲಿ ತಲಾ 1 ಲಕ್ಷ ಜನ (ಹೆಚ್ಚಾಗಿ ಮಹಿಳೆಯರು) ಪ್ರತಿಭಟನೆಯಲ್ಲಿ ಪಾಲ್ಗೊಂಡ ವರದಿಗಳಿವೆ.

ನ್ಯೂಯಾರ್ಕ್‌ನಲ್ಲಿ ಟ್ರಂಪ್ ವಿರುದ್ಧ 5ನೇ ಎವಿನ್ಯೂ ನಲ್ಲಿರುವ ಟ್ರಂಪ್ ಗೋಪುರ ಬಳಿ 5 ಲಕ್ಷ ಜನ ನೆರೆದಿದ್ದಾರೆ. ಲಂಡನ್‌ನಲ್ಲಿ 1 ಲಕ್ಷ ಸೇರಿದ್ದು, ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಜರ್ಮನಿ, ಫ್ರಾನ್ಸ್, ಹಂಗೇರಿ, ಸ್ವಿರ್ಜಲೆಂಟ್, ಕೆನಡಾಗಳಲ್ಲಿ ಹಲವು ಪ್ರತಿಭಟನೆಗಳು ಮೂಡಿವೆ. ಈ ಬೃಹತ್ ಪ್ರತಿಭಟನೆಗಳಿಗೆ ಕರೆ ಕೊಟ್ಟವರ ಆಶಯ ಬರಿಯ "ಮಹಿಳೆಯರ ಹಕ್ಕು, ಅವರ ಕುಟುಂಬ ಹಾಗೂ ಅವರ ಸಮುದಾಯ ರಕ್ಷಣೆಗಾಗಿ, ಎಲ್ಲ ಆಯ್ಕೆಯಾದ ನಾಯಕರನ್ನು ಒತ್ತಾಯಿಸುವುದು" ಆಗಿತ್ತು. ಅಂದರೆ ಈ ಪ್ರಾಥಮಿಕ ಹಕ್ಕಿಗೂ ಕುತ್ತು ಬರುವ ಅಪಾಯ ಇದೆ ಎಂಬ ಭಾವನೆ ಲಕ್ಷಾಂತರ ಮಹಿಳೆಯರಿಗೆ ಬಂದಿದೆ ಎಂಬುದೇ ಆತಂಕಕಾರಿ ವಿಷಯ. ಇಂತಹ ವ್ಯಕ್ತಿಯೊಬ್ಬ ಅಧ್ಯಕ್ಷನಾಗಿ ಆಯ್ಕೆಯಾಗುತ್ತಾನೆ ಎಂದರೆ, ಅದು ಎಂತಹ ಪ್ರಜಾಪ್ರಭುತ್ವ ವ್ಯವಸ್ಥೆ?

ಇವಲ್ಲದೆ, ಹಲವು ಫಲಕಗಳಲ್ಲಿ – 'ಟ್ರಂಪ್ ಡಂಪ್' (ಟ್ರಂಪ್ ನನ್ನು ಬಿಸಾಡು), 'ದ್ವೇಷ ತಿರಸ್ಕರಿಸಿ', 'ರಾಜಕೀಯ ಮರು ಸ್ಥಾಪಿತವಾಗಲಿ', 'ಬೇಡ ಬೇಡ ವರ್ಣಭೇದ', 'ಬೇಡ ಟ್ರಂಪ್' ಕಾಣುತ್ತಿತ್ತು.

'ಸಿರಿಯಾದ ನಿರಾಶ್ರಿತರನ್ನು ಸ್ವಾಗತಿಸಿ' ಬರ್ಲಿನ್‌ನಲ್ಲಿ 'ದ್ವೇಷ ಬೇಡ', 'ಬೇಡ ಭಯ', 'ನಿರಾಶ್ರಿತರಿಗೆ ಇಲ್ಲಿ ಸ್ವಾಗತ' ಎಂಬ ಘೋಷಣೆ ಹೊತ್ತ ಫಲಕಗಳು ರಾರಾಜಿಸುತ್ತಿದ್ದವು. ●







ಟ್ರಂಪ್ ತಂಡ : ಶತಕೋಟಿಧೀರರು ಮತ್ತು ಜನರಲ್‌ಗಳು

ಅಧ್ಯಕ್ಷ ಟ್ರಂಪ್ ತಂಡದ ಅರ್ಥ ಎಂದರೆ ಹಣ ಮತ್ತು ಮಿಲಿಟರಿ. 'ಮರೆತ ಅಮೆರಿಕನ್ನರ' ಸಹಾಯಕ್ಕಾಗಿ ಧಾವಿಸಿದ ಅದರಲ್ಲಿ ಟ್ರಂಪ್ ತಂಡದಲ್ಲಿ ಕೆಲವು 'ಮರೆತ ಅಮೆರಿಕನ್ನರಿದ್ದಾರೆ'. ಈ ಕ್ಯಾಬಿನೆಟ್‌ನಲ್ಲಿ ಯಾವುದೇ ಗ್ರಾಮೀಣ ಮತ್ತು ಕೈಗಾರಿಕಾ ಹಿಂಜರಿತಗಳ ಅನುಭವವೇ ಇಲ್ಲದ ಶತಕೋಟಿ ವೀರರಿದ್ದಾರೆ. ಇವರಲ್ಲಿ ಅಮೇರಿಕಾ ಸಮಾಜದ ಮೂಲ ಸೆಲೆಯಾದ ಉದ್ಯಮಶೀಲತೆಯ ಕಿಡಿಯಿಲ್ಲ. ಇನ್ನೂ ಮಾಜಿ ಜನರಲ್‌ಗಳು ಯುದ್ಧವನ್ನು ಕಂಟ್ರೋಲ್ ರೂಮಿನಿಂದ ನೋಡಿದವರೇ ಹೊರತು ರಣರಂಗದಲ್ಲಿದ್ದವರಲ್ಲ. ಇವರಿಗೆ ಯುದ್ಧಭೂಮಿ ನೋವಿನ ಬದಲಿಗೆ, ಶೌರ್ಯ–ಕ್ರೌರ್ಯಗಳ ಸಂಕೇತ. ಶತಕೋಟಿ ವೀರರಿಗೆ ಮುಕ್ತ ಮಾರುಕಟ್ಟೆ ಬಂಡವಾಳಶಾಹಿ ಬಲು ಪ್ರಿಯ. ಅಮೇರಿಕನ್ನರ ನಿಜವಾದ ಸಂಕಷ್ಟಗಳನ್ನು ಪರಿಹರಿಸಲು ಹಣದ ಪ್ರಪಂಚವಾಗಲಿ ಅಥವಾ ಮಿಲಿಟರಿ ಪ್ರಪಂಚವಾಗಲಿ ಸಿದ್ಧವಿಲ್ಲ. ಇದು ನೀತಿಕತೆಗಳ ಸರಕಾರ. ಆದ್ದರಿಂದ ಅದನ್ನು ಟ್ರಂಪ್ ಮುನ್ನಡೆಸುವುದು ಸಹಜವಾಗಿದೆ ಮತ್ತು ಸರಕಾರ ನಡೆಸುವುದಕ್ಕಿಂತ ಮನರಂಜನೆ ಮುಖ್ಯವಾಗಿರುವಂತಿದೆ.

ಮಿಲಿಟರಿ ಮೇಲೆ ನಾಗರೀಕ ನಿಯಂತ್ರಣ ಅಮೇರಿಕಾದ ಮೂಲಭೂತ ಗುಣ. ಅಧ್ಯಕ್ಷ ಐಸೆನ್‌ಹೊವರ್ 1950ರಲ್ಲಿ ರಕ್ಷಣಾ ಕಾರ್ಯದರ್ಶಿಯಾಗಿ ಜ॥ ಜಾರ್ಜ್ ಮಾರ್ಷೆಲ್‌ರನ್ನು ಆಯ್ಕೆ ಮಾಡಿಕೊಂಡಾಗ ಅಮೆರಿಕದ ಪಾರ್ಲಿಮೆಂಟ್ ಮಿಲಿಟರಿ ಪ್ರಭಾವದ ಬಗ್ಗೆ ಆತಂಕಗೊಂಡಿತ್ತು. ಒಂದು ದಶಕದ ನಂತರ ಅಮೇರಿಕಾ ಸರ್ಕಾರದ ಮೇಲೆ ಮಿಲಿಟರಿ ಮತ್ತು ಮಿಲಿಟರಿ–ಕೈಗಾರಿಕಾ ಸಂಕೀರ್ಣದ ಆಧಿಪತ್ಯವನ್ನು ಒಪ್ಪಿಕೊಂಡಿತು. ಮಿಲಿಟರಿ ಮತ್ತು ಶಸ್ತ್ರಾಸ್ತ್ರ ತಯಾರಿಕರ ಒಕ್ಕೂಟವಾದ 'ಮಿಲಿಟರಿ ಕೈಗಾರಿಕಾ ಸಂಕೀರ್ಣ'ದ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಭಾವ ಈಗ ಅಂದಿಗಿಂತಲೂ ಭೀಕರವಾಗಿದೆ. ರಾಷ್ಟ್ರ ಭಕ್ತಿಯ ಅರ್ಥ ಮಿಲಿಟರಿಗೆ ಶರಣಾಗುವುದು ಮತ್ತು ರಾಷ್ಟ್ರಧ್ವಜದ ಆರಾಧನೆ.

ಈ ಸನ್ನಿವೇಶದಲ್ಲಿ ಟ್ರಂಪ್ ಆಯ್ಕೆ ಮಾಡಿರುವ 3 ಜನರಲ್‌ಗಳು :

ಜನರಲ್ ಜೇಮ್ಸ್‌ಗೆ (ಹುಚ್ಚುನಾಯಿಯೆಂದು ಪ್ರಸಿದ್ಧಿ), ರಕ್ಷಣಾ ಇಲಾಖೆ ಜವಾಬುದಾರಿ. ಲೆ॥ ಜ॥ ಮೈಕೆಲ್ ಫ್ಲಿನ್ ರಾಷ್ಟ್ರೀಯ ಭದ್ರತಾ ಸಲಹೆಗಾರ ಮತ್ತು ಜ॥ ಜಾನ್‌ಕೆಲ್ಲಿ ಆಂತರಿಕ ಭದ್ರತಾ ಮುಖ್ಯಸ್ಥರಾಗಿರುತ್ತಾರೆ. ಸೆನೆಟರ್ ಕ್ರಿಸ್ ಮರ್ಫಿಯವರ ಪ್ರಕಾರ ಆಯ್ಕೆಯಾದವರು ಸಮರ್ಥರಿದ್ದಾಗಲೂ ಸಹಾ ನಾವು 'ಪ್ರಪಂಚದ ಸಮಸ್ಯೆಗಳನ್ನು ಮಿಲಿಟರಿ ದೃಷ್ಟಿಯಿಂದ ನೋಡಿದಾಗ ಬಹಳ ದೊಡ್ಡ ತಪ್ಪು ಮಾಡುತ್ತೇವೆ. ಕೈಯಲ್ಲಿ ಸುತ್ತಿಗೆ ಸರ್ಕಾರದ ಆಯುಧವಾದರೆ ಆಗ ಮೊಳೆಗಳನ್ನು ಹುಡುಕುತ್ತದೆ ಮತ್ತು ಹಲವು ಆಯುಧಗಳು ಬೇಕಾಗುತ್ತವೆ.' ಇಸ್ಲಾಂ ವಿರುದ್ಧ ಅವರ ಅಭಿಪ್ರಾಯಗಳು ಮತ್ತು ಫ್ಲಿನ್‌ರವರ ಥಿಯರಿಗಳ ಬಗ್ಗೆ ಆತಂಕವಿದೆ. ಟ್ರಂಪ್ ಹೇಗೆ ಎಲ್ಲವೂ ಅನಿಶ್ಚಿತವೋ ಹಾಗೇ ಅವರ ಸಹಚರರು ಸಹಾ.

ಶತಕೋಟಿ ಧೀರರು :

ಕುಸಿಯುತ್ತಿದ್ದ ಅಮೇರಿಕಾ ಆರ್ಥಿಕ ಸ್ಥಿತಿಯನ್ನು ಪಾರು ಮಾಡಲು ಅಮೇರಿಕನ್ನರ ನೋವನ್ನು ಅರಿತ ಹಾಗೆ ಮಾಡಿದ ಟ್ರಂಪ್‌ನ ಮಾತಿನ ಮೋಡಿಗೆ ಜನ ಮರುಳಾಗಿದ್ದಾರೆ. "ಮರೆತ ಅಮೇರಿಕನ್"ರು ಟ್ರಂಪ್ ತಮ್ಮ ವ್ಯಾಪಾರದ ಕೌಶಲ್ಯದ ಮೂಲಕ ಅಮೇರಿಕನ್ನರಿಗೆ ಉದ್ಯೋಗ ಸೃಷ್ಟಿಸಬಹುದು ಮತ್ತು ಆರ್ಥಿಕತೆಯ ಪುನರುತ್ಥಾನ ಮಾಡಬಹುದು ಎಂದುಕೊಂಡಿದ್ದಾರೆ. ಇದನ್ನು ಸಾಧಿಸಲು ವ್ಯಾಪಾರಿ ವರ್ಗದ ಕಡೆಗೆ ದೃಷ್ಟಿ ಬೀರಿದ ಟ್ರಂಪ್ ಕ್ಯಾಬಿನೆಟ್‌ನಲ್ಲಿರುವ ಆಯ್ಕೆಯಾದವರ ಮೊದಲ ಅರ್ಧದವರ ಆಸ್ತಿಯ ಮೊತ್ತ 14.5 ಬಿಲಿಯನ್ ಡಾಲರುಗಳು, ಜಾರ್ಜ ಬುಶ್ ಮಂತ್ರಿಗಳ ಆಸ್ತಿಯ 30 ಪಟ್ಟು!

ಅಮೆರಿಕದ ಹಣಕಾಸು ನಿರ್ವಹಣೆ ಮಾಡುವ ಎಲ್ಲಾ ಖಾತೆಗಳ ಸಚಿವರೂ ಅಲ್ಲಿನ ಅತ್ಯಂತ ಶ್ರೀಮಂತ ವರ್ಗಕ್ಕೆ ಸೇರಿದವರು. ವಾಣಿಜ್ಯ ಇಲಾಖೆಯ ಮುಖ್ಯಸ್ಥರು "ದಿವಾಳಿ ರಾಜ"ನೆಂದು ಖ್ಯಾತನಾದ ವಿಲ್ಬರ್ ರಾಸ್(2.9. ಬಿ. ಡಾಲರ್) ಹೀಗೆ ಹಲವಾರು ಮುಖ್ಯ ಜಾಗಗಳಲ್ಲಿ ಬಿಲಿಯಾಧಿಪತಿಗಳನ್ನು ಕೂರಿಸಲಾಗಿದೆ. 'ವಾಲ್ ಸ್ಟ್ರೀಟ್' (ಅಮೆರಿಕದ ಶೇರು ಮಾರುಕಟ್ಟೆ)ನ್ನು ಅಮೆರಿಕದ ಬಿಕ್ಕಟ್ಟಿಗಾಗಿ ದೂರಿದ ಟ್ರಂಪ್ ನ ಸಚಿವರುಗಳೆಲ್ಲಾ 'ವಾಲ್ ಸ್ಟ್ರೀಟ್'ಗೆ ಸಂಬಂಧಪಟ್ಟವರೇ. ಅದನ್ನು ಮುಳುಗಿಸಿದ ಗೋಲ್ಡ್ ಮನ್ ಸಾಕ್ ಮುಂತಾದ ದೈತ್ಯ ಕಂಪನಿಗಳ ಮಾಜಿ ಹಿರಿಯ ಅಧಿಕಾರಿಗಳೇ. ಇವರುಗಳು ಹೇಗೆ 'ಮರೆತ ಅಮೆರಿಕನ್ನರ' ನೋವು ಅರಿತು ಅದನ್ನು ನಿವಾರಿಸಬಲ್ಲರು.

ಮತ್ತೊಬ್ಬ ಸಲಹೆಗಾರ ಮಹಾನುಭಾವ ಸ್ಟೀಫನ್ ಬ್ಯಾನನ್ ವ್ಯಾಟಿಕನ್‌ನಲ್ಲಿ 2014ರಲ್ಲಿ ಮುಕ್ತ ಮಾರುಕಟ್ಟೆ ಮತ್ತು ಬಂಡವಾಳಶಾಹಿಯಿಂದ ಆದ ದುರುಂತಗಳನ್ನು ತಿಳಿಸುತ್ತಾ, ಲಾಭ ಮತ್ತು ಅಪ್ರಾಣಿಕತೆ ಆರ್ಥಿಕತೆಯನ್ನು ನಿರ್ಧರಿಸಬಾರದು ಎಂದಿದ್ದ. ಜನರನ್ನು ಸರಕುಗಳೆಂದು ಪರಿಗಣಿಸಲ್ಪಡುವುದಕ್ಕೆ ಬದಲಾಗಿ ಲಾಭಕ್ಕೆ ಅಂಕುಶವಿಡುವ ಜ್ಯೂಡೋ ಕ್ರಿಶ್ಚಿಯನ್ ವ್ಯವಸ್ಥೆ ಬೇಕು ಎಂದ. ಈಗ ಅದನ್ನು ಜಾರಿ ಮಾಡಲು 'ಚರ್ಚ್ ಮಿಲಿಟೆಂಟ್' ಗುಂಪುಗಳನ್ನು ಸ್ಥಾಪಿಸುವ ಮುಖಾಂತರ ಇಸ್ಲಾಂ ವಿರುದ್ಧ ಸಮರ ಸಾರಬೇಕೆಂದು ಹೇಳುತ್ತಿದ್ದಾನೆ. "ಮರೆತ ಅಮೇರಿಕನರಿಗೆ" ಸಾಮಾಜಿಕ ಸಾಂತ್ವನ ನೀಡುವ ಬದಲಾಗಿ, ಹೆಚ್ಚು ಸಾಮಾಜಿಕ ಅಸಮಾನತೆ ಮತ್ತು ಹೆಚ್ಚು ಯುದ್ಧಗಳಿಂದ ಅವರ ನೋವು ನಿವಾರಿಸಬಹುದು ಎಂಬುದು ಈ ಮಹಾನುಭಾವನ ಯೋಜನೆ.



ಟ್ರಂಪ್ ತಂಡದಲ್ಲಿ ಆಯ್ಕೆಯಾದವರಲ್ಲಿ ಶ್ವೇತ ವರ್ಣದ ಪಾರಮ್ಯ ನಂಬಿದವರು ವಾತಾವರಣ ವಿಜ್ಞಾನವನ್ನು ದೂಷಿಸಿದವರು, ವಾಲ್‌ಸ್ಟ್ರೀಟ್‌ನ ಆಪ್ತರು, ಕಾರ್ಪೋರೇಟ್ ದಳ್ಳಾಳಿಗಳು ತುಂಬಿದ್ದಾರೆ. ಟ್ರಂಪ್ ಚುನಾವಣಾ ಭಾಷಣದಲ್ಲಿ ತನ್ನನ್ನು "ಎಲ್ಲ ಅಮೇರಿಕನ್ನರ ಅಧ್ಯಕ್ಷ" ಎಂದೇ ಬಿಂಬಿಸಿಕೊಂಡಿದ್ದರೆ, ಈಗ "ದ್ವೇಷವನ್ನು" ಶ್ವೇತ ಭವನದೊಳಗಡೆ ಸ್ವಾಗತಿಸುತ್ತಿದ್ದಾರೆ. ●

JANASHAKTHI KANNADA VARA PATRIKE JAN 30-Feb 5, 2017 Price : Rs. 10/- Date of Publication : 27 January 2017 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಸಾರ್ವಜನಿಕ ಉದ್ಯಮದ ನಾಶಕ್ಕೆ ಮೋದಿ ಸರಕಾರದ ಸ್ಕೆಚ್

ವಸಂತರಾಜ್ ಎನ್.ಕೆ.

ಕರ್ನಾಟಕದ ಹೆಮ್ಮೆಯಾದ ಬಿ.ಇ.ಎಲ್., ಬಿ.ಇ.ಎಂ.ಎಲ್., ಹಾಗೂ ಭದ್ರಾವತಿ ಉಕ್ಕಿನ ಕಾರ್ಖಾನೆಗಳನ್ನು ದೇಶಿ/ವಿದೇಶಿ ಖಾಸಗಿ ಉದ್ಯಮಿಗಳಿಗೆ ಮೂರು ಕಾಸಿಗೆ ಮಾರಲು ತಯರಾಗಿದೆ. ಬಿ.ಇ.ಎಂ.ಎಲ್ ನ ಶೇ. 46 ಶೇರು ರಿಲಾಯನ್ಸ್ ಗೆ ಈಗಾಗಲೇ ಕೊಡಲಾಗಿದೆ. ಇನ್ನೂ ಶೇ. 25 ಕೊಟ್ಟು ಪೂರ್ತಿ ಅಂಬಾನಿ ನಿಯಂತ್ರಣಕ್ಕೆ ಕೊಡುವ ಹುನ್ನಾರ ನಡೆದಿದೆ. ಮಾತ್ರವಲ್ಲ, ಮೋದಿ ಸರಕಾರ ಸಾರ್ವಜನಿಕ ಉದ್ಯಮಗಳ ನಾಶಕ್ಕೆ ಸಮಗ್ರ ದೂರಗಾಮಿ ಸ್ಕೆಚ್ ಹಾಕಿದೆ. ಪ್ರಧಾನಿ ನೆಹರೂ "ಆಧುನಿಕ ದೇವಾಲಯಗಳು" ಎಂದು ಕರೆದಿದ್ದ ಸಾರ್ವಜನಿಕ ಉದ್ಯಮಗಳನ್ನು ನಾಶ ಮಾಡಿ "ಪ್ರಾಚೀನ ದೇವಾಲಯ"ಗಳನ್ನು ಕಟ್ಟುವ ಈ ಸರ್ಕಾರದ ಅಜೆಂಡಾ ವಿರುದ್ಧ ಪ್ರಜ್ಞಾವಂತ ಕಾರ್ಮಿಕರು ಸಿಡಿದೆದ್ದಿದ್ದಾರೆ. ಬೆಂಗಳೂರಿನಲ್ಲಿ ಗೇಟ್ ಮೀಟಿಂಗುಗಳು, ಸೇಲಂ ಸ್ಟೀಲ್ ನಲ್ಲಿ ಮುಷ್ಕರ, ಭಿಲಾಯಿಯಲ್ಲಿ 'ಸೈಲ್ ಖಾಸಗೀಕರಣದ ವಿರುದ್ಧ ಸಮಾವೇಶ' ನಡೆದಿವೆ. ಈ ಚಳುವಳಿ ಇನ್ನಷ್ಟು ವ್ಯಾಪಕ, ಆಳ ಮತ್ತು ತೀವ್ರಗೊಳ್ಳುವ ಸೂಚನೆಗಳು ಕಂಡು ಬಂದಿವೆ.





ನಮ್ಮ ಮೊದಲ ಪ್ರಧಾನಿ ನೆಹರೂ ಸಾರ್ವಜನಿಕ ಉದ್ಯಮಗಳನ್ನು 1954ರಲ್ಲಿ "ಆಧುನಿಕ ದೇವಾಲಯಗಳು" ಎಂದು ಕರೆದಿದ್ದರು. 60 ವರ್ಷಗಳ ನಂತರ ಈಗಿನ ಪ್ರಧಾನಿ ಅಕ್ಟೋಬರ್ 2014ರಲ್ಲಿ ಅಮೆರಿಕ ಭೇಟಿಯ ಸಂದರ್ಭದಲ್ಲಿ "ಯಾವುದೇ ಉದ್ಯಮದಲ್ಲಿ ತೊಡಗುವುದು ಸರಕಾರದ ಕೆಲಸವಲ್ಲ" (Government Has No Business Being in Business) ಎಂದರು. ನಮ್ಮ ದೇಶದ್ಲ ಕೈಗಾರಿಕೀಕರಣದಲ್ಲಿ ಮತ್ತು ಒಟ್ಟಾರೆ ಅಭಿವೃದ್ಧಿಯಲ್ಲಿ ಸಾರ್ವಜನಿಕ ಉದ್ಯಮಗಳು ಮಹತ್ವದ ಪಾತ್ರ ನಿರ್ವಹಿಸಿವೆ. ಈಗಲೂ ಕೈಗಾರಿಕಾ ಉತ್ಪಾದನಾ ಕ್ಷೇತ್ರದಲ್ಲಿ ಮತ್ತು ಸರಕಾರದ ಆದಾಯದಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ (ವಿವರಗಳಿಗೆ ಬಾಕ್ಸ್ ನೋಡಿ). ಮಾತ್ರವಲ್ಲ ಸ್ವಾವಲಂಬಿ ಬೆಳವಣಿಗೆಯ ಸಾಧ್ಯತೆಯನ್ನು ಸ್ವಲ್ಪಮಟ್ಟಿಗಾದರೂ ಸಾಕಾರಗೊಳಿಸುವಲ್ಲಿ ಸಹಾಯಕವಾಗಿವೆ. ಇಂದು ಭಾರತ ಸಾಫ್ಟ್ ವೇರ್ "ಸೂಪರ್ ಪವರ್" (ಅದು ಪೂರ್ತಿ ನಿಜವಲ್ಲದಿದ್ದರೂ) ಆಗಿದ್ದರೆ, ಪ್ರದಾನಿ ಮೋದಿ "ಸೂಪರ್ ಪವರ್" ಆಗುವ ಕನಸು ಕಾಣಲು ಸಾಧ್ಯವಾಗಿರುವುದು ದೇಶ ಸಾಧಿಸಿದ ಒಂದು ಹಂತದ ಅಭಿವೃದ್ಧಿಯ ಹಿಂದೆಯೂ ಸಾರ್ವಜನಿಕ ಉದ್ಯಮಗಳ ಪಾತ್ರ ಇದೆ. ವಿದೇಶೀ ಮತ್ತು ದೇಶಿ ಗುತ್ತೇದಾರಿ ಬಂಡವಾಳವನ್ನು ಸಂಪ್ರೀತಗೊಳಿಸಲು, ಅಂತಹ ಸಾರ್ವಜನಿಕ

ನೆಪಗಳನ್ನು ಹೇಳಿ ಮುಚ್ಚುವುದು, ಖಾಸಗೀಕರಣ, ಹೂಡಿಕೆ ವಾಪಸು ತೆಗೆದುಕೊಳ್ಳುವುದು ಮುಂತಾದ ತರಹೆವಾರಿ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಬಜೆಟ್ ಗೆ ಹಣ ಒದಗಿಸಲು ಅಗತ್ಯ ಎಂಬ ವಾದದ ಮೇಲೆ ಸಾರ್ವಜನಿಕ ಉದ್ಯಮಗಳ ಶೇರು ಮಾರಾಟ ಮತ್ತು ಆ ಮೂಲಕ ಅದನ್ನು ದುರ್ಬಲಗೊಳಿಸುವುದು ಹಲವು ವರ್ಷಗಳಿಂದ ಬಜೆಟ್‌ನ ಭಾಗವಾಗಿಬಿಟ್ಟಿದೆ. "ಆಧುನಿಕ ದೇವಾಲಯ'ಗಳನ್ನು ನಾಶ ಮಾಡಿ "ಪ್ರಾಚೀನ ದೇವಾಲಯ"ಗಳನ್ನು ಕಟ್ಟುವುದು ಈ ಸರಕಾರದ ಅಜೆಂಡಾ ಅಂತ ಕಾಣ್ತದೆ.

ನವರತ್ನ/ಮಹಾರತ್ನ ನಾಶಕ್ಕೆ ಇ.ಟಿ.ಎಫ್. 'ಬಿಡ್'

ಇತ್ತೀಚೆಗೆ ಎಕ್ಸ್ ಚೇಂಜ್ ಟ್ರೇಡೆಡ್ ಫಂಡ್ (ಇ.ಟಿ.ಎಫ್.) ಎಂಬ ಹೊಸ ಸಾಧನವನ್ನು ಸರಕಾರ ಆಕ್ರಾಮಕವಾಗಿ ಬಳಸಿಕೊಳ್ಳುತ್ತಿದೆ. ಪ್ರಮುಖ ಕಮರ್ಶಿಯಲ್ ಮತ್ತು ಆಡಳಿತಾತ್ಮಕ ಉಪಕ್ರಮಗಳನ್ನು ಬೈಪಾಸ್ ಮಾಡಿ ಹಾಗೂ ಸಾರ್ವಜನಿಕ ಉದ್ಯಮಗಳ ಹಿತಾಸಕ್ತಿಗಳನ್ನು ಬಲಿ ಕೊಟ್ಟು ಸರಕಾರಕ್ಕೆ ಮಾರಾಟದ ಹಣವನ್ನು ಶೀಘ್ರವಾಗಿ ತಂದು ಕೊಡುವ ಈ ದುಷ್ಟ ಯೋಜನೆಯಲ್ಲಿ 10 ನವರತ್ನ/ಮಹಾರತ್ನ ಕಂಪನಿಗಳನ್ನು ಸೇರಿಸಲಾಗಿದೆ. ರೂ.13,726 ಕೋಟಿ ರೂ.ಗಳ ಇ.ಟಿ.ಎಫ್. 'ಬಿಡ್'ಗಳನ್ನು ಸರಕಾರ ತಯಾರಿಸಿದೆಯಂತೆ. ಮಹಾರತ್ನ/ನವರತ್ನ ಕಂಪನಿಗಳು ಲಾಭದಾಯಕವಾಗಿರುವ, ಚೆನ್ನಾಗಿ ನಡೆಯುತ್ತಿರುವ ಹಾಗೂ ವ್ಯೂಹಾತ್ಮಕವಾಗಿಯೂ ಪ್ರಮುಖವಾಗಿರುವ ಕಂಪನಿಗಳು. ಇವುಗಳನ್ನು ಯಾವುದೇ ರೀತಿಯಲ್ಲಿ ದುರ್ಬಲಗೊಳಿಸಬಾರದು ಎಂಬುದು ಈ ವರೆಗಿನ ಆಶಯವಾಗಿತ್ತು. ಈ ಇ.ಟಿ.ಎಫ್. 'ಬಿಡ್' ಪಟ್ಟಿಯಲ್ಲಿ ಒ.ಎನ್.ಜಿ.ಸಿ. ಜಿ.ಎ.ಐ.ಎಲ್., ಒಯಿಲ್ ಇಂಡಿಯಾ, ಇಂಡಿಯನ್ ಒಯಿಲ್(ಪ್ರಮುಖ ತೈಲ ಪ್ರಾಕೃತಿಕ ಗ್ಯಾಸ್ ಉತ್ಪಾದನಾ ವಿತರಣಾ ಕಂಪನಿಗಳು), ಕೋಲ್ ಇಂಡಿಯಾ, ಆರ್.ಇ.ಸಿ., ಪವರ್ ಫೈನಾನ್ಸ್ ಕಾರ್ಪೊರೇಶನ್, ಕಂಟೈನರ್ ಕಾರ್ಪೊರೇಶನ್, ಭಾರತ ಇಲೆಕ್ಟ್ರಾನಿಕ್ಸ್, ಇಂಜಿನೀಯರ್ಸ್ ಇಂಡಿಯಾ – ಇವೇ ಆ 10 ಕಂಪನಿಗಳು. ಮೋದಿ ಸರಕಾರ ಈ ನವರತ್ನ/ಮಹಾರತ್ನ ಕಂಪನಿಗಳ ಖಾಸಗಿಕರಣ ಮಾಡುವ 'ಪ್ರಾಜೆಕ್ಟ್' ನಿರ್ವಹಿಸುವ ಜವಾಬ್ದಾರಿ ವಹಿಸಿರುವುದು ಅಂಬಾನಿ ಸಾಮ್ರಾಜ್ಯದ ಕಂಪನಿ 'ರಿಲಾಯನ್ಸ್ ಮ್ಯುಚುವಲ್ ಫಂಡ್'ಗೆ ಎಂಬುದು ಭೀಕರ ವ್ಯಂಗ್ಯದ ವಿಷಯ.

10 ವರ್ಷಗಳ ಎನ್.ಐ.ಪಿ.ಎಫ್.ಪಿ. ಸ್ಕೆಚ್

ಸಾರ್ವಜನಿಕ ಉದ್ಯಮಗಳ ನಾಶ ಮಾಡಲು ಬಹಳ ದೂರಗಾಮಿ ಸ್ಕೆಚ್ ಹಾಕಿದೆ ಮೋದಿ ಸರ್ಕಾರ. ಇತ್ತೀಚೆಗೆ ಇಂತಹ ಒಂದು ಸ್ಕೆಚ್ ಬಹಿರಂಗವಾಗಿದೆ. ಸರಕಾರವೇ ಪ್ರಾಯೋಜಿಸಿ ಧನಸಹಹಾಯ ಮಾಡುತ್ತಿರುವ ಎನ್.ಐ.ಪಿ.ಎಫ್.ಪಿ.(ಸಾರ್ವಜನಿಕ ಹಣಕಾಸು ಮತ್ತು ನೀತಿಯ ರಾಷ್ಟ್ರೀಯ ಸಂಸ್ಥೆ) ಎಂಬ ಸಂಸ್ಥೆ ಸರಕಾರಕ್ಕೆ ಸಲ್ಲಿಸಿದ ವರದಿಯಲ್ಲಿ ಇಂತಹ ಸ್ಕೆಚ್ ಇದೆ. "ವಾರ್ಷಿಕ ಗುರಿಗಳನ್ನು ಆಧರಿಸಿದ ಈಗಿನ ತಾತ್ಕಾಲಿಕ ಯೋಜನೆ ಸಾಲದು. 17 ನವರತ್ನಗಳು, 73 ಮಿನಿರತ್ನಗಳು ಮತ್ತು ರತ್ನಗಳೂ ಅಲ್ಲದ 140 ಸಣ್ಣ ಸಾರ್ವಜನಿಕ ಉದ್ಯಮಗಳ ಆಕ್ರಾಮಕ ಖಾಸಗೀಕರಣದ ಯೋಜನೆ ಬೇಕು." ಎಂದಿದೆ ಈ ವರದಿ. 10 ವರ್ಷಗಳಲ್ಲಿ ಸಾರ್ವಜನಿಕ ಉದ್ಯಮದ ಅರ್ಧದಷ್ಟು ಆಸ್ತಿ ಖಾಸಗೀಕರಿಸುವ ಯೋಜನೆಯನ್ನು ಅದು ಶಿಫಾರಸು ಮಾಡಿದೆ. ಆಗ ಮಾತ್ರ ಈಗಿನ ಪ್ರಧಾನಿ ಮೋದಿಯವರ "ಯಾವುದೇ ಉದ್ಯಮದಲ್ಲಿ ತೊಡಗುವುದು ಸರಕಾರದ ಕೆಲಸವಲ್ಲ" ಎಂಬ ಘೋಷಣೆಯನ್ನು ಪೂರ್ತಿಯಾಗಿ ಜಾರಿಗೆ ತರಲು ಸಾಧ್ಯ ಎಂದೂ ವರದಿ ಹೇಳಿದೆ. ನೀತಿ ಆಯೋಗ ಹಲವು 'ರತ್ನ'ಗಳು ಸೇರಿದಂತೆ 73 ಸಾರ್ವಜನಿಕ ಉದ್ಯಮಗಳ ಖಾಸಗೀಕರಣಕ್ಕೆ ಈಗಾಗಲೇ ಶಿಫಾರಸು ಮಾಡಿದೆ ಎಂದು ಇಲ್ಲಿ ನೆನಸಿಕೊಳ್ಳಬಹುದು.

ಎನ್.ಐ.ಪಿ.ಎಫ್.ಪಿ.ನ ಈ ಸ್ಕೆಚ್ ಪ್ರಕಾರವೇ ಸರಕಾರ 20 ಉದ್ಯಮಗಳ ಮಾರಾಟ ಮತ್ತು ಹಲವು ಉದ್ಯಮಗಳನ್ನು ಮುಚ್ಚಲು ನಿರ್ಧರಿಸಿದೆ. ಬೆಂಗಳೂರು, ಕೋಲಾರ, ಮೈಸೂರುಗಳಲ್ಲಿ ಕಾರ್ಖಾನೆಗಳನ್ನು ಹೊಂದಿರುವ ಕರ್ನಾಟಕದ ಹೆಮ್ಮೆಯ ಬಿ.ಇ.ಎಂ.ಎಲ್.ನ ಶೇ. 46 ರಷ್ಟು ಶೇರುಗಳನ್ನು ಈಗಾಗಲೇ ಅಂಬಾನಿಯ ರಿಲಾಯನ್ಸ್ ಗೆ ಮಾರಲಾಗಿದೆ. ಈಗ ಇನ್ನೂ ಶೇ. 25 ಶೇರುಗಳನ್ನು ಅವರಿಗೆ ಮಾರಲು ಯೋಜಿಸಿದೆ. ಅಂದರೆ ಅದನ್ನು ಪೂರ್ಣವಾಗಿ ಅಂಬಾನಿಗೆ ಒಪ್ಪಿಸಿ ಖಾಸಗೀಕರಿಸಿದಂತೆ. ಇನ್ನೊಂದು ದೇಶದ ಹೆಮ್ಮೆಯಾಗಿದ್ದ 'ನವರತ್ನ' ಸಾರ್ವಜನಿಕ ಉದ್ಯಮ 'ಸೈಲ್' (SAIL – ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ ಲಿ.) ದ ಮೇಲೂ ದಾಳಿ ಆರಂಭವಾಗಿದೆ. ಸೇಲಂ, ದುರ್ಗಾಪುರ ಮತ್ತು ನಮ್ಮ ಭದ್ರಾವತಿಯ 'ಸೈಲ್' ಕಾರ್ಖಾನೆಗಳ ಮಾರಾಟಕ್ಕೆ ಸರಕಾರ ಆಗಲೇ ನಿರ್ಧರಿಸಿದೆ. ಸಾರ್ವಜನಿಕ ಕ್ಷೇತ್ರದಲ್ಲಿರುವ ಐದು ಸಾಮಾನ್ಯ ವಿಮೆ ಕಂಪನಿಗಳ ಶೇ. 25 ಶೇರುಗಳ ಮಾರಾಟಕ್ಕೆ ನಿರ್ಧರಿಸಿದೆ. ಬೇಗನೇ ಈ ಐದು ಸಾಮಾನ್ಯ ವಿಮೆ ಕಂಪನಿಗಳ ಖಾಸಗೀಕರಣ ಸರಕಾರದ ಸ್ಕೆಚ್ ಎಂದು ತಿಳಿದು ಬಂದಿದೆ. ರಾಸಾಯನಿಕಗಳು ಮತ್ತು ಔಷದಿಗಳ ಉತ್ಪಾದನೆಯಲ್ಲಿ ಪ್ರಮುಖ ಉದ್ಯಮಗಳಾಗಿದ್ದ ಐ.ಡಿ.ಪಿ.ಎಲ್., ಆರ್.ಡಿ.ಪಿ.ಎಲ್., ಹಿಂದುಸ್ತಾನ್ ಆಚಿಟಿಬಯೋಟಿಕ್ಸ್ ಮತ್ತು ಬೆಂಗಾಲ್ ಕೆಮಿಕಲ್ಸ್ ಗಳನ್ನು ಮುಚ್ಚಲು ಸರಕಾರ ನಿರ್ಧರಿಸಿದೆ.

ಎ.ಐ.ಎಫ್.ಆರ್./ಬಿ.ಐ.ಎಫ್.ಆರ್. ಬಂದ್

ಹಲವು ಕಾರಣಗಳಿಗೆ ನಷ್ಟದಲ್ಲಿ ನಡೆಯುತ್ತಿದ್ದ ಹಲವು ಸಾರ್ವಜನಿಕ ಉದ್ಯಮಗಳ ಪುನಶ್ಚೇತನಕ್ಕೆ ಬೇಕಾದ ಆರ್ಥಿಕ, ನಿರ್ವಹಣಾ ತಾಂತ್ರಿಕ ನೆರವು ಒದಗಿಸಲು ಹಿಂದೆ ಎ.ಐ.ಎಫ್.ಆರ್. ಮತ್ತು ಬಿ.ಐ.ಎಫ್.ಆರ್. ಎಂಬ ಎರಡು ಸಂಸ್ಥೆಗಳನ್ನು ಸರಕಾರ ರಚಿಸಿತ್ತು. ಯಾವುದೇ ಉದ್ಯಮ ಪುನಶ್ಚೇತನ ಸಾಧ್ಯವಿಲ್ಲ ಎಂದು ಈ ಎರಡು ಸಂಸ್ಥೆಗಳು ಹೇಳಿದ ಮೇಲೆನೇ ಆ ಉದ್ಯಮವನ್ನು ಮುಚ್ಚುವ ನಿರ್ಧಾರ ಕೈಗೊಳ್ಳಲಾಗುತ್ತಿತ್ತು. ಈಗ ಮೋದಿ ಸರಕಾರ ಈ ಎರಡೂ ಸಂಸ್ಥೆಗಳನ್ನೇ ಮುಚ್ಚಲು ನಿರ್ಧರಿಸಿದ್ದು, ಲಕ್ಷಾಂತರ ಕಾರ್ಮಿಕರು ಕೆಲಸ ಮಾಡುತ್ತಿರುವ ದೇಶದ ಉತ್ಪಾದಕ ಸಾಮರ್ಥ್ಯ ಉಳಿಸಿ ಬೆಳೆಸುವ ಬಗ್ಗೆ ಈ ಸರ್ಕಾರಕ್ಕೆ ಯಾವುದೇ ಕಾಳಜಿ ಇಲ್ಲ ಎಂಬುದನ್ನು ತೋರಿಸುತ್ತದೆ. ಹಿಂದಿನ ಸರ್ಕಾರಗಳು ಕಟ್ಟಿ ಬೆಳೆಸಿದ್ದ ಉದ್ಯಮಗಳನ್ನು ಶೀಘ್ರಾತಿಶೀಘ್ರವಾಗಿ ಮೂರು ಕಾಸಿಗೆ ಮಾರಿಕೊಳ್ಳುವ ಆತುರದಿಂದಾಗಿಯೇ ಈ ಅನರ್ಥದ ನಿರ್ಧಾರ.

ಇದು ಸಾಲದೆಂಬಂತೆ ದೇಶದ ಭದ್ರತೆ, ಸ್ವಾವಲಂಬನೆ, ಸ್ವಾತಂತ್ರ್ಯಕ್ಕೆ ಅಗತ್ಯವಾದ ಸೂಕ್ಷ್ಮ ಕ್ಷೇತ್ರಗಳಾದ ರಕ್ಷಣೆ, ಕಲ್ಲಿದ್ದಲು, ತೈಲ, ಗಣಿ, ವಿದ್ಯುತ್, ಟೆಲಿಸಂಪರ್ಕ, ನಾಗರಿಕ ವಿಮಾನಯಾನ, ಉಪಗ್ರಹಗಳು, ವಿಮೆ, ಪೆನ್ಶನ್ ಫಂಡ್, ಬ್ಯಾಂಕಿಂಗ್, ರೈಲ್ವೇ, ಔಷಧಿ ಮುಂತಾದ ಕ್ಷೇತ್ರಗಳಲ್ಲಿ ಶೇ. 100 ವಿದೇಶಿ ಹೂಡಿಕೆಗೆ ಅವಕಾಶ ಮಾಡಿಕೊಟ್ಟಿದ್ದು ಈ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಾರ್ವಜನಿಕ ಉದ್ಯಮಗಳಿಗೆ ಮಾರಕವಾಗಲಿದೆ. ಈ ಕ್ಷೇತ್ರಗಳಲ್ಲಿ ಸಾರ್ವಜನಿಕ ಉದ್ಯಮಗಳನ್ನು ದುರ್ಬಲಗೊಳಿಸಿ ನಾಶ ಮಾಡುವುದರ ಜತೆಗೆ, ದೇಶದ ಭದ್ರತೆ, ಸ್ವಾವಲಂಬನೆ, ಸ್ವಾತಂತ್ರ್ಯಕ್ಕೆ ಅಗತ್ಯವಾದ ನಿಯಂತ್ರಣವನ್ನು ದೇಶ ಕಳೆದುಕೊಂಡು ವಿದೇಶೀ ಶಕ್ತಿಗಳ ಕಪಿಮುಷ್ಟಿಯಲ್ಲಿ ಸಿಕ್ಕಲಿದೆ.

ಪ್ರತಿಭಟನೆ ಹೋರಾಟ

ಇದು ಸ್ವಾಭಾವಿಕವಾಗಿಯೇ ಪ್ರಜ್ಞಾವಂತ ಸಾರ್ವಜನಿಕ ಉದ್ಯಮದ ಕಾರ್ಮಿಕರನ್ನು ರೊಚ್ಚಿಗೆಬ್ಬಿಸಿದೆ. ಸಾರ್ವಜನಿಕ ಉದ್ಯಮಗಳನ್ನು ದುರ್ಬಲಗೊಳಿಸಿ ನಾಶ ಮಾಡುವ ಈ ನೀತಿಗಳ ವಿರುದ್ಧ ಪ್ರತಿಭಟನೆ ಹೋರಾಟ ಆರಂಭಿಸಿದೆ. 'ಸೈಲ್' ಖಾಸಗೀಕರಣದ ವಿರುದ್ಧ ಸೇಲಂ ಸ್ಟೀಲ್ ಕಾರ್ಖಾನೆಯಲ್ಲಿ ಒಂದು ದಿನದ ಮುಷ್ಕರ ಹೂಡಲಾಗಿದೆ. ಜನವರಿ 20ರಂದು ಭಿಲಾಯಿ ಯಲ್ಲಿ 'ಸೈಲ್' ಕಾರ್ಮಿಕರ ಅಖಿಲ ಭಾರತ ಸಮಾವೇಶ ನಡೆದಿದೆ. ಬೆಂಗಳೂರಿನ ಕೇಂದ್ರೀಯ ಸಾರ್ವಜನಿಕ ಉದ್ಯಮಗಳ ಕಾರ್ಮಿಕ ಸಂಘಗಳ ಒಕ್ಕೂಟ ಜೆ.ಎ.ಎಫ್., ಬೆಂಗಳೂರಿನ ಹಲವು ಉದ್ಯಮಗಳಲ್ಲಿ ಗೇಟ್ ಮೀಟಿಂಗ್ ಮುಂತಾದ ಪ್ರತಿಭಟನಾ ಚಟುವಟಿಕೆ ನಡೆಸಿದೆ. ಮುಂದಿನ ದಿನಗಳಲ್ಲಿ ನಗರದ ಮತ್ತು ದೇಶದ ಎಲ್ಲಾ ಕೇಂದ್ರೀಯ ಸಾರ್ವಜನಿಕ ಉದ್ಯಮಗಳ ಕಾರ್ಮಿಕ ಸಂಘಗಳ ಒಕ್ಕೂಟ ಈ ಪ್ರತಿಭಟನಾ ಚಳುವಳಿಯನ್ನು ಇನ್ನಷ್ಟು ವ್ಯಾಪಕ, ಆಳ ಮತ್ತು ತೀವ್ರಗೊಳಿಸುವ ಸೂಚನೆಗಳು ಕಂಡು ಬಂದಿವೆ. ಕೇಂದ್ರೀಯ ಸಾರ್ವಜನಿಕ ಉದ್ಯಮಗಳಲ್ಲಿ ವೇತನ ಪರಿಷ್ಕರಣೆ ಈ ವರ್ಷದ ಜನವರಿ 1 ರಿಂದ ಆಗಬೇಕಿದ್ದು, ಅದರ ಬಗ್ಗೆ ಹಕ್ಕೊತ್ತಾಯಗಳ ಮಂಡನೆ ಜತೆಗೆ ಖಾಸಗೀಕರಣ ಮತ್ತು ಇತರ ವಿನಾಶಕಾರಿ ನೀತಿಗಳನ್ನು ನಿಲ್ಲಿಸಲು ಒತ್ತಾಯ ಬಹುಶಃ ಸೇರಿಕೊಳ್ಳಲಿದೆ.

ಕೇಂದ್ರೀಯ ಸಾರ್ವಜನಿಕ ಉದ್ಯಮಗಳ ವಹಿವಾಟಿನ ಪಕ್ಷಿನೋಟ

(ಮೂಲ: ಸಿ.ಎ.ಜಿ. ವರದಿ 2014–15)

ಒಟ್ಟು ಉದ್ಯಮಗಳು	396 *
ಒಟ್ಟು ಹೂಡಿರುವ ಬಂಡವಾಳ (365 ಉದ್ಯಮಗಳಲ್ಲಿ)	3.52 ಲಕ್ಷ ಕೋಟಿ ರೂ.
ದೂರಗಾಮಿ ಸಾಲಗಳು (365 ಉದ್ಯಮಗಳಲ್ಲಿ)	9.81 ಲಕ್ಷ ಕೋಟಿ ರೂ.
ಒಟ್ಟು ಮಾರುಕಟ್ಟೆ ಮೌಲ್ಯ	13.27 ಲಕ್ಷ ಕೋಟಿ ರೂ.
ಒಟ್ಟು ಲಾಭ (205 ಉದ್ಯಮಗಳಿಂದ)	1.37 ಲಕ್ಷ ಕೋಟಿ ರೂ.
ಒಟ್ಟು ನಷ್ಟ (135 ಉದ್ಯಮಗಳಿಂದ)	30 ಸಾವಿರ ಕೋಟಿ ರೂ.
ಘೋಷಿಸಿರುವ ಡಿವಿಡೆಂಡು (112 ಉದ್ಯಮಗಳಿಂದ)	58 ಸಾವಿರ ಕೋಟಿ ರೂ.
ಒಟ್ಟು ಆಸ್ತಿ (365 ಉದ್ಯಮಗಳದ್ದು)	34.74 ಲಕ್ಷ ಕೋಟಿ ರೂ.
ಒಟ್ಟು ಉತ್ಪಾದನಾ ಮೌಲ್ಯ (365 ಉದ್ಯಮಗಳದ್ದು)	15.02 ಲಕ್ಷ ಕೋಟಿ ರೂ.
ನಿವ್ವಳ ಮೌಲ್ಯ (365 ಉದ್ಯಮಗಳದ್ದು)	12.54 ಲಕ್ಷ ಕೋಟಿ ರೂ.

* ಒಟ್ಟು 570 ಸಾರ್ವಜನಿಕ ಉದ್ಯಮಗಳಿವೆ. ಅವುಗಳಲ್ಲಿ 396 ಸಿ.ಎ.ಜಿ, ಆಡಿಟ್ ಗೆ ಒಳಪಡುತ್ತವೆ. ವಿವಿಧ ಕಾರಣಗಳಿಗಾಗಿ 365 ಉದ್ಯಮಗಳ ವಿವರಗಳು ಮಾತ್ರ ಆಡಿಟ್ ವರದಿಯಲ್ಲಿವೆ.

JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**